
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


09 ನವೆಂಬರ್ 2016 ಪುಟ 20 ರೂ. 15/-



ಟಿಪ್ಪೂಗೆ ನೀಲ್ ಸಲಾಂ



ಬೆಚ್ಚಿಬಿದ್ದ ಪುಂಡ ಪಡೆ



ಪ್ರೀತಿಯೆ ಬಂಧನ


ನಂಜನಗೂಡು ಸಿದ್ದು 'ಮಹಾ' ಪ್ರಸಾದ



ಪಾಪಿಗಳ ಜಾತ್ರೆ

ಕೊಪ್ಪಳ ಶವ ಪೆಟ್ಟಿಗೆಯತ್ತ ಕಾಂಗ್ರೆಸ್

ಬರ, ಬರ ಪರಿಹಾರ ಮತ್ತು ಬರ ನಿರ್ವಹಣೆ ಕುರಿ



ಡಾ.ವಾಸು ಎಚ್.ವಿ.

ಸತತ ಎರಡನೇ ವರ್ಷದ ಬರಕ್ಕೆ ತುತ್ತಾಗಿರುವ ಕರ್ನಾಟಕ ರಾಜ್ಯದ ಗ್ರಾಮೀಣ ಭಾಗವು ಬಿಕ್ಕಟ್ಟಿನಲ್ಲಿ ಒದ್ದಾಡುತ್ತಿದೆ. ಈ ಸಂದರ್ಭದಲ್ಲಿ ಬರ ಪರಿಸ್ಥಿತಿಯ ಕುರಿತ ಒಂದು ವಿಶ್ಲೇಷಣೆಯನ್ನು ಮುಂದಿಡುವ ಅಗತ್ಯವಿದೆ.

ಬರ ಎಂದರೆ ಏನು?

ಸತತ ನಾಲ್ಕು ವಾರಗಳ ಕಾಲ ವಾಡಿಕೆಯ ಮಳೆ ಪ್ರಮಾಣದಲ್ಲಿ ಶೇ.50ಕ್ಕಿಂತ ಕಡಿಮೆ ಮಳೆ ಬಿದ್ದರೆ ಅಥವಾ ಮೇ ಮಧ್ಯಭಾಗದಿಂದ ಅಕ್ಟೋಬರ್ ಮಧ್ಯಭಾಗದಲ್ಲಿ (ಮುಂಗಾರು) ವಾರಕ್ಕೆ 5 ಸೆಂ.ಮೀ.ಗಿಂತ ಕಡಿಮೆ ಬಿದ್ದರೆ ಅಥವಾ ವರ್ಷದ ಉಳಿದ ಅವಧಿಯಲ್ಲಿ ಸತತ 6 ವಾರಗಳ ಕಾಲ ಹೀಗಾದರೆ ಅದನ್ನು ಬರ ಎಂದು ಕರೆಯಲಾಗುತ್ತದೆ. ಮೇ ಮಧ್ಯಭಾಗದಿಂದ ಅಕ್ಟೋಬರ್ ಮಧ್ಯಭಾಗದ ಮಳೆ ಬಹಳ ಮುಖ್ಯ ಏಕೆಂದರೆ ದೇಶದ ಒಟ್ಟಾರೆ ಬೆಳೆಯಲ್ಲಿ ಶೇ.80ರಷ್ಟನ್ನು ಈ ಅವಧಿಯಲ್ಲೇ ಬಿತ್ತನೆ ಮಾಡಲಾಗುತ್ತದೆ. ಮಳೆಯ ಪ್ರಮಾಣವನ್ನು ಅಳೆಯಲು ವಿವಿಧ ಜಾಗಗಳಲ್ಲಿ ಮಳೆ ಮಾಪಕ ಯಂತ್ರಗಳಿವೆ. ಅವುಗಳಿಂದ ಸರ್ಕಾರಕ್ಕೆ ಕಾಲಕಾಲಕ್ಕೆ ಮಾಹಿತಿ ಹೋಗುತ್ತಿರುತ್ತದೆ.

ಇವೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡೇ ಬರಪೀಡಿತ ಪ್ರದೇಶ ಘೋಷಣೆಯಾಗುತ್ತದೆ ಮತ್ತು ಅದರಂತೆ ರೈತರಿಗೆ ಪರಿಹಾರ ವಿತರಣೆ ಆಗುತ್ತದೆಯೆಂದೂ, ಎಲ್ಲವೂ ವೈಜ್ಞಾನಿಕವಾಗಿಯೇ ನಡೆಯುತ್ತಿದೆಯೆಂದೂ ಭಾವಿಸಿದರೆ ಅದು ವಾಸ್ತವವಲ್ಲ, ಉದಾಹರಣೆಗೆ ಮಂಡ್ಯ ಜಿಲ್ಲೆಯನ್ನು ತೆಗೆದುಕೊಳ್ಳೋಣ. ಇಲಾಖೆಯ ಅಧಿಕೃತ ಲೆಕ್ಕದ ಪ್ರಕಾರ ಈ ಆಗಸ್ಟ್ ತಿಂಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ವಾಡಿಕೆಗಿಂತ 'ಅಧಿಕ' ಮಳೆ ಬಿದ್ದಿದೆ! ವಾಸ್ತವದಲ್ಲಿ ಬಿತ್ತನೆಯು (ಆಗಸ್ಟ್ 22ರ ಮಾಹಿತಿಯ ಪ್ರಕಾರ) ಜಿಲ್ಲೆಯಲ್ಲಿ ವಾಡಿಕೆಯ ಪ್ರಮಾಣಕ್ಕೆ ಹೋಲಿಸಿದರೆ ಶೇ.25ಕ್ಕಿಂತ ಕಡಿಮೆಯಾಗಿತ್ತು, ಏಕೆಂದರೆ, ಸಾಮಾನ್ಯವಾಗಿ ಈ ತಿಂಗಳಲ್ಲಿ ಬೀಳುತ್ತಿದ್ದ ದೈನಂದಿನ ಮಳೆ 2ರಿಂದ 3 ಮಿ.ಮೀ. ಆಗಿದ್ದರೆ, ಈ ಸಾರಿ ಎಲ್ಲಾ ದಿನಗಳಲ್ಲೂ 1 ಮಿ.ಮೀ.ಗಿಂತ ಕಡಿಮೆಯಾಗಿತ್ತು, ಆದರೆ, ಆಗಸ್ಟ್ 27 ಮತ್ತು 30ರಂದು ಸ್ವಲ್ಪ ಹೆಚ್ಚು ಬಿದ್ದಿದ್ದಲ್ಲದೇ, ಆಗಸ್ಟ್ 31ರ ಒಂದೇ ದಿನ 34 ಮಿ.ಮೀ. ಮಳೆ ಬಿದ್ದಿತು. ಈ ರೀತಿ ಬಿದ್ದ ಮಳೆಯಿಂದ ಅಣೆಕಟ್ಟೆಗೂ ನೀರು ಬರಲಿಲ್ಲ, ಎಲ್ಲಾ ಕಡೆಯ ಕೆರೆ-ಕಟ್ಟೆಗಳಿಗೂ ನೀರು ಬರಲಿಲ್ಲ, ಬಿತ್ತನೆಗೆ ಬೇಕಾದ ರೀತಿಯಲ್ಲಿ ಗದ್ದೆಗಳಲ್ಲೂ ನೀರು ತುಂಬಿಕೊಳ್ಳಲಿಲ್ಲ, ಆದರೆ, ತಿಂಗಳ ಲೆಕ್ಕಕ್ಕೆ ಮಾತ್ರ ಸರಾಸರಿಗಿಂತ ಸ್ವಲ್ಪ ಹೆಚ್ಚೇ ಮಳೆ ಬಿದ್ದಿತ್ತು ಆದರೂ ಜಿಲ್ಲೆಗಳಿಂದ ಬರವಿದೆ ಎಂದು ಸರ್ಕಾರಕ್ಕೆ ವರದಿ ಹೋಗಿದೆ. ಸರ್ಕಾರವೂ ಈಗಾಗಲೇ ರಾಜ್ಯದ 110 ತಾಲೂಕುಗಳಲ್ಲಿ ಬರವಿದೆ ಎಂದು ಘೋಷಿಸಿದೆ.

ಇನ್ನು ಸರ್ಕಾರದ ನೀತಿ ಏನಿದೆ ಎಂಬುದರ ಕುರಿತು ನಾವೇನೂ ಹೇಳಲು ಹೋಗುವುದಿಲ್ಲ, ಸಂಸತ್ತಿನಲ್ಲಿ ಸ್ವತಃ ಕೇಂದ್ರ ಮಂತ್ರಿಗಳು ಎಂಪಿಗಳಿಗೆ ಕೊಟ್ಟ ಉತ್ತರವನ್ನು ಇಲ್ಲಿ ಅನುವಾದ ಮಾಡಿ ನೀಡಲಾಗಿದೆ; ಅದನ್ನು ಓದಿ. ಆವರಣದಲ್ಲಿ ಕೊಟ್ಟಿರುವುದು ನಮ್ಮ ವಿವರಣೆ.

13.08.2014ರಂದು ರಾಜ್ಯಸಭೆಯಲ್ಲಿ ಕೇಂದ್ರ ಗೃಹಖಾತೆ ರಾಜ್ಯ ಸಚಿವ ಕಿರಣ್ ರಿಜಿಜು ನೀಡಿದ ಉತ್ತರವಿದು. 'ರಾಜ್ಯ ಅಥವಾ ಕೇಂದ್ರ ನೈಸರ್ಗಿಕ ಪ್ರಕೋಪ ನಿಧಿಗಳಿಂದ ಬೆಳೆನಷ್ಟ ಪರಿಹಾರ ನೀಡುವ ಯಾವುದೇ ವ್ಯವಸ್ಥೆಯಿಲ್ಲ, ಅದೇನಿದ್ದರೂ, ನಾವು ನೀಡುವುದು ಒಂದು ರೀತಿಯ ನೆರವು ಅಷ್ಟೇ. (ಹಾಗಾಗಿಯೇ ಇದನ್ನು ಇನ್‌ಪುಟ್ ಸಬ್ಸಿಡಿ ಅಥವಾ ಒಳಸುರಿ ಸಬ್ಸಿಡಿ ಎನ್ನಲಾಗುತ್ತದೆ). ಇದರ ಜೊತೆಗೆ ಸಾಮಾನ್ಯವಾಗಿ ರೈತರಿಗೆ ಸಿಗುವ ನೆರವನ್ನು ಈಗಲೂ ಪಡೆದುಕೊಳ್ಳಬಹುದು ಮತ್ತು ರಾಷ್ಟ್ರೀಯ ಕೃಷಿ ವಿಮೆಯ ಸೌಲಭ್ಯವನ್ನೂ ಅವರು ಪಡೆದುಕೊಳ್ಳಬಹುದು....' ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಎಂದು ಕರೆಯಲ್ಪಡುವ ಬೆಳೆವಿಮೆ ಯೋಜನೆಯ ಕುರಿತು ಪ್ರತ್ಯೇಕವಾಗಿ ಬರೆಯಲಾಗಿದೆ. ಅದು ಒಂದು ದೊಡ್ಡ ಮೋಸ.

ಇರಲಿ, ಇದಲ್ಲದೇ ಸಂಸತ್ತಿನಲ್ಲಿ ನೀಡಲಾದ ಇನ್ನೊಂದು ಉತ್ತರವನ್ನು ಗಮನಿಸೋಣ. ಇದು ಜುಲೈ 31, 2015ರಂದು ಕೃಷಿ ಖಾತೆ ರಾಜ್ಯ ಸಚಿವ ಮೋಹನ್‌ಭಾಯ್ ಕಲ್ಯಾಣ್‌ಜೀಭಾಯ್ ಕುಂದರಿಯಾ ನೀಡಿದ ಉತ್ತರ. 'ರಾಜ್ಯ ಸರ್ಕಾರವು ತನ್ನ ವಶದಲ್ಲಿರುವ ರಾಜ್ಯ ನಿಧಿಯಿಂದ ಬರ ಪರಿಹಾರ ಕ್ರಮಗಳನ್ನು ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬಹುದು. ಅದಕ್ಕಿಂತಲೂ ಹೆಚ್ಚಿನ ನೆರವು ಬೇಕಿದ್ದರೆ, ಅವರು ನಮಗೆ ಮನವಿ ಮಾಡಿಕೊಳ್ಳಬೇಕು. ಮನವಿ ಬಂದ ನಂತರ, ಕೇಂದ್ರ ಕೃಷಿ ಮತ್ತು ಸಹಕಾರ ಸಚಿವಾಲಯವು ಒಂದು ತಜ್ಞರ ತಂಡವನ್ನು ರಾಜ್ಯಗಳಿಗೆ ಕಳಿಸಿ, ಯಾವ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ ಮತ್ತು ಅದಕ್ಕೆ ಎಷ್ಟು ಪರಿಹಾರ ನೀಡಬೇಕೆಂಬುದರ ಬಗ್ಗೆ ಒಂದು ಅಂದಾಜು ತಯಾರಿಸಲು ಕಳಿಸುತ್ತೇವೆ. ಅದು ನೀಡಿದ ವರದಿಯನ್ನು ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಉಪಸಮಿತಿಯ ಮುಂದಿಡಲಾಗುತ್ತದೆ. ಅದು ಈಗಾಗಲೇ ರಾಜ್ಯ ಮತ್ತು ಕೇಂದ್ರ ನಿಧಿಗಳೆರಡರಿಂದಲೂ (ಗಮನಿಸಿ ಎರಡೂ ನಿಧಿಗಳಿಂದ ಎಷ್ಟು ಕೊಡಬಹುದೆಂಬುದನ್ನು ಕೇಂದ್ರವೇ ನಿಯಮ ಮಾಡಿಟ್ಟಿದೆ) ಎಷ್ಟು ಕೊಡಬೇಕೆಂಬ ನಿಯಮಗಳ ಆಧಾರದ ಮೇಲೆ ತನ್ನ ಶಿಫಾರಸ್ಸನ್ನು ಕೇಂದ್ರ ನೆರವನ್ನು ಮಂಜೂರು ಮಾಡುವ ಉನ್ನತ ಮಟ್ಟದ ಸಮಿತಿಯ ಮುಂದಿಡುತ್ತದೆ. (ಈ ಎಲ್ಲಾ ಸಮಿತಿಗಳು ಇರುವುದು ರಾಜ್ಯ ಸರ್ಕಾರ ಮುಂದಿಟ್ಟ ಬೆಳೆನಷ್ಟ ಅಂದಾಜನ್ನು ಮತ್ತಷ್ಟು, ಮಗದಷ್ಟು ಇಳಿಸಿ, ಇಳಿಸೀ ಶೇಕಡಾವಾರು ನಷ್ಟವನ್ನು ಬಹಳ ಕಡಿಮೆ ಮಾಡಲಾಗುತ್ತದೆ. ಉದಾಹರಣೆಗೆ 2014-15ನೇ ಸಾಲಿನಲ್ಲಿ ಕರ್ನಾಟಕವು ಒಟ್ಟು 779.20 ಕೋಟಿಗಳಷ್ಟು ನೆರವನ್ನು ಕೇಂದ್ರದಿಂದ ಬಯಸಿದ್ದರೆ, ಅಂತಿಮವಾಗಿ ಮಂಜೂರಾಗಿದ್ದು 200.85 ಕೋಟಿ ರೂ.ಗಳು ಮಾತ್ರ).

ರಾಜ್ಯ ಮತ್ತು ಕೇಂದ್ರ ನಿಧಿಗಳಿಂದ ನೀಡಬಹುದಾದ ಪರಿಹಾರದ ಪ್ರಮಾಣವು ಈಗ ಕೆಳಕಂಡಂತಿದೆ. ಒಣಪ್ರದೇಶದ ರೈತರಿಗೆ ಹೆಕ್ಟೇರ್ (ಎರಡೂವರೆ ಎಕರೆ) ಒಂದಕ್ಕೆ 6,800 ರೂ.ಗಳು, ನೀರಾವರಿ ಪ್ರದೇಶದಲ್ಲಿ ಹೆಕ್ಟೇರ್‌ಗೆ 13,500 ರೂ.ಗಳು ಮತ್ತು ವಾರ್ಷಿಕ ಬೆಳೆಗಳಾದರೆ ಹೆಕ್ಟೇರ್‌ಗೆ 18,000 ರೂ.ಗಳು. ಬೆಳೆ ನಷ್ಟವು ಶೇ.33ಕ್ಕಿಂತ ಹೆಚ್ಚಿದ್ದರೆ ಇಷ್ಟನ್ನು ಕೊಡಲಾಗುತ್ತದೆ. ನಮ್ಮ ಈ ನಿಧಿಗಳಿಂದ ಕೊಡುವ ನೆರವು ತಕ್ಷಣಕ್ಕೆ ಕೊಡುವ ಪರಿಹಾರವೇ ಹೊರತು, ಅದು ಬೆಳೆ ನಷ್ಟವನ್ನು ತುಂಬಿಕೊಡಲು ಅಥವಾ ಬೆಳೆ ನಷ್ಟದ ಪರಿಹಾರ ಅಲ್ಲ, ಅಂತಹ ಪರಿಹಾರವನ್ನು ಪಡೆದುಕೊಳ್ಳಲು ಇರುವುದು ಬೆಳೆ ವಿಮೆ ಆಗಿದೆ. ಯಾರು ವಿಮಾ ಕಂಪನಿಗೆ ಪ್ರೀಮಿಯಂ ಹಣ ತುಂಬಿರುತ್ತಾರೋ ಅವರಿಗೆ ಆಯಾ ಯೋಜನೆಯಲ್ಲಿ ಎಷ್ಟು ಕೊಡಬಹುದೋ ಅಷ್ಟನ್ನು ಕೊಡಲಾಗುತ್ತದೆ......'






ಗಮನಿಸಿ, ಈ ಹಿಂದೆ 50%ಗಿಂತಲೂ ಹೆಚ್ಚು ನಷ್ಟವುಂಟಾದರೆ ಮಾತ್ರ ಕೊಡಬಹುದು ಎಂದಿದ್ದನ್ನು, ಈ ಸರ್ಕಾರವು ಶೇ.33ರಷ್ಟು (ಮೂರನೇ ಒಂದು ಭಾಗದಷ್ಟು) ನಷ್ಟವುಂಟಾದರೂ ಕೊಡಬೇಕು ಎಂದು ಬದಲಿಸಿದೆ. ಅದೇ ರೀತಿಯಲ್ಲಿ ನೈಸರ್ಗಿಕ ಪ್ರಕೋಪವುಂಟಾದಾಗ ಕೊಡಬಹುದಾದ ಪರಿಹಾರದ ಪ್ರಮಾಣವನ್ನೂ ಹೆಚ್ಚಿಸಿದೆ. ಅಷ್ಟೆಲ್ಲಾ ಹೆಚ್ಚಿಸಿದ ಮೇಲೂ ಸಿಗುವುದು ಎಷ್ಟು? ಭತ್ತಕ್ಕೆ ಎಕರೆಗೆ 5,400 ರೂ. ಇಷ್ಟು ಪರಿಹಾರವೂ ಯಾರಿಗೂ ಸಿಗುವುದಿಲ್ಲ, ಏಕೆಂದರೆ, ರಾಜ್ಯ ಸರ್ಕಾರವು ಶೇ.100ರಷ್ಟು ನಷ್ಟ ಎಂದು ಹೇಳಿದರೂ, ಅದನ್ನು ವಿವಿಧ ಸಮಿತಿಗಳು ಇಳಿಸುತ್ತಾ ಬಂದು, ಎಕರೆಗೆ 1000 ರೂ.ಗಳಿಂದ ಹೆಚ್ಚೆಂದರೆ 2,500 ರೂ.ಗಳು ಸಿಗುತ್ತವೆ. ಆದರೆ, ಭತ್ತದ ನಾಟಿಗೇ ಎಕರೆಗೆ ಕನಿಷ್ಠ 15,000 ರೂ.ಗಳು ಖರ್ಚಾಗುತ್ತದೆ. ಇನ್ನೂ ಒಂದು ಅಂಶವೆಂದರೆ, ಇವೆಲ್ಲವೂ ಬಿತ್ತನೆ ಮಾಡಿರುವ ರೈತರಿಗೆ ಮಾತ್ರ ಸಿಗುತ್ತದೆ. ಮಳೆಯೇ ಇಲ್ಲದೇ ಅರ್ಧಕ್ಕೂ ಹೆಚ್ಚು ರೈತರು ಬಿತ್ತನೆಯ ಗೋಜಿಗೇ ಹೋಗಿಲ್ಲ.

ಪ್ರತಿ ನಾಲ್ಕೈದು ವರ್ಷಗಳಿಗೊಮ್ಮೆ ಕಾಣಿಸಿಕೊಳ್ಳುವ, ಕೆಲವು ಸಂದರ್ಭದಲ್ಲಿ ಸತತವಾಗಿ ಎರಡು ವರ್ಷಗಳ ಕಾಲ ಇರುವ (ಈ ಸಾರಿ ಆದ ಹಾಗೆ) ಬರವು ಕೃಷಿ ಕುಟುಂಬವೊಂದರ ಬಳಿ ಏನಾದರೂ ಉಳಿತಾಯವಿದ್ದರೆ ಅದನ್ನು ಕರಗಿಸುತ್ತದೆ. ಹೆಚ್ಚಿನಂಶ ಸಾಲದ ಹೊರೆಯನ್ನು ಹೆಚ್ಚಿಸುತ್ತದೆ. ಹೊರೆ ಹೆಚ್ಚುತ್ತಾ, ಹೆಚ್ಚುತ್ತಾ ಅದು ಯಾವಾಗ ಸರಣಿ ಆತ್ಮಹತ್ಯೆಯ ರೂಪ ಪಡೆದುಕೊಳ್ಳುತ್ತದೆ ಎಂದು ಹೇಳಲಾಗುವುದಿಲ್ಲ. ಆದರೆ, ಬೇರೆ ನಕಾರಾತ್ಮಕ ಸುದ್ದಿಗಳಿಲ್ಲದಾಗ, ಅದರಲ್ಲೂ ಆಡಳಿತ ಪಕ್ಷದ ವಿರುದ್ಧವೇ ಸುದ್ದಿ ಮಾಡಬೇಕೆಂದು ಬಯಸಿದಾಗ ಮಾತ್ರ ಮಾಧ್ಯಮಗಳು ಇದನ್ನು ಗಮನಿಸುತ್ತವೆ.

ಬರದ ಸಮಸ್ಯೆಯು ಸಾಮಾನ್ಯವಾಗಿ ಅಷ್ಟು ಗಮನ ಸೆಳೆಯುವುದಿಲ್ಲ, ತೀರಾ ಕುಡಿಯಲು ನೀರೇ ಇಲ್ಲದೇ, ಜಾನುವಾರುಗಳು ಸಾಯಲು ಆರಂಭಿಸಿದರೆ ಅಥವಾ ಜನರು ಲಕ್ಷಾಂತರ ಸಂಖ್ಯೆಯಲ್ಲಿ ಗುಳೆ ಹೋಗಲು ಆರಂಭಿಸಿದರೆ ಮಾತ್ರ ಅದು ಗಮನ ಸೆಳೆಯುತ್ತದೆ. ಅವೆರಡೂ ಬಿಟ್ಟರೆ ಕೆಲವು ವಿಚಿತ್ರ ಕಾರಣಗಳಿಗಾಗಿ ಗಮನ ಸೆಳೆಯುತ್ತದೆ. ಅಂತಹದೊಂದು ವೈಚಿತ್ರ್ಯ ಕಳೆದ ವರ್ಷ ನಡೆಯಿತು. ಮಹಾರಾಷ್ಟ್ರದಲ್ಲಿ ತೀವ್ರ ಬರವಿತ್ತು, ಅದೇ ಸಂದರ್ಭದಲ್ಲಿ ಮುಂಬೈಯಲ್ಲಿ ಅಂತರ್ರಾಷ್ಟ್ರೀಯ ಕ್ರಿಕೆಟ್ ಪಂದ್ಯ ನಡೆಯುವುದಿತ್ತು, ಆ ಪಂದ್ಯ ನಡೆಸಲು ಮೈದಾನವನ್ನು ಸಿದ್ಧಗೊಳಿಸಲು ಅಪಾರ ಪ್ರಮಾಣದ ನೀರು ಬೇಕಿತ್ತು, ಆ ನೀರಿನ ಕೊರತೆಯ ಕಾರಣಕ್ಕೆ ಪಂದ್ಯ ನಡೆಸಬಾರದು ಎಂಬ ಚರ್ಚೆ ಬಂದಾಗ ಇದ್ದಕ್ಕಿದ್ದಂತೆ 'ದೊಡ್ಡ ಜನ' ಎಚ್ಚೆತ್ತುಕೊಂಡರು. ಮಾಧ್ಯಮಗಳಿಗೂ ಆಗಲೇ ಬರದ ಸಮಸ್ಯೆ ಅರಿವಾಗಿದ್ದು, ಬರ ಎನ್ನುವುದು ಭೂಕಂಪವೋ, ಸುನಾಮಿಯೋ ಅಥವಾ ಪ್ರವಾಹವೋ ಅಲ್ಲ, ಬರವೂ ಸಹ ಇವುಗಳಂತೆಯೇ ಒಂದು ನೈಸರ್ಗಿಕ ವಿಕೋಪ. ಆದರೆ, ಇತರ ಪ್ರಕೋಪಗಳು ಕಣ್ಣಿಗೆ ರಾಚಿ ಬಡಿಯುತ್ತವೆ. ಬರವು ನಿಧಾನಕ್ಕೆ ಒಳಗೊಳಗೇ ತಿಂದು ನಮ್ಮನ್ನು ಜೀರ್ಣ ಮಾಡುತ್ತಿರುತ್ತದೆ. ರೈತರೂ ಸಹ ಕಬ್ಬಿಗೆ ದರ ಕಡಿಮೆಯಾದಾಗಲೋ, ತಮ್ಮ ಬೆಳೆಗಳಿಗೆ ನೀರನ್ನು ಬಿಡದೇ ಇದ್ದಾಗಲೋ ಬೀದಿಗಿಳಿಯುವಷ್ಟು ಬರದಂತಹ ನೈಸರ್ಗಿಕ ವಿಕೋಪದ ಸಂದರ್ಭದಲ್ಲಿ ಬೀದಿಗಿಳಿಯುವುದಿಲ್ಲ, ತಾವು ಸರ್ಕಾರದಿಂದ ಏನನ್ನಾದರೂ ಕೇಳಿದರೆ, ಅದು ಧಣಿಗಳು ಉದಾರವಾಗಿ ನೀಡುವ ದಾನವೆಂಬಂತೆ ಅವರೂ ತಿಳಿದಿರುತ್ತಾರೆ. ಹಾಗಾಗಿಯೇ ಸಾಲಮನ್ನಾ ಮಾಡಿದ ಸರ್ಕಾರಗಳನ್ನು ಅವರು ವಿಶೇಷವಾಗಿ ಸ್ಮರಿಸಿಕೊಳ್ಳುತ್ತಾರೆ. ಬರ ನಿರ್ವಹಣೆ ಮತ್ತು ರೈತರ ಕುರಿತ ಇತರ ವಿಚಾರಗಳಲ್ಲಿ ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸುವ ರಾಜಕೀ[...] ಬಗ್ಗೆ ರೈತರಿಗೆ ಸಿಟ್ಟಿದ್ದಂತೆಯೇ ತೋರುವುದಿ[...]



ಇವೆಲ್ಲಾ ಕಾರಣಗಳಿಂದ ಬರದ ಸ[...] ವೈಜ್ಞಾನಿಕ ಪರಿಹಾರವನ್ನು ನೀಡಬೇಕೆಂದು ಒತ್ತಾ[...] ಬಹಳ ಮುಖ್ಯವಾಗಿದೆ. ಒಂದುವೇಳೆ[...] ನಿಯಮಗಳನ್ನು ಬದಲಿಸುವುದು ಸಾಧ್ಯವಿಲ್ಲದೆ[...] ಕರ್ನಾಟಕಕ್ಕೆ ವಿಶೇಷ ಪ್ಯಾಕೇಜನ್ನು ಘೋಷಿ[...] ಮತ್ತು ಗ್ರಾಮೀಣ ನಿವಾಸಿಗಳನ್ನು ರಕ್ಷಿಸಬೇಕೆ[...] ಕೇಳುತ್ತಿರುವುದು ಇದೇ ಕಾರಣಕ್ಕೆ.

ಸಮಗ್ರ ಬರ ನಿರ್ವಹಣೆ ಎಂದರ[...]

ಈ ಕುರಿತು ನಾವು ಏನು ಹೇಳಬಹುದು[...] ಸದ್ಯಕ್ಕೆ ಪಕ್ಕಕ್ಕಿಡೋಣ. ಕೇಂದ್ರ ಸರ್ಕಾರವೇ[...] ಹೊರತಂದ ಬರ ನಿರ್ವಹಣೆಯ ಮ್ಯಾನ್ಯು[...] ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತದೆ. ಬರ [...] ಎಂಬ ಮುಂದಂದಾಜು ಮಾಡುವುದರಿಂದ[...] ದೀರ್ಘಕಾಲಿಕವಾಗಿ ಬರದ ನಿರ್ವಹಣೆ [...] ಮತ್ತು ಅದರ ಪರಿಣಾಮಗಳನ್ನು ತಡೆಯುವು[...] ಅದು ಹಲವು ಶಿಫಾರಸ್ಸುಗಳನ್ನು ಮಾಡಿದೆ.


ಇನ್ನು ಬರ ಪರಿಹಾರವೆಂದರೆ ಅದರ[...] ಇರಬೇಕು ಎಂಬುದರ ಕುರಿತು ಕೇಂದ್ರ [...] ರೀತಿಯ ಪಟ್ಟಿಯನ್ನು ಮುಂದಿಡುತ್ತದೆ. ಪಯ[...] ಯೋಜನೆ, ಪರಿಹಾರ ಉದ್ಯೋಗ ಸೃಷ್ಟಿ, ಜಲ[...] ನಿರ್ವಹಣೆ, ಆಹಾರ ಭದ್ರತೆ, ಹಣ ರೂಪ[...] ತೆರಿಗೆ ಮನ್ನಾ ಮತ್ತು ವಿನಾಯಿತಿಗಳ ಮೂಲ[...] ಜಾನುವಾರು ಶಿಬಿರಗಳು ಮತ್ತು ಮೇವಿನ [...] ಆರೋಗ್ಯ ಮತ್ತು ನೈರ್ಮಲ್ಯ, ಸಾಂಸ್ಥಿ[...] ಪರಿಹಾರಗಳಿಗೆ ಬೇಕಾದ ಆರ್ಥಿಕ ಸಂಪನ್[...] ಒದಗಿಸುವುದು, ಮಾಹಿತಿಯ ನಿರ್ವಹಣೆ ಮತ[...] ಸಂಯೋಜನೆ. ಇದಲ್ಲದೆ ಸುಮಾರು 4 [...] ಬರವನ್ನೆದುರಿಸಲು ಬೇಕಾದ ಸಿದ್ಧತೆ ಮತ್ತು ಪ್ರತಿ[...] ಏನೇನು ಮಾಡಬೇಕೆಂಬುದರ ಚೆಕ್‌ಲಿಸ್ಟ್ ಅ[...] ಡುತ್ತದೆ. ಇವೆಲ್ಲವನ್ನೂ ಕೇವಲ ಸಾಂಕೇತಿಕವ[...] ಮಾಡಲಾಗುತ್ತದೆ ಎಂಬುದು ನಮಗೆಲ್ಲರಿಗ[...]

ವಾಸ್ತವದಲ್ಲಿ ಇದೇ ಕೈಪಿಡಿ ಹೇಳುವಂತೆ[...] ಇರುವ ಬರ ನಿರ್ವಹಣೆ ನೀತಿಯೆಂದರೆ ಅ[...] ಕಾಲದ ನೀತಿಯೇ. ಆಗ ವರ್ಷದ ಕೊನೆಯ[...] ಉತ್ಪಾದನೆಯಲ್ಲಿ ಎಷ್ಟು ಕೊರತೆಯಾಯಿತು [...] ಪರಿಗಣಿಸಿ, ಕ್ರಮಗಳಿಗೆ ಮುಂದಾಗುವ [...] ಈಗಲೂ ಹೆಚ್ಚುಕಡಿಮೆ ಅದೇ ರೀತಿ ಇದೆ. [...] ಸಾಕಷ್ಟು ವಿಸ್ತಾರವಾದ ರೀತಿಯಲ್ಲಿ 2009ರ[...] ವಿವರಣೆ ಕೊಟ್ಟು, ಯಾವ ರೀತಿ ಈ[...] ಬದಲಾಗಬೇಕೆಂಬುದನ್ನು ಒತ್ತಿ ಹೇಳುತ್ತದಲ್ಲ[...] ಬರದಂತೆ ಏನೇನು ಮಾಡಬೇಕೆಂಬುದನ್ನೂ[...]

ಬರ ಬಂದರೆ, ತೊಂದರೆಗೀಡಾ[...] ಭೂಮಿಯುಳ್ಳ ರೈತರು ಮಾ[...]

ಬರ ಬಂದಾಗ, ಭೂಮಿಯುಳ್ಳ ರೈ[...] ಸಂಕಷ್ಟಕ್ಕೆ ಗುರಿಯಾಗುವುದಿಲ್ಲ, ಕೃಷಿಯನ್ನು ನಂಬ[...] ಕೃಷಿ ಕಾರ್ಮಿಕರು, ಇತರ ಕುಶಲಕರ್ಮಿ ವರ್ಗ[...] ದೊಡ್ಡ ರೀತಿಯಲ್ಲಿ ಸಮಸ್ಯೆಗೆ ಈಡಾಗುತ್ತಾರ[...] ವರ್ಗಗಳ ಮಹಿಳೆಯರೂ ಸಹ ಸಮಸ್ಯೆಯಿಂ[...] ತಿನ್ನುತ್ತಾರೆ. ಈ ಅವಲಂಬನೆಯು ಪರೋಕ್ಷ[...] ಯಲ್ಲ; ಕೃಷಿ ಆರ್ಥಿಕತೆಯಲ್ಲಿ ಈ ಎಲ್ಲಾ ಜ[...] ಪಾತ್ರ ಬಹಳ ಮಹತ್ವದ್ದು ಮತ್ತು ಈ [...] ಸಮುದಾಯವೇ ಹೆಚ್ಚಿನ ಸಂದರ್ಭಗಳಲ್ಲಿ ಗು[...] ಪರಿಸ್ಥಿತಿಗೆ ಗುರಿಯಾಗುತ್ತದೆ. ಹಾಗಾಗಿಯೆ[...] ಬರಪರಿಹಾರ ನೀತಿಗಳಲ್ಲಿ ಈ ವರ್ಗಗಳ ಹಿ[...] ಕಾಪಾಡುವುದು ಬಹಳ ಮುಖ್ಯವಾದುದು.

ಭಾರತೀಯ ಸೇನೆ ಪ್ರಶ್ನಾತೀತವಲ್ಲ





ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಮೊದಲಿನಿಂದಲೂ ನಮ್ಮ ದೇಶದಲ್ಲಿ ಸೈನ್ಯದ ಸೈನಿಕರ ಬಗ್ಗೆ ಜನರಲ್ಲಿ ಅಪಾರ ಅಭಿಮಾನ ಮತ್ತು ಮೆಚ್ಚುಗೆ. ಅದು ಸರಿಯಾದದ್ದೇ. ಯಾಕೆಂದರೆ ನಮ್ಮ ಸೈನಿಕರು ಕಷ್ಟನಷ್ಟಗಳ ನಡುವೆ ಪ್ರಕೃತಿಯ ವಿಕೋಪಗಳನ್ನು ಎದುರಿಸುತ್ತಾ ನಮ್ಮ ದೇಶದ, ಅಂದರೆ ನಮ್ಮ ರಕ್ಷಣೆಗೆ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡುತ್ತಿರುತ್ತಾರೆ. ತಮ್ಮ ಹುಟ್ಟೂರಿನಿಂದ, ಹೆತ್ತವರಿಂದ, ಕೈಹಿಡಿದವರಿಂದ, ತಮ್ಮ ಮಕ್ಕಳಿಂದ ದೂರವಾಗಿ ಅದೆಲ್ಲೋ ಗಡಿಯಲ್ಲೋ, ರಣಮೇಡಿನಲ್ಲೋ ಮಡಿಯುತ್ತಿರುತ್ತಾರೆ. ಆ ಸೈನಿಕರು ಪಡೆಯುವ ಚಿಕ್ಕಾಸು ಅವರ ಕುಟುಂಬಗಳಿಗೆ ಆಧಾರವಾಗಿರುತ್ತದೆ. ಅಂತಹ ಸೈನಿಕರ ಬಗ್ಗೆ ಮೆಚ್ಚುಗೆ ಅಲ್ಲದೆ ಇನ್ನೇನಿರಲು ಸಾಧ್ಯ?

ಆದರೆ ದುರದೃಷ್ಟವಶಾತ್ ಇವತ್ತು ಏನಾಗಿದೆ ಎಂದರೆ ಸೈನ್ಯ ಮತ್ತು ಸೈನಿಕರು ಪ್ರಶ್ನಾತೀತ ಎಂಬ ಧೋರಣೆ ಹಲವು ಭಾರತೀಯರಲ್ಲಿ ಮನೆಮಾಡಿದೆ. ಈ ಮನೋಧರ್ಮ ಮೋದಿ ಪ್ರಧಾನಿ ಆದಮೇಲೆ ಹೆಚ್ಚಾಗಿರುವುದು ನಿಸ್ಸಂಶಯ. ಅದರಲ್ಲೂ ಮೋದಿ ತಾನೊಬ್ಬ ಮಹಾನ್ ಸೈನಿಕರ ಮಿತ್ರ, ಸೈನ್ಯದ ಅಭಿಮಾನಿ ಎಂದು ಪೋಜು ಕೊಡುವುದರಲ್ಲಿ ಎತ್ತಿದ ಕೈ. ಇತ್ತೀಚೆಗಿನ 'ಸರ್ಜಿಕಲ್ ಸ್ಟ್ರೈಕ್'ಗಳ ನಂತರವಂತೂ ತನಗೂ ಸೈನ್ಯಕ್ಕೂ ವ್ಯತ್ಯಾಸವೇ ಇಲ್ಲ ಎನ್ನುವಂತೆ, ಸೈನಿಕರ ಸಾಹಸ ತನ್ನ ಸಾಹಸ ಎಂಬಂತೆ ಪೋಟು ಮಾಡುತ್ತಿದ್ದಾನೆ. ಆತ ಪ್ರಧಾನಿ ಆದ ನಂತರದ ಎರಡು ದೀಪಾವಳಿ ಹಬ್ಬಗಳನ್ನು ಸೈನಿಕರ ಜೊತೆ ಕಳೆದದ್ದಲ್ಲದೆ ಈಗ ತನ್ನ ಆ್ಯಪ್ ಮೂಲಕ ದೇಶದ ಎಲ್ಲರೂ ಸೈನಿಕರಿಗೆ ದೀಪಾವಳಿಯ ಶುಭಾಷಯಗಳನ್ನು ಕಳುಹಿಸಬೇಕು ಎಂದು ಮನವಿಯನ್ನು ಮಾಡಿದ್ದಾನೆ ಮೋದಿ ಸಾಹೇಬ. ಹೀಗೆಲ್ಲಾ ನಾಟಕವಾಡುವ ಮೋದಿ ಅದೇ ಸೈನಿಕರ ಸಂಬಳವನ್ನು ಹೆಚ್ಚಿಸಿಲ್ಲ. ಅವರಿಗೆ ತಮ್ಮ ಕಾರ್ಯನಿರ್ವಹಿಸಲು ಅನುಕೂಲವಾಗುವಂತಹ ಒಂದೇಒಂದು ನಿರ್ಧಾರವನ್ನೂ ತೆಗೆದುಕೊಂಡಿಲ್ಲ.

ಆದರೇನಂತೆ ಇವತ್ತು ದೇಶದಲ್ಲಿ ಎಂತಹ ವಾತಾವರಣ ನಿರ್ಮಾಣವಾಗಿದೆ ಎಂದರೆ ಯಾರಾದರು ಸೈನ್ಯದ ವಿರುದ್ಧ ತಕರಾರ ಎತ್ತಿದರೆ ನಕಲಿ ದೇಶಭಕ್ತರು ಅವರ ವಿರುದ್ಧ ಮುಗಿ ಬೀಳುತ್ತಾರೆ. ದಿನೇಶ್ ಅಮೀನ್ ಮಟ್ಟು ಅವರು ದೇಶದ ಗಡಿಯಲ್ಲಿ ಸಾಯುತ್ತಿರುವ ಸೈನಿಕರು ಈ ದೇಶದ ಬಡವರು ಎಂದಿದ್ದೇ ಸಾಕು, "ನೀನೊಬ್ಬ ದೇಶದ್ರೋಹಿ. ಅವರು ಪ್ರಾಣತ್ಯಾಗಮಾಡಿದ್ದು ದೇಶಭಕ್ತಿಯಿಂದಲೇ ಹೊರತು ಬಡತನದಿಂದಾಗಿ ಅಲ್ಲ" ಎಂದು ಅರಚುತ್ತಾರೆ. ನೂರ್ ಶ್ರೀಧರ್ ಅವರು ಕಾಶ್ಮೀರದಲ್ಲಿ ಸೈನಿಕರು ಮತ್ತು ಪೊಲೀಸರು ಅಮಾಯಕ ಯುವಕರ ಮೇಲೆ ಪೆಲೆಟ್ ಗುಂಡುಗಳನ್ನು ಹಾರಿಸಿ ಸಾಯಿಸುತ್ತಿದ್ದಾರೆ ಎಂದರೆ "ನೀನೊಬ್ಬ ಕಮ್ಯೂನಿಸ್ಟ್. ಅಲ್ಲಿನ ಮುಸಲ್ಮಾನರು ತೆಪ್ಪಗೆ ಭಾರತದ ಭಾಗವಾಗಿರದೆ ಯಾಕೆ ದಂಗೆ ಏಳುತ್ತಿದ್ದಾರೆ?" ಎಂದು ಗುಡಿಕಾರುತ್ತಾರೆ.

ವಾಸ್ತವವಾಗಿ ನಮ್ಮ ಪ್ರಜಾಪ್ರಭುತ್ವದ ಎಲ್ಲಾ ಅಂಗಗಳಲ್ಲಿ ಹೇಗೆ ಇವತ್ತು ಭ್ರಷ್ಟಾಚಾರ, ದಮನ ಪ್ರವೃತ್ತಿ ಮತ್ತು ಅಕ್ರಮ ವ್ಯವಹಾರಗಳು ಮನೆಮಾಡಿವೆಯೋ ಹಾಗೆಯೇ ನಮ್ಮ ಸೇನೆಯನ್ನೂ ಪ್ರವೇಶಿಸಿವೆ. ಹೀಗಿರುವಾಗ ಸೈನ್ಯ ಮತ್ತು ಸೈನಿಕರನ್ನು ಪ್ರಶ್ನಿಸುವುದು ಪ್ರಜಾಸತ್ತೆಯಲ್ಲಿ ನಂಬಿಕೆ ಹೊಂದಿರುವ ಎಲ್ಲರ ಜವಾಬ್ದಾರಿಯಾಗಿದೆ. ಅದರಲ್ಲೂ ಬಡ್ತಿಗಾಗಿ, ಪ್ರಶಸ್ತಿಗಾಗಿ ಅಮಾಯಕರನ್ನು ಸಾಯಿಸುವ ಪ್ರವೃತ್ತಿ ಪ್ರಕ್ಷುಬ್ಧ ಪ್ರದೇಶಗಳಲ್ಲಿ ನಿಯೋಜನೆಗೊಂಡಿರುವ ಸೈನಿಕರಲ್ಲಿ ಹೆಚ್ಚುತ್ತಿರುವುದನ್ನಂತೂ ಪ್ರಶ್ನಿಸಲೇಬೇಕಿದೆ. ಯಾಕೆಂದರೆ ಇವತ್ತು ಪೊಲೀಸರಂತೆ ಸೈನಿಕರು ಮತ್ತು ಸೈನ್ಯಾಧಿಕಾರಿಗಳಲ್ಲೂ ಅಮಾಯಕರನ್ನು ಕೊಂದು, ಅವುಗಳನ್ನು 'ಎನ್‌ಕೌಂಟರ್'ಗಳೆಂದು ಬಿಂಬಿಸಿ, ಸತ್ತವರು ಉಗ್ರರು ಎಂದು ಪ್ರಚಾರ ಮಾಡುವ ಗೀಳು ಹೆಚ್ಚುತ್ತಿದೆ. ಈಶಾನ್ಯ ಭಾರತ, ಕಾಶ್ಮೀರ ಮತ್ತು ನಕ್ಸಲರಿರುವ ಪ್ರದೇಶಗಳಲ್ಲಿ (ಇವೆಲ್ಲಾ ಭಾರತದಲ್ಲಿರುವ ಪ್ರದೇಶಗಳು ಮತ್ತು ಅಲ್ಲಿ ವಾಸಿಸುವ ಜನರೆಲ್ಲ ಭಾರತೀಯರು) ನಿಯುಕ್ತಗೊಂಡಿರುವ ಸೈನಿಕರು ಅಲ್ಲಿ ಕೊಲ್ಲುವುದು ಭಾರತೀಯರನ್ನೇ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಅದರಲ್ಲೂ ಅಂತಹ ಎಲ್ಲಾ ಪ್ರಕ್ಷುಬ್ಧ ಪ್ರದೇಶಗಳಲ್ಲಿ ಆರ್ಮ್ಡ್ ಫೋರ್ಸಸ್ ಸ್ಪೆಷಲ್ ಪವರ್ಸ್ ಆ್ಯಕ್ಟ್ (ಆಫ್‌ಸ್ಪಾ) ಜಾರಿಯಲ್ಲಿದ್ದು ಸೈನಿಕರ ಇಂತಹ ಅಕ್ರಮಗಳನ್ನು ಪ್ರಶ್ನಿಸುವುದು, ವಿಚಾರಣೆಗೆ ಒಳಪಡಿಸುವುದು ಅಸಾಧ್ಯವಾಗಿದೆ.

ಹೌದು ನಮ್ಮ ಸೈನಿಕರೆಲ್ಲರೂ ಭ್ರಷ್ಟರಲ್ಲ, ಕೊಲೆಗಡುಕರಂತೂ ಅಲ್ಲವೇ ಅಲ್ಲ, ಆದರೆ ಅವರಲ್ಲಿ ಹಲವರು ಭ್ರಷ್ಟರೂ ಹೌದು, ಕೊಲೆಗಡುಕರೂ ಹೌದು ಎಂಬುದೂ ಅಷ್ಟೇ ಸತ್ಯ. ಇವತ್ತು ನಮ್ಮ ಸೈನ್ಯದಲ್ಲಿ ಏನಾಗುತ್ತಿದೆ ಎಂದು ತೋರಿಸುವ ಪುಸ್ತಕ ನಂದಿತಾ ಹಕ್ಸರ್ ... ಭಟ್ಟಾಚಾರ್ಜಿ ಅವರು ಬರೆದಿರುವ 'ಬ್ಲಡ್ ಆನ್ ಮೈ ಹ್ಯಾಂಡ್ಸ್' ಮೂಲತಃ ಅಸ್ಸಾಂ ರಾಜ್ಯದವರಾದ ಭಟ್ಟಾಚಾರ್ಜಿ ಅವರು ಹಲವಾರು ವರ್ಷಗಳ ಕಾಲ ಈಶಾನ್ಯ ರಾಜ್ಯಗಳಿಂದ ಎನ್‌ಡಿಟಿವಿ ಚಾನೆಲ್‌ನ ವರದಿಗಾರರಾಗಿ ಕೆಲಸ ಮಾಡಿದವರು. ಆ ಪ್ರದೇಶದ ರಾಜ್ಯಗಳನ್ನು ಪ್ರಕ್ಷುಬ್ಧ ಪ್ರದೇಶಗಳು ಎಂದು ಕೇಂದ್ರ ಸರ್ಕಾರ ಘೋಷಿಸಿ ಹಲವಾರು ದಶಕಗಳೇ ಆಗಿವೆ. ಅಲ್ಲಿ ಹತ್ತಾರು ವರ್ಷಗಳಿಂದ ಸೈನ್ಯದ ಹಲವಾರು ತುಕುಡಿಗಳು ಕಾರ್ಯನಿರ್ವಹಿಸುತ್ತಿದ್ದು ಅದನ್ನೆಲ್ಲ ಭಟ್ಟಾಚಾರ್ಜಿ ಅವರು ಹತ್ತಿರದಿಂದ ಗಮನಿಸಿದ್ದಾರೆ. ಅದೆಲ್ಲಕ್ಕಿಂತ ಮುಖ್ಯವಾಗಿ ಸೈನ್ಯದ ಹಿರಿಯ ಅಧಿಕಾರಿಯೊಬ್ಬರು ಅನಾಮಧೇಯರಾಗಿ ಲೇಖಕರ ಮುಂದೆ ನಿವೇದಿಸಿಕೊಂಡ ತಪ್ಪೊಪ್ಪಿಗೆಯ ದಾಖಲೆ ಈ ಪುಸ್ತಕ.

ಪ್ರಶಸ್ತಿಗಾಗಿ, ಬಡ್ತಿಗಾಗಿ ಸೈನಿಕರು ಮಾಡುವ ಅಮಾಯಕರ ಕೊಲೆಗಳು, ಭೂಗತ ಜಗತ್ತಿನೊಂದಿಗೆ ಸೈನ್ಯಾಧಿಕಾರಿಗಳಿಗೆ ಇರುವ ನಂಟು, ಅಫೀಮು ಮಾರಾಟ ಮತ್ತು ನಾಟ ಕಳ್ಳಸಾಗಾಣಿಕೆಗಳಿಂದ ಅವರು ಗಳಿಸುವ ಕೋಟ್ಯಂತರ ರೂಪಾಯಿಗಳು, ತಮ್ಮ ಅಕ್ರಮಗಳನ್ನು ಮುಚ್ಚಿಹಾಕುವ ಕಲೆಯನ್ನು ಕರಗತಮಾಡಿಕೊಂಡಿರುವುದು, ಅವುಗಳಿಗೆಲ್ಲ ಸರ್ಕಾರ ಮೌನವಾಗಿ ಸಮ್ಮತಿಸುವುದು... ಇಂತಹ ಎಲ್ಲಾ ವಿವರಗಳು ಈ ಪುಸ್ತಕದಲ್ಲಿದ್ದು ಅವೆಲ್ಲ ಓದುಗರ ರಕ್ತ ಹೆಪ್ಪುಗಟ್ಟುವಂತೆ ಮಾಡುತ್ತವೆ.

ಉದಾಹರಣೆಗೆ ಪುಸ್ತಕದ ಎರಡನೆ ಪುಟದಲ್ಲಿಯೇ ಲೇಖಕರು ಪ್ರತ್ಯಕ್ಷದರ್ಶಿಯಾಗಿದ್ದ ಘಟನೆಯೊಂದಿದೆ. ಅದು 2004ರಲ್ಲಿ ಭೂತಾನ್ ಮತ್ತು ಅಸ್ಸಾಂ ಗಡಿಯ ಹತ್ತಿರವಿರುವ ಒಂದು ಪೊಲೀಸ್ ಠಾಣೆಯಲ್ಲಿ ನಡೆದದ್ದು. ಆಗ ಅಸ್ಸಾಂ ರಾಜ್ಯದಲ್ಲಿ ಅಸ್ಸಾಂ ಬಂಡುಕೋರರು ಪ್ರಬಲವಾಗಿದ್ದರು. ಆದಕ್ಕಾಗಿ ಅಲ್ಲಿ ಸೈನ್ಯದ ಹಲವಾರು ತುಕಡಿಗಳನ್ನು ಇರಿಸಲಾಗಿತ್ತು. ಒಂದು ದಿನ, ಸೈನ್ಯದ ಯುವ ಕ್ಯಾಪ್ಟನ್ ಒಬ್ಬ ಪೊಲೀಸ್ ಅಧಿಕಾರಿಯ ಮುಂದೆ ಹಾಜರಾಗಿ ಒಂದು ಮನವಿಯನ್ನು ಇಡುತ್ತಾನೆ. ಅದು ಹೀಗಿರುತ್ತದೆ: "ಹೀಗೆ ಕೇಳುವುದಕ್ಕೆ ಮುಜುಗರವಾಗುತ್ತಿದೆ. ಆದರೆ ಒಂದು ಓವರ್‌ಡ್ರಾಫ್ಟ್ ಸಮಸ್ಯೆ ಎದುರಾಗಿದ್ದು ನನಗೆ ಒಂದಷ್ಟು ಸಾಲ ಕೊಡಲು ಸಾಧ್ಯವೇ? ಆದಷ್ಟು ಬೇಗ ನಿಮಗೆ ಅದನ್ನು ವಾಪಸ್ ಕೊಡುತ್ತೇನೆ." ಆಗ ಪೊಲೀಸ್ ಅಧಿಕಾರಿ "ಇದು ಕಷ್ಟದ ಸಮಯ. ನನ್ನ ಹತ್ತಿರವೂ ಕಡಿಮೆ ಇದೆ. ಆದರೂ ನಾಳೆ ಬೆಳಗ್ಗೆ ಹೊತ್ತಿಗೆ ನಿಮಗೆ ಕೊಡಲು ಪ್ರಯತ್ನಿಸುತ್ತೇನೆ" ಎನ್ನುತ್ತಾನೆ. ಓದುಗರು ಅವರಿಬ್ಬರು ಹಣಕಾಸಿನ ವಿಷಯ ಮಾತನಾಡುತ್ತಿದ್ದಾರೆ ಎಂಬ ಭ್ರಮೆಗೆ ಬೀಳುವ ಮುನ್ನ ಲೇಖಕ ಭಟ್ಟಾಚಾರ್ಜಿ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತಾರೆ. ಅದೇನೆಂದರೆ ಅವರಿಬ್ಬರೂ ಮಾಡುತ್ತಿರುವ ವ್ಯವಹಾರ ಮನುಷ್ಯ ಪ್ರಾಣಕ್ಕೆ ಸಂಬಂಧಿಸಿದ್ದು. ಏನಾಗಿತ್ತೆಂದರೆ ಆ ಯುವ ಕ್ಯಾಪ್ಟನ್ ಉಗ್ರರ ವಿರುದ್ಧದ ಕಾರ್ಯಾಚರಣೆಯೊಂದರಲ್ಲಿ ಇಬ್ಬರನ್ನು ಕೊಂದು ಹಾಕಿದ್ದ. ಆ ಉತ್ಸಾಹದಲ್ಲಿ ಆತ ತನ್ನ ಹಿರಿಯ ಅಧಿಕಾರಿಗಳಿಗೆ ತಾನು ಮೂವರನ್ನು ಕೊಂದಿರುವುದಾಗಿ ಹೇಳಿದ್ದ. ಈಗ ಅದೇ ತೊಡಕಾಗಿದ್ದು, ತಾನು ಕೊಟ್ಟಿದ್ದ ಲೆಕ್ಕವನ್ನು ಚುಕ್ತಾ ಮಾಡಲು ಆತ ಯಾರಾದರೊಬ್ಬ ಅಮಾಯಕನ ಪ್ರಾಣವನ್ನು ಬಲಿ ಪಡೆಯಬೇಕಿತ್ತು. ಅದೇ ಅವರಿಬ್ಬರ ನಡುವೆ ಆದ ವ್ಯವಹಾರ.

ಆದರೆ ಹೀಗೆ ಬೇಕಾಬಿಟ್ಟಿಯಾಗಿ ಕೊಂದುಹಾಕಲು ಜನರು ಅಷ್ಟು ಸುಲಭವಾಗಿ ಸೈನ್ಯಕ್ಕೆ ಸಿಗುತ್ತಾರೆಯೇ ಎಂಬ ಪ್ರಶ್ನೆ ಉದ್ಭವಿಸದೆ ಇರದು. ಆದರೆ ಅದಕ್ಕೂ ಒಂದು ಮಾರ್ಗವನ್ನು ಸೈನ್ಯಾಧಿಕಾರಿಗಳು ಕಂಡುಕೊಂಡಿದ್ದಾರೆ. ಭಟ್ಟಾಚಾರ್ಜಿ ಅವರು ಹೇಳುವಂತೆ "ಇವತ್ತು ಈಶಾನ್ಯ ರಾಜ್ಯಗಳಲ್ಲಿ ಮತ್ತು ಕಾಶ್ಮೀರದಲ್ಲಿ ರೇಷನ್ ಕಾರ್ಡ್, ಮತದಾನದ ಚೀಟಿ ತರಹದ ದಾಖಲೆಗಳನ್ನು ಹೊಂದಿರದವರು ಕೊಲೆಗೀಡಾಗುವ ಅಪಾಯದಲ್ಲಿ ಸದಾ ಇರುತ್ತಾರೆ." ಆ ಸಂಗತಿ ಹಲವಾರು ಬಾರಿ ಕಾಶ್ಮೀರದಲ್ಲಿ ಸಾಬೀತಾಗಿದೆ. ಉಗ್ರರೊಂದಿಗೆ ಯಾವುದೇ ಸಂಬಂಧ ಹೊಂದಿರದಿದ್ದರೂ, ಅಮಾಯಕ ಕೂಲಿಗಳನ್ನು, ಕಾರ್ಪೆಂಟರ್‌ಗಳನ್ನು ಕೊಂದು ಹಾಕಿ ಅವರನ್ನೆಲ್ಲ ಉಗ್ರರು ಎಂದು ಬಿಂಬಿಸಿದ್ದು ಸಾಬೀತಾಗಿದೆ.

ಸೈನ್ಯಾಧಿಕಾರಿಯು ಲೇಖಕರ ಮುಂದೆ ಹೇಳಿರುವಂತೆ ಈಶಾನ್ಯ ರಾಜ್ಯಗಳಲ್ಲಿ ಸೈನಿಕರಿಗೆ ಅಮಾಯಕ ಜನರನ್ನು 'ಸಪ್ಲೈ' ಮಾಡಲು ಭೂಗತ ಜಗತ್ತು ನೆರವಾಗುತ್ತದೆ. ಅದರಲ್ಲೂ ಕೂಲಿ ಮಾಡಿಕೊಂಡು ಜೀವನ ನಡೆಸಲು ಅಕ್ರಮವಾಗಿ ಬಾಂಗ್ಲಾದೇಶದಿಂದ ಈಶಾನ್ಯ ರಾಜ್ಯಗಳಿಗೆ ನುಸುಳುವ ಜನ ಹೀಗೆ ಬಲಿಯಾಗುವವರಲ್ಲಿ ಹೆಚ್ಚು. ಯಾಕೆಂದರೆ ಇಲ್ಲಿ ಯಾರಿಗೂ ಅವರ ಪರಿಚಯ ಇರುವುದಿಲ್ಲ. ಗುರುತಿನ ಚೀಟಿಯಾಗಲಿ, ದಾಖಲೆಯಾಗಲಿ ಮೊದಲೇ ಇರುವುದಿಲ್ಲ. ಅಂಥವರನ್ನು ಸೈನಿಕರು ಕೊಂದು ಉಗ್ರರು ಎಂದು ಹಣೆಪಟ್ಟಿ ಕಟ್ಟಿದರೆ ಪ್ರಶ್ನಿಸುವವರಾದರೂ ಯಾರು?

ಭೂಗತ ಜಗತ್ತು ಪುಕ್ಕಟೆಯಾಗೇನೂ ಮಾನವರನ್ನು ಸಪ್ಲೈ ಮಾಡುವುದಿಲ್ಲ. ಅದಕ್ಕೆ ಹಣ ಕೊಡಲೇಬೇಕು. ಈ ಹಣವನ್ನು ಸರ್ಕಾರವೇನೂ ಕೊಡುವುದಿಲ್ಲವಲ್ಲ. ಅದಕ್ಕೆ ಸೈನ್ಯಾಧಿಕಾರಿಗಳೂ ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಅವೇನೆಂದರೆ ಅಫೀಮು ಮಾರಾಟ ಮಾಡುವವರಿಂದ, ನಾಟ ಕಳ್ಳಸಾಗಾಣಿಕೆ ಮಾಡುವವರಿಂದ ಹಫ್ತಾ ಪಡೆಯುವುದು. ಇನ್ನೊಂದು ಮಾರ್ಗ 'ಸದ್ಭಾವನಾ' ಎಂಬ ಯೋಜನೆ. ನಾನು ಈಶಾನ್ಯ ರಾಜ್ಯಗಳಲ್ಲಿ ಪ್ರವಾಸ ಮಾಡಿದಾಗ ಹಲವಾರು ಕಡೆ ಸೈನ್ಯದ ತುಕಡಿಗಳು ಬಸ್‌ಸ್ಟ್ಯಾಂಡ್, ನೀರಿನ ಟ್ಯಾಂಕ್ ಇತ್ಯಾದಿಗಳನ್ನು ನಿರ್ಮಿಸಿ ಅವುಗಳ ಮೇಲೆ 'ಇದು ಇಂತಹ ಸೈನ್ಯದ ತುಕಡಿಯ ಕೊಡುಗೆ' ಎಂದು ಬರೆದಿದ್ದನ್ನು ಗಮನಿಸಿದ್ದೆ. ಅವೆಲ್ಲ ಅಲ್ಲಿನ ಜನರ ವಿಶ್ವಾಸ ಗಳಿಸಲು ಮಾಡಿರುವ ಸಮಾಜ ಸೇವೆ ಎಂದುಕೊಂಡಿದ್ದೆ. ಆದರೆ ಈ ಪುಸ್ತಕದಿಂದ ಅದೆಲ್ಲವೂ ಒಂದು ಮಸಲತ್ತು ಎಂದು ಗೊತ್ತಾಯಿತು. ಯಾಕೆಂದರೆ ಸೈನ್ಯಾಧಿಕಾರಿಯು ಹೇಳಿರುವಂತೆ "ಒಂದು ಸೈನ್ಯದ ತುಕಡಿ ಹೆಚ್ಚಿನ ಸಂಖ್ಯೆಯಲ್ಲಿ ಉಗ್ರರನ್ನು ಕೊಂದರೆ ಅವರಿಗೆ ಸದ್ಭಾವನಾ ಯೋಜನೆಯಡಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಲಾಗುತ್ತದೆ. ಹೆಚ್ಚಿನ ಹಣ ಸಿಕ್ಕ ಕೂಡಲೇ ಹೆಚ್ಚಿನ ಹೆಣಗಳು ಬೀಳುತ್ತವೆ. ಇದೊಂದು ವಿಷವೃತ್ತ ಇದ್ದಂತೆ."

ನಮ್ಮ ಸುಪ್ರೀಮ್ ಕೋರ್ಟ್ ಮತ್ತು ನಿವೃತ್ತ ನ್ಯಾಯಾಧೀಶ ಸುರೇಶ್ ಹೊಸ್ಬೆಟ್ ಸ್ಪಷ್ಟಪಡಿಸಿರುವಂತೆ ಪೊಲೀಸರು ಮತ್ತು ಸೈನಿಕರು ನಡೆಸುವ ಎನ್‌ಕೌಂಟರ್‌ಗಳು ಹೆಚ್ಚಾಗಿ ನಕಲಿ ಎನ್‌ಕೌಂಟರ್‌ಗಳೇ ಆಗಿರುತ್ತವೆ. ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುವಂತೆ ಈ ಪುಸ್ತಕದಲ್ಲಿ ಸೈನ್ಯವು ಮೂರು ತರಹದ ಎನ್‌ಕೌಂಟರ್ ನಡೆಸುತ್ತದೆ ಎಂದು ಪಟ್ಟಿ ಮಾಡಲಾಗಿದೆ. ಅವುಗಳು ಹೀಗಿವೆ: ಶಸ್ತ್ರಸಜ್ಜಿತ ಉಗ್ರರು ಮತ್ತು ಸೈನ್ಯದ ನಡುವೆ ಚಕಮಕಿ ನಡೆದು ಸಾವುಗಳು ಸಂಭವಿಸಿದರೆ ಅದು 'ಅಸಲಿ ಎನ್‌ಕೌಂಟರ್'. ಶಸ್ತ್ರಾಸ್ತ್ರಗಳನ್ನು ಹೊಂದಿರದ ಉಗ್ರನನ್ನು ಕೊಂದಾಗ ಅದು 'ನಕಲಿ ಎನ್‌ಕೌಂಟರ್'. ಅಮಾಯಕರನ್ನು ಕೊಂದು ಹಾಕಿದಾಗ ಅದು 'ಸುಳ್ಳು ಎನ್‌ಕೌಂಟರ್'. ಅದೆಂತಹದ್ದೇ ಎನ್‌ಕೌಂಟರ್ ಆಗಿದ್ದರೂ, ಅದರ ಅಸಲಿ/ನಕಲಿ/ಸುಳ್ಳುತನ ಮುಖ್ಯವಾಗುವುದಿಲ್ಲ. ಯಾಕೆಂದರೆ ಪ್ರತಿ ಎನ್‌ಕೌಂಟರ್‌ಗೆ ಸೈನ್ಯದಲ್ಲಿ ಪಾಯಿಂಟ್‌ಗಳನ್ನು ಕೊಡಲಾಗುತ್ತದೆ. ಉಗ್ರರು ಶರಣಾದರೆ ಎರಡು ಪಾಯಿಂಟ್; ಉಗ್ರರನ್ನು ಸೆರೆ ಹಿಡಿದರೆ ಮೂರು ಪಾಯಿಂಟ್; ಉಗ್ರರನ್ನು ಕೊಂದು ಹಾಕಿದರೆ ಐದು ಪಾಯಿಂಟ್. ಈ ಪಾಯಿಂಟ್ ಆಧಾರದ ಮೇಲೆ ಪ್ರಶಸ್ತಿ ಬಡ್ತಿ, ಉತ್ತಮ ಜಾಗಕ್ಕೆ ವರ್ಗಾವಣೆ ಇತ್ಯಾದಿಗಳು ನಿರ್ಧಾರವಾಗುತ್ತದೆ. ಇಂತಹ ಲಾಭಗಳನ್ನು ಪಡೆಯಲು ಹಲವು ಸೈನ್ಯಾಧಿಕಾರಿಗಳು ಮತ್ತು ತುಕಡಿಗಳು ಅಮಾಯಕರನ್ನು ಕೊಂದು ತಮ್ಮ ಪಾಯಿಂಟ್‌ಗಳನ್ನು ಹೆಚ್ಚಿಸಿಕೊಳ್ಳುತ್ತಾರೆ. ಇದನ್ನು ಗಮನಿಸಿರುವ ಸುಪ್ರೀಂಕೋರ್ಟ್ ಸಹ ತನ್ನ ತೀರ್ಪೊಂದರಲ್ಲಿ "ಬಡ್ತಿಗಾಗಿ, ಪ್ರಶಸ್ತಿಗಳಿಗಾಗಿ ನಕಲಿ ಎನ್‌ಕೌಂಟರ್‌ಗಳು ನಡೆಯುತ್ತಿದ್ದು ಇವೆಲ್ಲ ಸೈತಾನರಂತೆ ಪ್ಲಾನ್ ಮಾಡಿ ಕಾರ್ಯಾಚರಣೆಗೆ ಇಳಿಸಲಾಗುತ್ತಿದೆ" ಎಂದಿತ್ತು.

"ಒಮ್ಮೆ ಏನಾಯಿತೆಂದರೆ, ಪ್ರಶಸ್ತಿ ಪಡೆಯಲು ಒಂದು ಸೈನ್ಯದ ತುಕಡಿಗೆ ಹತ್ತು ಪಾಯಿಂಟ್‌ಗಳ ಕೊರತೆ ಇತ್ತು. ಕೇವಲ ಅಷ್ಟು ಕಡಿಮೆ ಪಾಯಿಂಟ್‌ಗಳಿಂದ ಅವರು ಅಲ್ಲಿಯತನಕ ಕಷ್ಟಪಟ್ಟು ಕಲೆಹಾಕಿದ್ದ ಪಾಯಿಂಟ್‌ಗಳೆಲ್ಲ ವ್ಯರ್ಥವಾಗುತ್ತಿದ್ದವು. ಕೊನೆಗೆ ವಿಧಿ ಇಲ್ಲದೆ ಅವರು ಮಾಫಿಯಾ ಜನರನ್ನು ಸಂಪರ್ಕಿಸಿದರು. ಆಗತಾನೆ ಬಾಂಗ್ಲಾದೇಶದಿಂದ ಅಕ್ರಮವಾಗಿ ನುಸುಳಿ ಬಂದಿದ್ದ ಇಬ್ಬರನ್ನು ಹಿಡಿದು ಸೈನಿಕರಿಗೆ ಕೊಟ್ಟರು. ಅವರಿಬ್ಬರನ್ನು ಒಂದು ವಾರದ ಮಟ್ಟಿಗೆ ಸಿಪಾಯಿಗಳ ಶಿಬಿರದಲ್ಲೇ ಇಡಲಾಗಿತ್ತು. ಒಂದು ದಿನ ಮುಂಜಾನೆ ಮೂರುಮೂವತ್ತಕ್ಕೆ ಅವರಿಬ್ಬರನ್ನು ಕೊಂದು, ಅವರು ಉಗ್ರರು ಎಂದು ಹೇಳಲಾಯಿತು. ಮಣಿಪುರದ ಸಿಪಾಯಿಗಳ ಶಿಬಿರಗಳಲ್ಲಿ ಹತ್ತಾರು ಯುವಕರನ್ನು ಕೂಡಿ ಇಟ್ಟಿರಲಾಗುತ್ತದೆ. ಇವರುಗಳು ಒಂದುರೀತಿಯಲ್ಲಿ ಬ್ಯಾಂಕ್ ಅಕೌಂಟ್ ಇದ್ದಂತೆ. ಅಗತ್ಯ ಬಿದ್ದಾಗ ಅವರನ್ನು ಅಕೌಂಟ್‌ನಿಂದ ವಿತ್‌ಡ್ರಾ ಮಾಡಿ ಉಪಯೋಗಿಸಲಾಗುತ್ತದೆ" ಎಂದು ಆ ಅನಾಮಧೇಯ ಸೈನ್ಯಾಧಿಕಾರಿ ಹೇಳಿರುವುದನ್ನು ಓದಿದಾಗ ಯಾರಿಗಾದರೂ ಶಾಕ್ ಆಗದೆ ಇರದು.

ಅಕ್ರಮ ಶಸ್ತ್ರಾಸ್ತ್ರಗಳ ಖರೀದಿಯಲ್ಲಿ ಭಾರತೀಯ ಸೈನ್ಯವೇ ಪ್ರಮುಖ ಗ್ರಾಹಕ ಎಂಬ ಮತ್ತೊಂದು ಶಾಕಿಂಗ್ ವಿಚಾರವನ್ನು ಈ ಪುಸ್ತಕ ಬಹಿರಂಗಪಡಿಸಿದೆ. ಯಾಕೆಂದರೆ ಅಮಾಯಕರನ್ನು ಕೊಂದಾಗ ಅವರು ಉಗ್ರರು ಎಂದು ಬಿಂಬಿಸಲು ಅವರ ಶವಗಳ ಹತ್ತಿರ ಬಂದೂಕು, ಬಾಂಬು ಇತ್ಯಾದಿಗಳನ್ನು ಇಡಬೇಕಲ್ಲ. ಜೊತೆಗೆ ಅಮಾಯಕರನ್ನು ಶರಣಾದ ಉಗ್ರರು ಎಂದು ತೋರಿಸುವಾಗಲೂ ಅವರೆಲ್ಲ ತಮ್ಮ ಶಸ್ತ್ರಾಸ್ತ್ರಗಳೊಂದಿಗೆ ಶರಣಾಗಿದ್ದಾರೆ ಎಂದು ತೋರಿಸಲೂ ಬಂದೂಕುಗಳು ಬೇಕಲ್ಲ. ಇದಕ್ಕೆಂದೇ ಸೈನ್ಯಾಧಿಕಾರಿಗಳು ಅಕ್ರಮ ಮಾರುಕಟ್ಟೆಯಲ್ಲಿ ಶಸ್ತ್ರಾಸ್ತ್ರಗಳನ್ನು ಖರೀದಿಸುತ್ತಾರೆ. "ಹೀಗೆ ಖರೀದಿಸಿದ ಗನ್, ಬುಲೆಟ್ ಇತ್ಯಾದಿಗಳ ಲೆಕ್ಕ ಇಟ್ಟಿರಲಾಗುತ್ತದೆ. ಹಲವೊಮ್ಮೆ ಕೊರತೆ ಬಿದ್ದಾಗ ಹಿಂದೆ ಪ್ರದರ್ಶಿಸಿದ್ದ ಅಸ್ತ್ರಗಳನ್ನೇ ಮತ್ತೊಮ್ಮೆ ತೋರಿಸಲಾಗುತ್ತದೆ. ಆದರೆ ಮಾಧ್ಯಮದವರು ಆ ಗನ್, ಬಂದೂಕು ಇತ್ಯಾದಿಗಳ ಮೇಲೆ ಬರೆದಿರುವ ಸಂಖ್ಯೆಗಳನ್ನು ಗಮನಿಸುವುದಿಲ್ಲವಾದ್ದರಿಂದ ಈ ಸತ್ಯ ಹೊರಗೆ ಬರುವುದಿಲ್ಲ" ಎಂದು ಅವರು ಹೇಳಿದ್ದಾರೆ.

ಆಫ್‌ಸ್ಪಾ ಇರುವುದರಿಂದ ಕೊಲೆಗಡುಕ ಸೈನಿಕರು ಸುಲಭವಾಗಿ ಬಚಾವಾಗುತ್ತಾರೆ. ಆದರೆ ಕೆಲವೊಮ್ಮೆ ತಮ್ಮ ಕಾರ್ಯಾಚರಣೆಯಲ್ಲಿ ಎಡವಿ ಸಿಕ್ಕಿಬೀಳುತ್ತಾರೆ. ಹಾಗೆ ಸಿಕ್ಕಿಬಿದ್ದವರಲ್ಲಿ ಮೇಜರ್ ಶ್ರೀರಾಮ್ ಕುಮಾರ್ ಎಂಬಾತನ ಪ್ರಕರಣ ಮುಖ್ಯ. ಈತ ಅಸ್ಸಾಂನಲ್ಲಿ ಇದ್ದಾಗ ಹಲವಾರು ಎನ್‌ಕೌಂಟರ್‌ಗಳು ನಡೆದಿದ್ದವು. ಈ ಹಿನ್ನೆಲೆಯಲ್ಲಿ ಶ್ರೀರಾಮ್ ಕುಮಾರ್ 'ಉಗ್ರರನ್ನು ಸದೆಬಡಿದಿದ್ದಕ್ಕೆ' ಮತ್ತು 'ಜನರಿಗೆ ನೆರವು ನೀಡಿದ್ದಕ್ಕೆ' ಆತನಿಗೆ ಅಶೋಕಚಕ್ರವನ್ನು ಕೊಟ್ಟು ಗೌರವಿಸಲಾಯಿತು.

ಆದರೆ ಆತ ಕೊಂದ 12 ಉಗ್ರರಲ್ಲಿ ಇಬ್ಬರ ಹೆಸರು ನೊಬೊ ಮತ್ತು ಗೋವಿಂದ್. ಸಂಬಂಧಿಕರಾಗಿದ್ದ ನೊಬೊ ಮತ್ತು ಗೋವಿಂದ್ ಎಂಬ 'ಉಗ್ರರು' ಪೊಲೀಸ್ ಮತ್ತು ಸೈನ್ಯದ ತಂಡದ ಮೇಲೆ ದಾಳಿ ಮಾಡಿದ್ದರಿಂದ ಅವರನ್ನು ಕೊಂದು ಹಾಕಲಾಯಿತು ಎಂದು ಶ್ರೀರಾಮ್ ಹೇಳಿದ್ದ. ಆದರೆ ಅವರಿಬ್ಬರ ಸಂಬಂಧಿಕರು ಮತ್ತು ಹಲವು ಮಾನವಹಕ್ಕು ಸಂಘಟನೆಗಳು ಆ ಪ್ರಕರಣವನ್ನು ಪ್ರಶ್ನಿಸಿ ಸುಪ್ರೀಮ್ ಕೋರ್ಟ್ ಮೆಟ್ಟಿಲೇರಿದರು. ಆಗ ಸುಪ್ರೀಮ್ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರ ನೇತೃತ್ವದಲ್ಲಿ ಒಂದು ವಿಚಾರಣಾ ಆಯೋಗವನ್ನು ರಚಿಸಿತು. ಮರಣೋತ್ತರ ಪರೀಕ್ಷೆಯು ನೊಬೊಗೆ ಹಿಂದಿನಿಂದ ನಾಲ್ಕು ಗುಂಡುಗಳನ್ನು ಹಾರಿಸಲಾಗಿತ್ತು ಎಂದೂ, ಗೋವಿಂದನಿಗೆ ಹತ್ತಿರದಿಂದಲೇ 16 ಗುಂಡುಗಳನ್ನು ಹಾರಿಸಲಾಗಿತ್ತೆಂದು ಹೇಳಿತ್ತು. ಇದನ್ನು ಮತ್ತು ಇತರೆ ಸಾಕ್ಷಿಗಳನ್ನು ಪರೀಕ್ಷಿಸಿದ ಹೆಗ್ಡೆ ಆಯೋಗವು "ಇದು ನಕಲಿ ಎನ್‌ಕೌಂಟರ್" ಎಂದು ತೀರ್ಪು ನೀಡಿತ್ತು.

ಆದರೇನಂತೆ, ಇವತ್ತಿಗೂ ಈ ಕೊಲೆಗಡುಕ ಶ್ರೀರಾಮ ಕುಮಾರನಿಂದ ಅಶೋಕ ಚಕ್ರವನ್ನು ಹಿಂದೆ ಪಡೆದಿಲ್ಲ. ಅವನಿಗೆ ಶಿಕ್ಷೆ ವಿಧಿಸಿಲ್ಲ. ಸೈನ್ಯದಿಂದ ಹೊರಗೆ ದೂಡಿಲ್ಲ. ಬದಲಾಗಿ ಈಗ ಆತ ಡೆಹರಾಡೂನ್‌ನಲ್ಲಿರುವ ಪ್ರತಿಷ್ಠಿತ ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ ತರಬೇತುದಾರನಾಗಿದ್ದಾನೆ!!

ಇದು ಅನ್ಯಾಯವಲ್ಲವೆ? ನಮ್ಮ ಸೈನ್ಯ ಮತ್ತು ಸರ್ಕಾರ ಇಂತಹ ಕೊಲೆಗಡುಕರನ್ನು ರಕ್ಷಿಸುತ್ತಿದೆಯಲ್ಲವೆ? ಅಮಾಯಕರಿಗೆ ಅನ್ಯಾಯ ಮಾಡಲಾಗುತ್ತಿದೆಯಲ್ಲವೇ?

ದೇಶಭಕ್ತಿಯೆಂದರೆ ಸೈನ್ಯಕ್ಕೆ ಜೈಕಾರ ಹಾಕುವುದಲ್ಲ. ಅದು ಹಳಿ ತಪ್ಪದಂತೆ ಎಚ್ಚರ ವಹಿಸುತ್ತಾ ಅದನ್ನು ಪ್ರಶ್ನಿಸುವುದೂ ಆಗಿದೆ. ಯಾಕೆಂದರೆ ಭಾರತೀಯ ಸೇನೆ ಪ್ರಶ್ನಾತೀತವಲ್ಲ.

ನಂಜನಗೂಡು ಸಮಾವೇಶದಲ್ಲಿ ಸಿದ್ದು 'ಮಹಾ' ಪ್ರಸಾ



ನಂಜನಗೂಡು ಸಮಾವೇಶದಲ್ಲಿ ಸಿದ್ದರಾ...

ರಾಜ್ಯದ ಜನರ ಕಣ್ಣು ಸದ್ಯ ನಂಜನಗೂಡಿನತ್ತ ನೆಟ್ಟಿದೆ. ಸಚಿವಸ್ಥಾನದಿಂದ ಕೈಬಿಟ್ಟದ್ದಕ್ಕೆ ಸ್ವಾಭಿಮಾನದ ಹಠಕ್ಕೆ ಬಿದ್ದು ಪಕ್ಷ ತೊರೆದಿರುವ ಶ್ರೀನಿವಾಸ ಪ್ರಸಾದ್ ತಾಲ್ಲೂಕಿನಲ್ಲಿ ಅನಿರೀಕ್ಷಿತ ಉಪಚುನಾವಣೆಯೊಂದನ್ನು ತಂದಿಕ್ಕಿದ್ದಾರೆ. ಒಂದು ಕಾಲಕ್ಕೆ ಕುಚಿಕ್ಕು ಗೆಳೆಯರಂತಿದ್ದ ಸಿದ್ದು-ಪ್ರಸಾದ್ ಜೋಡಿಯಲ್ಲಿ ಬಿರುಕು ಬಂದಿರೋದನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಜೆಡಿಎಸ್-ಬಿಜೆಪಿಗಳು ಹವಣಿಸುತ್ತಿರುವ ಹೊತ್ತಿನಲ್ಲೇ ನಂಜನಗೂಡಿನಲ್ಲಿ ಭರ್ಜರಿ ಸಮಾವೇಶ ಮಾಡುವ ಮೂಲಕ ಸಿಎಂ ಸಿದ್ದರಾಮಯ್ಯ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾದದ್ದು ಲೇಟೆಸ್ಟ್ ಬೆಳವಣಿಗೆ. ಪ್ರಸಾದ್ ಪಕ್ಷ ತೊರೆದರು ಅನ್ನುವುದಕ್ಕಿಂತ ಸಂಕಷ್ಟ ಸಮಯದಲ್ಲಿ ಉಪಚುನಾವಣೆಯ ಹೊರೆಯನ್ನು ಸರ್ಕಾರದ ಮೇಲೆ ಹೊರಿಸಿ ಆಡಿಕೊಳ್ಳೋರ ಬಾಯಿಗೆ ಆಹಾರವಾಗುವಂತೆ ಮಾಡುತ್ತಿದ್ದಾರಲ್ಲ ಅನ್ನೋ ಆತಂಕವೇ ಕಾಂಗ್ರೆಸ್ಸಿಗರನ್ನು ಅತಿಯಾಗಿ ಕಾಡುತ್ತಿರುವಂತಿದೆ. ಒಂದೊಮ್ಮೆ ಈ ಉಪಚುನಾವಣೆಯಲ್ಲಿ ಸೋತರೆ, ಇನ್ನೊಂದೂವರೆ ವರ್ಷದಲ್ಲಿ ಎದುರಾಗುವ ವಿಧಾನಸಭಾ ಚುನಾವಣೆಗೆ ಸಜ್ಜಾಗಲು ಪಕ್ಷದ ಆತ್ಮಸ್ಥೈರ್ಯವನ್ನು ಕುಸಿಯುವಂತೆ ಮಾಡುತ್ತೆ ಮತ್ತು ವಿರೋಧ ಪಕ್ಷಗಳು ಅದನ್ನೇ ನೆಪವಾಗಿಟ್ಟುಕೊಂಡು ಸರ್ಕಾರದ ಕಾಲೆಳೆಯುವ ಪ್ರಯತ್ನ ಮಾಡಲಿವೆ ಎನ್ನುವ ರಾಜಕೀಯ ಲೆಕ್ಕಾಚಾರಗಳೆಲ್ಲ ಕೆಪಿಸಿಸಿ ಕಚೇರಿಯಲ್ಲಿ ಕದಲಿದ್ದರಿಂದಲೇ ಅಕ್ಟೋಬರ್ 23ರ ನಂಜನಗೂಡು ಸಮಾವೇಶವನ್ನು ಯಶಸ್ವಿಯಾಗಿಸಲು ಇನ್ನಿಲ್ಲದ ಕಸರತ್ತು ನಡೆದದ್ದು. ಇಲ್ಲದೇಹೋಗಿದ್ದರೆ, ಶ್ರೀನಿವಾಸ ಪ್ರಸಾದ್‌ರನ್ನು ಸಂಪುಟದಿಂದ ಕೈಬಿಟ್ಟ ಕಾರಣಕ್ಕೆ ಅಘೋಷಿತ ಬಂದ್‌ಗೆ ತುತ್ತಾದಂತೆ ಸ್ತಬ್ಧವಾಗಿದ್ದ ನಂಜನೂಡಿನಲ್ಲಿ ಅದೇ ಶ್ರೀನಿವಾಸ ಪ್ರಸಾದ್ ವಿರುದ್ಧ ಅನಾಮತ್ತು ಎಂಟತ್ತು ಸಾವಿರ ಜನರನ್ನು ಜಮಾಯಿಸಿ ಸಮಾವೇಶ ಮಾಡಲು ಸಾಧ್ಯವಾದದ್ದು.

ಶ್ರೀನಿವಾಸ ಪ್ರಸಾದ್ ಧೀಮಂತ ರಾಜಕಾರಣಿ ಎನ್ನುವುದು ಎಷ್ಟು ಸತ್ಯವೋ ತಮ್ಮ ರಾಜಕೀಯ ಜೀವನದ ಸಂಧ್ಯಾಕಾಲದಲ್ಲಿ ಒಂದು ಕೆಟ್ಟ ನಿರ್ಧಾರ ತೆಗೆದುಕೊಂಡಿದ್ದಾರೆ ಎನ್ನುವುದೂ ಅಷ್ಟೇ ಸತ್ಯ. ಸವಾಲಿಗೆ ಪ್ರತಿ ಸವಾಲೇ ರಾಜಕಾರಣದ ಮೂಲಪಟ್ಟು. ಪ್ರಸಾದ್‌ರ ಗತ ಬದುಕನ್ನು ನೋಡಿಕೊಂಡು ಅವರ ಟೀಕೆಗಳಿಗೆ ತೆಪ್ಪಗಿರೋದು ಕಾಂಗ್ರೆಸ್ ಮತ್ತು ಸಿದ್ದು ಪಾಲಿಗೆ ಸಾಧ್ಯವಿಲ್ಲದ ಮಾತು. ಖಾತೆಯಿಂದ ಕೈಬಿಟ್ಟ ನಂತರ ಪ್ರಸಾದ್ ತೆಗೆದಿದ್ದ ಕ್ಯಾತೆಗಳಿಗೆಲ್ಲ ಉತ್ತರ ಕೊಡೋದು ಕಾಂಗ್ರೆಸ್‌ಗೆ ಅನಿವಾರ್ಯವಾಗಿತ್ತು. ಅದಕ್ಕೊಂದು ಸೂಕ್ತ ವೇದಿಕೆಯೂ ಬೇಕಿತ್ತು. ಹಾಗಾಗಿಯೇ ಅಕ್ಟೋಬರ್ 23ರ ತಾಲ್ಲೂಕು ಮಟ್ಟದ ಕಾರ್ಯಕರ್ತರ ಸಮಾವೇಶ ನಂಜನಗೂಡಿನಲ್ಲಿ ಆಯೋಜನೆಯಾದದ್ದು. ಪ್ರಸಾದ್‌ಗೆ ಉತ್ತರ ಕೊಡುವುದರ ಜೊತೆಗೆ ಶ್ರೀನಿವಾಸ ಪ್ರಸಾದ್‌ರನ್ನು ಮುಂದಿಟ್ಟುಕೊಂಡು ಆಟಕಟ್ಟಲು ನೋಡುತ್ತಿರುವ ವಿರೋಧ ಪಕ್ಷಗಳಿಗೂ ಸಣ್ಣದೊಂದು ಬಿಸಿ ಮುಟ್ಟಿಸುವುದು ಮತ್ತು ಉಪಚುನಾವಣೆಗೆ ಪ್ರಸಾದ್‌ಗೆ ಎದುರಾಗಿ ಸಚಿವ ಎಚ್.ಸಿ. ಮಹದೇವಪ್ಪನ ಪುತ್ರ ಸುನೀಲ್ ಬೋಸ್‌ನನ್ನು ನಂಜನಗೂಡಿನಲ್ಲಿ ಪ್ರತಿಷ್ಠಾಪಿಸುವುದು ಕೂಡಾ ಸಮಾವೇಶದ ಹಿಂದಿನ ಉದ್ದೇಶಗಳಾಗಿದ್ದವು. ಹಾಗಾಗಿ ಇಡೀ ಕಾರ್ಯಕ್ರಮದ ದೇಖಾರೇಖಿಯನ್ನು ಮಂತ್ರಿ ಮಹದೇವಪ್ಪನವರಿಗೇ ವಹಿಸಿಕೊಡಲಾಗಿತ್ತು.

ಪಕ್ಷವೊಂದರ ತಾಲ್ಲೂಕು ಮಟ್ಟದ ಸಮಾವೇಶವೊಂದರಲ್ಲಿ ಈ ಮಟ್ಟದ ಕಾರ್ಯಕರ್ತರು ಜಮಾಯಿಸಿದ್ದುದು ದಾಖಲೆಯೇ ಸರಿ. ಈ ಸಮಾವೇಶಕ್ಕೆ ಇಷ್ಟೊಂದು ಜನ ಕಾರ್ಯಕರ್ತರು ಜಮಾಯಿಸಲು ಹಲವು ಕಾರಣಗಳಿವೆ. ಪ್ರಸಾದ್ ಬಗ್ಗೆ ಯಾರ್‍ಯಾರ ಬಾಯಲ್ಲಿ ಏನೇನು ಅಣಿಮುತ್ತುಗಳು ಉದುರುತ್ತವೆ ಅನ್ನೋ ಕುತೂಹಲ ಕೆಲವರಲ್ಲಿದ್ದರೆ, ಇಷ್ಟುದಿನ ಶ್ರೀನಿವಾಸ ಪ್ರಸಾದ್ ಬೆಂಬಲಿಗರಾಗಿದ್ದು ಈಗಿಲ್ಲಿ ಅದೇ ಕಾರಣಕ್ಕೆ ಪಕ್ಷದಿಂದ ಉಚ್ಚಾಟಿಸುತ್ತಾರೋ ಎಂಬ ಭಯವನ್ನು ಹೋಗಲಾಡಿಸಿಕೊಳ್ಳುವುದಕ್ಕೋಸ್ಕರ ಮುಖ ತೋರಿಸಲು ಹಲವರು ಬಂದಿದ್ದರು. ಇನ್ನು ಕಾಂಗ್ರೆಸ್‌ನಲ್ಲೋ ಅಥವಾ



ಬೇರಾವುದೋ ಪಾರ್ಟಿಯಲ್ಲಿದ್ದುಕೊಂಡು ವೈಯಕ್ತಿಕವಾಗಿ ಪ್ರಸಾದ್‌ರ ಮುಖ ಕಂಡರಾಗದ ವಿವಿಧ ಸಮುದಾಯದ ನಾಯಕರೂ ಪ್ರಸಾದ್‌ಗೆ ಏಟುಕೊಡಲು ತಮ್ಮವರ ಸಮೇತ ಅಲ್ಲಿ ಜಮಾಯಿಸಿದ್ದರು. ಮುಖ್ಯವಾಗಿ ನಾಲೆಗಳಲ್ಲಿ ನೀರು ಹರಿಯದೆ ಪೈರು ಕೈತಪ್ಪಿ ಹೋಗುತ್ತಿರುವುದನ್ನು ಕಂಡ ರೈತಾಪಿ ವರ್ಗ ಬರುವ ಸಿಎಂ ಸಾಹೇಬರ ಮುಂದೆ ನೀರು ಬಿಡಿ ಅಂತ ಕೇಳಿದರೆ ನೀರು ಸಿಗಬಹುದೇನೋ ಅನ್ನೋ ಆಸೆಯಿಂದಲೂ ಅಲ್ಲಿ ಜಮಾಯಿಸಿದ್ದರು. ಇದನ್ನು ಸಾಬೀತುಪಡಿಸುವಂತಹ ಘಟನೆಯೂ ಅಲ್ಲಿ ನಡೆಯಿತು. ಮುಖ್ಯಮಂತ್ರಿಗಳು ಸಮಾವೇಶದಲ್ಲಿ ಮಾತನಾಡುವಾಗ ಜನ 'ಸ್ವಾಮಿ, ನಾಲೆಗಳಲ್ಲಿ ನೀರಿಲ್ಲ, ದಯಮಾಡಿ ನೀರು ಬಿಡಲು ಹೇಳಿ' ಅಂತ ಘೋಷಣೆ ಕೂಗಿದ್ದರು. ಅದಕ್ಕೆ ತಕ್ಷಣವೇ ಸ್ಪಂದಿಸಿದ ಸಿದ್ದರಾಮಯ್ಯನವರು 'ನಾಳೆಯಿಂದಲೇ ನೀರು ಬಿಡುತ್ತೇವೆ' ಎಂದು ಭರವಸೆ ನೀಡಿದ್ದರು ಮಾತ್ರವಲ್ಲ, ಉಪಚುನಾವಣೆ ಇರೋದರಿಂದ ಕೊಟ್ಟ ಮಾತಿನಂತೆ ಮಾರನೇ ದಿನದಿಂದಲೇ ನೀರು ಹರಿಸಲು ವ್ಯವಸ್ಥೆ ಮಾಡಿದ್ದಾರೆ. ಇನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹಮಂತ್ರಿ ಪರಮೇಶ್ವರ್, ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್, ಮಂತ್ರಿ ಮಹಾದೇವಪ್ಪ ಲೋಕಲ್ ಎಂಪಿ ಧ್ರುವನಾರಾಯಣರಂತಹ ಘಟಾನುಘಟಿಗಳ ದಂಡು ಸೇರುತ್ತದೆಂದರೆ ಜನ ಜಮಾಯಿಸುವುದು ಕಷ್ಟದ ಮಾತೇ? ಅಂತೂ ಶ್ರೀನಿವಾಸ ಪ್ರಸಾದ್ ವಿರುದ್ಧ ಕಾಂಗ್ರೆಸ್ ರಣಕಹಳೆ ಜೋರಾಗಿಯೇ ಮೊಳಗಿತು.

ಪ್ರಸಾದ್ ಬಗ್ಗೆ ಎಂದೂ ಖಾರವಾಗಿ ಮಾತನಾಡದ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಸಾದ್ ಕ್ಯಾತೆಗಳಿಗೆ ಖಾರವಾದ ತಿರುಗುಬಾಣ ಬಿಟ್ಟದ್ದು ಸಮಾವೇಶ ಹೈಲೈಟು. ತನ್ನನ್ನು ಮಂತ್ರಿಗಿರಿಯಿಂದ ಕೈಬಿಟ್ಟ ಕಾರಣಕ್ಕೆ, ಸಿದ್ದರಾಮಯ್ಯರನ್ನು 'ದಲಿತ ವಿರೋಧಿ' ಎಂದು ಕರೆದಿದ್ದ ಪ್ರಸಾದ್‌ಗೆ 'ಒಂದೇ ಜಿಲ್ಲೆಯಲ್ಲಿ ಒಂದೇ ಸಮಯದಲ್ಲಿ ಇಬ್ಬರು ದಲಿತರಿಗೆ ಮಂತ್ರಿ ಪದವಿ ನೀಡಿರುವ ನಾನು ದಲಿತ ವಿರೋಧಿಯೇ?' ಎನ್ನುವ ಮೂಲಕ ತಕ್ಕ ಉತ್ತರ ರವಾನೆ ಮಾಡಿದ್ದಾರೆ. ಪ್ರಸಾದ್ ಇದ್ದಾಗ ನಂಜನಗೂಡಿಗೆ ಎಷ್ಟು ಅನುಕೂಲವಾಯ್ತೊ ಇಲ್ಲವೋ ಗೊತ್ತಿಲ್ಲ, ಆದರೆ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ನಂತರ ಸರ್ಕಾರಕ್ಕೆ ಆ ಕ್ಷೇತ್ರದತ್ತ ವಿಶೇಷ ಆಸಕ್ತಿ ಹುಟ್ಟಿದಂತಿದೆ. ಅದಕ್ಕೆಂದೇ ಸಮಾವೇಶದಲ್ಲಿ ಹುರ ವ್ಯಾಪ್ತಿಯ 14 ಗ್ರಾಮಗಳ ಕುಡಿಯುವ ನೀರಿನ ಯೋಜನೆಗೆ 34 ಕೋಟಿ ರೂಪಾಯಿ ಮಂಜೂರು ಮಾಡುವುದಾಗಿ ಸಿದ್ದರಾಮಯ್ಯನವರು ಭರವಸೆ ನೀಡಿದ್ದಾರೆ. ಅಂದಹಾಗೆ ಈ ಹಿಂದೆ ಪ್ರಸಾದ್ ರಾಜೀನಾಮೆ ನೀಡಿದ ತಕ್ಷಣವೇ ನಂಜನಗೂಡು ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ 100 ಕೋಟಿ ರೂಪಾಯಿ ಅನುದಾನವನ್ನು ಸಿದ್ದರಾಮಯ್ಯನವರು ಘೋಷಿಸಿದ್ದನ್ನೂ ಇಲ್ಲಿ ಸ್ಮರಿಸಿಕೊಳ್ಳಬಹುದು. ಒಟ್ಟಿನಲ್ಲಿ ಉಪಚುನಾವಣೆ ಮುಗಿಯುವ ವೇಳೆಗೆ ಇನ್ನೆಷ್ಟು ಭರವಸೆಗಳು ನಂಜನಗೂಡನ್ನು ತೋಯಿಸಿ ಹಾಕಲಿವೆಯೋ ಕಾದುನೋಡಬೇಕು.

ಅದಿರಲಿ, ಇಡೀ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯನವರಿಗಿಂತ ಹೆಚ್ಚು ಮಿಂಚಿದ್ದು ಸಚಿವ ಎಚ್.ಸಿ. ಮಹಾದೇವಪ್ಪ ಮತ್ತವರ ಮಗ ಸುನೀಲ್ ಬೋಸ್. ಅದಕ್ಕೆ ಕಾರಣವೂ ಉಂಟು. ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ ಎನ್ನುವಂತೆ ಮಂತ್ರಿ ಮಹಾದೇವಪ್ಪನವರಿಗೆ ಎಲ್ಲಾ ಪೊಲಿಟಿಕಲ್ ಫಾದರ್‌ಗಳಿಗೆ ಇರುವಂತೆ ತಮ್ಮ ಮಗ ಬೋಸ್‌ಗೂ ಒಂದು ರಾಜಕೀಯ ಪ್ಲಾಟ್‌ಫಾರಂ ಕಲ್ಪಿಸಿಕೊಡಬೇಕೆಂಬ ಹಂಬಲ ಇದ್ದೇ ಇತ್ತು. ಮಹಾದೇವಪ್ಪನವರಿಗಿದ್ದ ಲಿಮಿಟೇಷನ್‌ಗಳಲ್ಲಿ ಅವರು ಅಂತಹ ಸಾಹಸಕ್ಕೆ ಕೈಹಾಕಬೇಕೆಂದರೆ ತಮ್ಮದೇ ಕ್ಷೇತ್ರವನ್ನು ಮಗನಿಗೆ ಬಿಟ್ಟುಕೊಟ್ಟು ತ್ಯಾಗ ಮಾಡಬೇಕಿತ್ತು, ಆದರೀಗ ಪ್ರಸಾದ್ ಪ್ರಸಂಗದಿಂದ ಅನಾಯಾಸವಾಗಿ ನಂಜನಗೂಡು ಅಂತಹ ಪ್ರಯೋಗಕ್ಕೆ ಅವಕಾಶ ಮಾಡಿಕೊಟ್ಟಿದೆ. ಪ್ರಸಾದ್ ಹೊರತಾಗಿ ಕಾಂಗ್ರೆಸ್‌ಗೆ ಇಲ್ಲಿ ಸ್ಪರ್ಧಿಗಳೇ ಇಲ್ಲವೆಂಬ ರಾಜಕೀಯ ಶೂನ್ಯತೆಯೇ ಕಾಂಗ್ರೆಸ್ ಪಕ್ಷ ಮಹದೇವಪ್ಪನವರ ಕಡೆ ಮುಖ ಮಾಡುವಂತೆ ಮಾಡಿತ್ತು, ಅದನ್ನವರು ಸರಿಯಾಗೇ ಬಳಸಿಕೊಂಡಿದ್ದಾರೆ. ನಂಜನಗೂಡು ಉಪಚುನಾವಣೆಗೆ ಸುನೀಲ್ ಬೋಸ್‌ನೇ ಕಾಂಗ್ರೆಸ್ ಅಭ್ಯರ್ಥಿ ಅನ್ನೋದು ಬಹುತೇಕ ಖಚಿತವಾಗಿದೆ. ಅವತ್ತಿನ ಸಮಾವೇಶದಲ್ಲಿ ಸುನೀಲ್ ಬೋಸ್ ವೇದಿಕೆ ಏರುತ್ತಿದ್ದಂತೆಯೇ ಜನಸ್ತೋಮದ ಗುಂಪೊಂದು 'ಬೋಸ್‌ಗೆ ಜೈಕಾರ' ಕೂಗಿದ್ದು ಇದನ್ನು ಸಾಬೀತು ಮಾಡುತ್ತೆ. ಈಗಾಗಲೇ ಮರಳು ಮಾಫಿಯಾ, ಪೊಲೀಸ್ ಸ್ಟೇಷನ್‌ನಲ್ಲಿ ಗುಂಡು


ಶ್ರೀನಿವಾಸ ಪ್ರಸಾದ್

ಪಾರ್ಟಿಯಂತಹ ಸಲ್ಲದ ಕಾರಣಗಳಿಂದ ಲೈಮ್‌ಲೈಟಿಗೆ ಬಂದಿದ್ದ ಬೋಸ್‌ಗೆ ಜನನಾಯಕ ಇಮೇಜು ತಂದುಕೊಡುವ ಸಮಾವೇಶದ ಉದ್ದೇಶ ಸಣ್ಣಗೆ ಸಾರ್ಥಕವಾದಂತಿದೆ.

ಇದ್ದುದರಲ್ಲಿ ತಣ್ಣಗೆ ಪ್ರತಿಕ್ರಿಯಿಸುವ ಎಚ್.ಸಿ. ಮಹದೇವಪ್ಪನವರು ಕೂಡಾ ಅವತ್ತು ಸಮಾವೇಶದುದ್ದಕ್ಕೂ ಪ್ರಸಾದ್ ವಿರುದ್ಧ ಕಿಡಿಕಾರುತ್ತಲೇ ಬಂದದ್ದು ನಂಜನಗೂಡಿನಲ್ಲಿ ವಿ.ಶ್ರೀನಿವಾಸ ಪ್ರಸಾದ್ ಜಾಗವನ್ನು ಮಗ ಬೋಸ್ ಮೂಲಕ ನಾನು ತುಂಬಬಲ್ಲೆ (ಕಿತ್ತುಕೊಳ್ಳಬಲ್ಲೆ) ಎಂಬಂತಿತ್ತು. ಶ್ರೀನಿವಾಸ ಪ್ರಸಾದ್ ಅವರು ಮಹದೇವಪ್ಪ ಅವರನ್ನು ಮರಳು ಲೂಟಿಕೋರ, ರಬ್ಬರ್‌ಸ್ಟಾಂಪ್ ಅಂತೆಲ್ಲ ಹಂಗಿಸಿದ್ದಕ್ಕೋ ಏನೋ ಪ್ರಸಾದ್ ಮೇಲೆ ತೀವ್ರ ವಾಗ್ದಾಳಿ ನಡೆಸಿದರು. ಇನ್ನು ಗೃಹಮಂತ್ರಿ ಡಾ.ಜಿ.ಪರಮೇಶ್ವರ್ ತಮ್ಮ ಭಾಷಣದುದ್ದಕ್ಕೂ ಪ್ರಸಾದ್ ಅವರನ್ನು ವಾಚಾಮಗೋಚರ ಟೀಕಿಸಿದ್ದಲ್ಲದೇ ಪ್ರಸಾದ್ ಮಂತ್ರಿಯಾದ, ಮಂತ್ರಿ ಮಾಡಿದ ಒಳಗುಟ್ಟುಗಳನ್ನು ಹೊರಗೆಡವಿದರು. 'ಬಿಜೆಪಿಯಲ್ಲಿ ಮಂತ್ರಿಯಾಗಿದ್ದಾಗ ಆ ಪಕ್ಷ ನಿಮ್ಮನ್ನು ನಗಣ್ಯ ಮಾಡಿತ್ತಲ್ಲ ಆವಾಗ ಎಲ್ಲಿ ಹೋಗಿತ್ತು ನಿಮ್ಮ ಸ್ವಾಭಿಮಾನ' ಅಂತ ಥೇಟು ಬಬ್ರುವಾಹನ ಸ್ಟೈಲಿನಲ್ಲಿ ಕಿಚಾಯಿಸಿದ ಪರಮೇಶ್ವರ್ 'ಕಂದಾಯ ಮಂತ್ರಿಯಾಗಿದ್ದಾಗ ಯಾವ ಜಿಲ್ಲೆಗೂ ಭೇಟಿ ನೀಡದೆ, ರಾಜ್ಯ ಬರಗಾಲದಿಂದ ತತ್ತರಿಸುತ್ತಿದ್ದಾಗಲೂ ಸ್ವಕ್ಷೇತ್ರಕ್ಕೂ ಭೇಟಿ ನೀಡದೆ ಕಂದಾಯ ಖಾತೆಯನ್ನು ನಿಭಾಯಿಸಿದ್ದೇ ಸನ್ಮಾನ್ಯ ಪ್ರಸಾದ್ ಅವರ ಸಾಧನೆ' ಎಂಬ ಸರ್ಟಿಫಿಕೇಟನ್ನೂ ದಯಪಾಲಿಸಿದರು. 'ಬರಗಾಲ ಮತ್ತು ಕಾವೇರಿ ಸಂಕಟದಲ್ಲಿ ಉಪಚುನಾವಣೆ ರಾಜ್ಯಕ್ಕೆ ಬೇಡವಾಗಿತ್ತು, ಪ್ರಸಾದ್ ಅವರಿಗೆ ಸಿದ್ಧಾಂತಕ್ಕಿಂತ ಸ್ವಾರ್ಥವೇ ಹೆಚ್ಚಾದದ್ದು ವಿಪರ್ಯಾಸ' ಅಂತ ಪಕ್ಷದ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ನಯವಾಗಿ ಚುಚ್ಚಿದರೆ, 'ಸಿದ್ದರಾಮಯ್ಯ ಅವರು ದಲಿತ ವಿರೋಧಿ ಎಂದು ಆರೋಪ ಮಾಡುವುದು ಸರಿಯಲ್ಲ' ಎನ್ನುವ ಮೂಲಕ ಸಂಸದ ಧ್ರುವನಾರಾಯಣ ಪ್ರಸಾದ್‌ಗೆ ... ಕೊಟ್ಟರು.


ಸಮಾವೇಶದ ನಂತರ ಶ್ರೀನಿವಾಸ್ ... ಬೇರುಗಳನ್ನೆಲ್ಲ ಕತ್ತರಿಸುವ ಕೆಲಸಕ್ಕೆ ಕಾಂಗ್ರೆ... ತೊಡಗಿಸಿಕೊಂಡಿದೆ. ಈಗಾಗಲೇ ಒಂದು... ಶ್ರೀನಿವಾಸ ಪ್ರಸಾದ್‌ರ ಬೆಂಬಲಿಗನೇ ಆಗಿದ್ದ... ಮಾಜಿ ಉಪಾಧ್ಯಕ್ಷ ಇಂದ್ರ ನೇತೃತ್ವದಲ್ಲಿ ನೂರಾರು... ಮುಖಂಡರು ಸಭೆ ಸೇರಿ ಪ್ರಸಾದ್ ಮೇಲೆ ಆರ... ಸುರಿಮಳೆಗೈದಿದ್ದಾರೆ. ಅಲ್ಲದೇ ಶ್ರೀನಿವಾಸ ... ಕಟ್ಟಾ ಬೆಂಬಲಿಗರನ್ನು ಪಕ್ಷ ವಿರೋಧಿ ಚಟು... ಆಧಾರದಲ್ಲಿ ಪಕ್ಷದಿಂದ ಉಚ್ಚಾಟಿಸಿ ಪಕ್ಷ ... ಚಟುವಟಿಕೆ ಮಾಡುವವರಿಗೆ ಎಚ್ಚರಿಕೆಯ ಸಂದೇ... ರವಾನಿಸಲಾಗಿದೆ.


ಇತ್ತ ಕಾಂಗ್ರೆಸ್‌ಗೆ ಕಾಂಗ್ರೆಸ್ಸೇ ಇದಿಯಾಗಿ ಶ್ರೀ... ಪ್ರಸಾದ್ ಮೇಲೆ ಮುರಕೊಂಡು ಬಿದ್ದು ಉಪಚು... ಸಜ್ಜಾಗುತ್ತಿದ್ದರೆ ಅತ್ತ ಕಾಂಗ್ರೆಸ್ ಟಿಕೆಟು ಯ... ಗ್ಯಾಂಬ್ಲಿಂಗೂ ಭರ್ಜರಿಯಾಗಿ ನಡೆಯುತ್ತಿದೆ. ... ಮಂತ್ರಿ ಮಹದೇವಪ್ಪನವರ ಪುತ್ರ ಸುನೀಲ್ ಬೋ... ಟಿಕೆಟು ನಿಕ್ಕಿ ಅಂತ ಹೇಳಲಾಗುತ್ತಿದ್ದರೂ ... ಇನ್ನೊಂದಷ್ಟು ಹೆಸರುಗಳೂ ಕೇಳಿಬ... ಚಾಮರಾಜನಗರದ ಮಾಜಿ ಸಂಸದ ಕಾಗಲವಾಡಿ... ಮತ್ತೊಬ್ಬ ಮಾಜಿ ಸಂಸದ ಗುಂಡ್ಲುಪೇಟೆಯ ಸಿ... ಮಾಜಿ ಶಾಸಕ ಭಾರತಿ ಶಂಕರ್, ದೇವನೂರ ... ಹೆಸರುಗಳ ಜೊತೆಗೆ ರಾಜ್ಯಪಾಲರಾಗಿದ್ದ ಬಿ.ರಾಚಯ್ಯ... ಪುತ್ರ, ಮಾಜಿ ಶಾಸಕ, ಈಗ ಬಿಜೆಪಿಯ ಅಂ... ಜಾಗದಲ್ಲಿರುವ ಎ.ಆರ್.ಕೃಷ್ಣಮೂರ್ತಿ ಅವರನ್ನು ... ತನ್ನ ತೆಕ್ಕೆಗೆ ಸೆಳೆದುಕೊಂಡು ಚುನಾವಣೆಗೆ ನಿ... ಎಂಬ ಮಾತುಗಳು ಕೇಳಿಬರುತ್ತಿವೆ. ಬಹುಶಃ ಕಾ... ಗೆಲ್ಲುವ ವಿಶ್ವಾಸ ಹೆಚ್ಚಾಗಿರಬೇಕು, ಆದಕ್ಕಾಗಿಯೇ ಅ... ಪಟ್ಟಿ ಹೆಚ್ಚಾಗುತ್ತಿದೆ. ಈ ಚುನಾವಣೆ ಮುಖ... ಸಿದ್ದರಾಮಯ್ಯ ಅವರಿಗೆ ಪ್ರತಿ... ವಿಷಯವಾಗಿರುವುದರಿಂದ ಶತಾಯಗತಾಯ ಅವ... ಚುನಾವಣೆಯಲ್ಲಿ ಕೈ ಅಭ್ಯರ್ಥಿಯನ್ನು ಗೆಲ್ಲಿಸಬೇ... ಇನ್ನು ಡಾ.ಎಚ್.ಸಿ.ಮಹದೇವಪ್ಪ ಅವರಿಗೆ ... ಸ್ಥಾಪಿಸುವ ಕನಸಿದೆ ಮತ್ತು ಮಗನನ್ನು ಶಾ... ಮಾಡಬೇಕೆನ್ನುವ ಹಂಬಲ ಇದೆ.

ಆದರೆ ಅದೇಕೋ ಕಾಣೆ, ಆರಂಭದಲ್ಲಿ ... ಮನೆಗೆ ದಾರಿ ಸವೆಸಿದ್ದ ಬಿಜೆಪಿಯ ಪ್ರತಾಪು ಇ... ಆ ಸುದ್ದಿಯನ್ನೇ ಎತ್ತುತ್ತಿಲ್ಲ, ಪ್ರಸಾದ್ ಅವರನ್ನು ... ಕರೆತಂದು ಅವರನ್ನೇ ವಿಧಾನಸಭೆ ವಿರೋಧ ... ನಾಯಕರನ್ನಾಗಿಸಲಾಗುತ್ತೆ ಎಂಬ ಸುದ್ದಿಯನ್ನು ಬಿ... ತಳ್ಳಿ ಹಾಕುತ್ತಿದ್ದಾರೆ. ಪ್ರಸಾದ್ ಬಿಜೆಪಿಗೆ ಸೇರುವ ... ಯಡಿಯೂರಪ್ಪನವರಿಗೆ ಬಿಟ್ಟದ್ದು ನನಗೂ ... ಸಂಬಂಧವಿಲ್ಲ ಅಂತ ಅಸಂಬದ್ಧವಾಗಿ ತಡಬಡಾ... ಪ್ರತಾಪ್ ಸಿಂಹ ಗೊಂದಲ ಸೃಷ್ಟಿಸುವ... ಸೀಮಿತವಾಗಿದ್ದಾನೆ. ಆದಾಗ್ಯೂ ಪ್ರಸಾದ್-ಬಿಜೆಪಿ ಮ... ಅಷ್ಟಾಗಿ ರಭಸವಾಗಿಲ್ಲ.

ಈ ನಡುವೆ ಪ್ರಸಾದ್ ಕೂಡಾ ನವೆಂಬರ್ ... ವಾರದಲ್ಲಿ ಅದೇ ನಂಜನಗೂಡಿನಲ್ಲಿ ಕಾಂಗ್ರೆಸ್ ಸಮಾ... ನಡೆಸಿದ ಅದೇ ಸ್ಥಳದಲ್ಲಿ ಕೃತಜ್ಞತಾ ಸಭೆ ನಡೆಸಿ ಕಾ... ಎಲ್ಲ ಪ್ರಶ್ನೆ, ಆರೋಪ, ವಾಗ್ದಾಳಿಗೆ ತಕ್ಕ ಉತ್ತರ ನೀ... ಎಂಬುದಾಗಿ ಗುಡುಗಿರೋದು ಸಮರವನ್ನು ಮತ್ತ... ರೋಚಕತೆಯ ಘಟ್ಟಕ್ಕೆ ಕೊಂಡೊಯ್ಯುವ ಸುಳಿವು ...

ಒಟ್ಟಿನಲ್ಲಿ ಸಲ್ಲದ ಉಪ ಚುನಾವಣೆಯೊಂದಕ್ಕೆ ... ಕಾಂಗ್ರೆಸ್ಸಿಗರೇ ಮುನ್ನುಡಿ ಬರೆದುಕೊಂಡಾಗಿದೆ, ಈಗೇ... ಫಲಿತಾಂಶವನ್ನೇ ಪ್ರತಿಷ್ಠೆಯ ಕಾಳಗಕ್ಕೆ ಉತ್ತರ ಕೊಡ...





'ರಾಮಾ ರಾಮಾ ರೇ...'

'ಜಾತಿ' ನಿರಾಕರಿಸುತ್ತಾ 'ಮನುಷ್ಯ ಪ್ರೀತಿ'ಯ ಬಂಧನದಲ್ಲಿ..

ಮೊದಲಿಗೇ ಹೇಳಿಬಿಡುವುದೊಳಿತು: ಕನ್ನಡದಲ್ಲಿ ...ತ್ತೀಚೆಗೆ ಬಂದ ಬೆಸ್ಟ್ ಸಿನಿಮಾಗಳಲ್ಲಿ 'ರಾಮಾ ರಾಮಾ ...' ಒಂದು.


ಇದಕ್ಕೆ ಕಾರಣ, ಬುದ್ಧನನ್ನು ಕುರಿತು ಪಿ. ಲಂಕೇಶ್ ...ರ 'ಮೋಕ್ಷ ಹುಡುಕುತ್ತಾ ಪ್ರೀತಿಯ ಬಂಧನದಲ್ಲಿ' ...ಗೂ ಡಾ. ಶಿವರಾಮ ಕಾರಂತ ಅವರ 'ನಮ್ಮ ...ತೆಯನ್ನು ಮೀರಲಾಗದ ದೇವರು' ಲೇಖನಗಳು ಈ ...ಮಾ ನೋಡಿದಾಗ ನೆನಪಾಗತೊಡಗಿದ್ದು...


ಜೈಲಿನಿಂದ ತಪ್ಪಿಸಿಕೊಂಡ ಗಲ್ಲು ಶಿಕ್ಷೆಗೆ ಒಳಗಾದ ...ದಿ, ಅವನನ್ನು ಗಲ್ಲಿಗೊಳಪಡಿಸಬೇಕಾದ ವೃದ್ಧ ನೌಕರ... ...ರೊಂದಿಗೆ ಕೂಡಿಕೊಳ್ಳುವ ಕದ್ದು ಓಡಿಬಂದ ಇಬ್ಬರು ...ತರಜಾತೀಯ ಪ್ರೇಮಿಗಳು... ಅವರನ್ನು ಹುಡುಕುತ್ತ ...ುವ ಹುಡುಗಿ ಕಡೆಯ ಸಂಬಂಧಿಗಳು... ತನ್ನ ಇರುವನ್ನೇ ...ಯದ ಕೈದಿ... ಅವರನ್ನು ಮತ್ತೆ ಕೂಡಿಕೊಳ್ಳುವ ...ಲಿಟರಿ ಅಧಿಕಾರಿ... ಅವನ ಮಡದಿಯ ಹೆರಿಗೆಗೆ ...ಉಗರಿವಿಲ್ಲದಂತೆಯೇ ನೆರವಾಗುವ ವೃದ್ಧ ನೌಕರ ಮತ್ತು ಕೈದಿ... ತನ್ನ ಹುಡುಗಿಯೊಂದಿಗೆ 'ಅರ್ಥಕಾಸಿನ' ...ಬಂಧಕ್ಕಾಗಿ ಹುಡುಕಿಕೊಂಡು ಬಂದ ಯುವ ಪ್ರೇಮಿಯ ...ಡ್ಡಿನ ತುಡಿತ... ಇವುಗಳ ಮಧ್ಯೆಯೇ ಹುಟ್ಟಿಕೊಳ್ಳುವ ...ಸ ಮನುಷ್ಯ ಸಂಬಂಧಗಳು... ಮತ್ತೆ ಮತ್ತೆ ತನ್ನರಿವನ್ನು ...ರಿಸುವ ಪಾಪ ಪ್ರಜ್ಞೆ... ಅಲ್ಲಿಂದಲೇ ಹುಟ್ಟುವ ಜೀವಪರ ...ಜಿ.. ಅಲ್ಲಿಂದಲೇ ಶುರುವಾಗುವ ಇವರೆಲ್ಲರ ...ವು-ಬದುಕಿನ ಸಂಘರ್ಷಗಳ ಪಯಣ'...


ಇಡೀ ಸಿನಿಮಾ ಬದುಕು, ಸಾವು, ಜಾತಿಯ ಸಂಘರ್ಷ ...ನ್ನು ಕಟ್ಟಿಕೊಡುತ್ತಲೇ ಮನುಷ್ಯನೊಳಗೆ ಇರಬಹುದಾದ, ...ಬೇಕಾದ ಮಾನವ ಪ್ರೀತಿ ಎಷ್ಟು ಮುಖ್ಯ ಎಂಬುದನ್ನು ...ಗೆ ನಿರೂಪಿಸುತ್ತಾ ಹೋಗುತ್ತದೆ. ಫಾಸಿಗೊಳಗಾಗಬೇಕಾದ ...ರಾಧಿಗೆ ಬದುಕಬೇಕೆಂಬ ತುಡಿತ, ಅವನನ್ನು ...ಸಲೇಬೇಕೆಂಬ ಇಚ್ಛೆಯಿದ್ದರೂ ಅವನನ್ನು ಪೊಲೀಸರಿಗೆ ...ಪ್ಪಿಸಲು ಆಗದೆ ಒದ್ದಾಡುವ ನೌಕರ- ಯಾವ ದೇವರೂ, ...ತಿಪಿಯೂ ನಮ್ಮನ್ನು ರಕ್ಷಿಸಲಾರ ಎಂಬುದನ್ನು ...ರಿಸಿಕೊಡುವ ಪ್ರತಿ ಪಾತ್ರಗಳು...


ಹೌದು, ಈ ಸಿನಿಮಾದಲ್ಲಿ ಯಾವುದೇ ನಾಯಕರಿಲ್ಲ, ...ನಾಯಕರೂ ಇಲ್ಲ... ಎಲ್ಲರೂ ಅವರವರ ಸಂದರ್ಭದ ...ೂಸುಗಳು. ಪರಸ್ಪರ ಸಂಧಿಸುತ್ತಲೇ ಮನುಷ್ಯನ ನೀಚತನ, ...ಟ, ವಂಚನೆ, ಒಳ್ಳೆಯತನವನ್ನು ಕಂಡುಕೊಳ್ಳುತ್ತಲೇ ...ುತ್ತಾರೆ.

ನಾವು ಈಗಾಗಲೇ ರಾಷ್ಟ್ರೀಯ ಮಟ್ಟದಲ್ಲಿ ...ದ್ದಿಯಾಗಿರುವ ಮರಾಠಿ ಸಿನಿಮಾ 'ಸೈರಾಟ್' ಬಗ್ಗೆ ...ಕಷ್ಟು ಮೆಚ್ಚುಗೆಯ ಕಮೆಂಟ್‌ಗಳನ್ನು ಕೇಳುತ್ತಲೇ ...ದಿದ್ದೇವೆ. ಅದು ಕಮರ್ಷಿಯಲ್ ಆಗಿಯೂ ಸಾಕಷ್ಟು ...ಟ್ ಆಗಿದ್ದು ಈಗಾಗಲೇ ಎಲ್ಲರಿಗೂ ಗೊತ್ತಿದೆ. ಆದರೆ ...ರಾಟ್' ಮೂವಿಯನ್ನೂ ಮೀರಿಸುವ ಚಿಂತನೆಯನ್ನು ಸತ್ಯಪ್ರಕಾಶ್ ಎಂಬ ಹೊಸ ನಿರ್ದೇಶಕ ಕನ್ನಡಕ್ಕೆ ...ದಿದ್ದಾರೆ; ಅದಕ್ಕೆ ಅವರು ಕಮರ್ಷಿಯಲ್-ಕಲಾತ್ಮಕ ...ಬ ಯಾವ ಹಣೆಪಟ್ಟಿಯನ್ನೂ ಹಚ್ಚದೆ ತಾವು ...ುಕೊಂಡ ಹಾದಿಯಲ್ಲೇ ಸಿನಿಮಾವನ್ನು ಸಾಗಿಸಿಕೊಂಡು ...ೀಗಿದ್ದಾರೆ. ಹಾಗಾಗಿಯೇ ಇಲ್ಲಿ ಜೀಪ್ ಕೂಡ ಒಂದು ...ವಂತ' ರೂಪಕವಾಗಿ ಪ್ರೇಕ್ಷಕನ ಮನಸ್ಸಿನಲ್ಲಿ ...ಳಿದುಬಿಡುತ್ತದೆ. ಈ ದೃಷ್ಟಿಯಲ್ಲಿ 'ರಾಮಾ ರಾಮಾ ರೇ...' ಒಂದು ತಾಜಾ ಸಿನಿಮಾ.


ಕೇಶವ ಜೈರಾಮ್


ನಿರ್ದೇಶಕ ಸತ್ಯ ಪ್ರಕಾಶ್


ಧರ್ಮಣ್ಣ ಕಡೂರು


ಬಿಂಬಶ್ರೀ ನಿನಾಸಂ

ಇತ್ತೀಚೆಗೆ ಕನ್ನಡದಲ್ಲಿ ಸಂಚಲನ ಮೂಡಿಸಿದ, ಅಂತರರಾಷ್ಟ್ರೀಯ ಮಟ್ಟದಲ್ಲೂ ಸುದ್ದಿಯಾದ 'ತಿಥಿ' ಸಿನಿಮಾವನ್ನು ಯುವಜನತೆ ಎಂಜಾಯ್ ಮಾಡಿದ್ದು ಅಲ್ಲಿರುವ ಸಹಜ ಪೋಲಿತನಕ್ಕಾಗಿ. ಆದರೆ ಅದನ್ನೂ ಮೀರಿದ ಮಾನವೀಯ ಸ್ಪರ್ಶವನ್ನು ಈ ಸಿನಿಮಾ ನಮಗೆ, ನಮ್ಮ ಎದೆಯನ್ನು ಮೀಟುವಂತೆ ದಾಟಿಸುತ್ತದೆ. 'ನೀರ್‌ದೋಸೆ' ಸಿನಿಮಾ ಕೂಡ ಸಕ್ಸಸ್ ಕಂಡಿದ್ದು ಅಲ್ಲಿನ ಪೋಲಿ ಜೋಕುಗಳಿಗಾಗಿ... ಆದರೆ ಇವೆರಡೂ ಸಿನಿಮಾಗಳೂ ಯುವಜನತೆಯನ್ನು ಸೀಟಿನಂಚಿನಲ್ಲಿ ಕೂರಿಸಿದ್ದು ಅಲ್ಲಿನ ಭಾವನಾತ್ಮಕ ಸನ್ನಿವೇಶಗಳಿಂದಾಗಿ. ಹಾಗಾಗಿಯೇ 'ತಿಥಿ' ಚಿತ್ರದ ಗಡ್ಡಪ್ಪ ನಮ್ಮಲ್ಲಿರಬೇಕಾದ ಮಾನವೀಯತೆಯ ಒರತೆ ಒಸರುವಂತೆ ಮಾಡಿಬಿಡುತ್ತಾನೆ. ಹಾಗೆಯೇ 'ನೀರ್‌ದೋಸೆ'ಯಲ್ಲಿಯೂ ದತ್ತಾತ್ರೇಯ ಕೇವಲ ಪೋಲಿ ಮುದುಕನಲ್ಲ; ಅವನೊಳಗೊಂದು ಮಾತೃತ್ವ ಇದೆ ಎಂಬುದನ್ನು ನಿರೂಪಿಸುತ್ತಾರೆ.

ಅಂತಹುದ್ದೇ ದೃಶ್ಯಗಳನ್ನು 'ರಾಮಾ ರಾಮಾ ರೇ' ನಿರ್ದೇಶಕ ಇಲ್ಲಿ ಸೃಷ್ಟಿಸಿದ್ದಾರೆ. ಆ ಮೂಲಕ ಗೆದ್ದಿದ್ದಾರೆ. ಸಿನಿಮಾ ನೋಡುನೋಡುತ್ತಲೇ ನಾವು ಜಾತಿಯನ್ನು ನಿರಾಕರಿಸಿ, ಮನುಷ್ಯಪ್ರೀತಿಯನ್ನು ಉಳಿಸಿಕೊಳ್ಳಬೇಕು ಎನ್ನುವುದು ಅರ್ಥವಾಗುತ್ತಾ ಹೋಗುತ್ತದೆ. ಹಾಗೆಯೇ ಯಾವ ದೇವರೂ ಕೂಡ ಮನುಷ್ಯ ಪ್ರೀತಿಯನ್ನು ದಕ್ಕಿಸಿಕೊಡಲಾರ ಎಂಬುದೂ ಸ್ಪಷ್ಟವಾಗುತ್ತಾ ಹೋಗುತ್ತದೆ.

ಹಾಗಾಗಿಯೇ ಮೊದಲು ಹೇಳಿದಂತೆ ನಿರ್ದೇಶಕ ಸತ್ಯಪ್ರಕಾಶ್ ಯಾವುದೇ ಕಮರ್ಷಿಯಲ್-ಕಲಾತ್ಮಕತೆಯ ಫ್ರೇಮ್‌ಗೆ ಕಟ್ಟುಬಿದ್ದಿಲ್ಲ. ಸಿನಿಮಾದ ಹಿನ್ನೆಲೆಯಲ್ಲಿ ಅದ್ಭುತವಾಗಿ ಮೂಡಿಬಂದಿರುವ ಬೋಳುಗುಡ್ಡ, ಬೀಸುವ ಗಾಳಿಯಂತೆಯೇ ಚಿತ್ರವನ್ನು ಬಿಡುಬೀಸಾಗಿ ತೇಲಿಬಿಟ್ಟಿದ್ದಾರೆ. ಯುವಜನತೆಯಲ್ಲದೆ, ತುದಿಗಾಲಲ್ಲಿ 'ಕಾಮಿಡಿಗಾಗಿ ಹಪಹಪಿಸುವ' ಮಧ್ಯಮ ವರ್ಗಕ್ಕೆ ಏನು ಬೇಕೆಂಬುದು ಈ ಯುವಚತುರ ನಿರ್ದೇಶಕನಿಗೆ ಗೊತ್ತಿದೆ. ಹಾಗೆಂದು ಅವರು ಇಡೀ ಸಿನಿಮಾದಲ್ಲಿ 'ಹಲ್ಕಾ ಸಂಭಾಷಣೆ'ಗಳನ್ನು ತುಂಬಲು ಹೋಗಿಲ್ಲ, ಆದರೆ ವ್ಯಂಗ್ಯ, ತುಂಟತನದ ಆ ಸಂಭಾಷಣೆಗಳ ಮೂಲಕವೇ ನಾವೆಲ್ಲರೂ ರೂಢಿಸಿಕೊಳ್ಳಬೇಕಾದ ಮಾನವೀಯ ಸಂಬಂಧಗಳು, ಮೀರಬೇಕಾದ ತೆವಲುಗಳು, ಉಳಿಸಿಕೊಳ್ಳಬೇಕಾದ 'ಅರ್ಥ'ಗಳನ್ನು ಅರಿವು ಮಾಡಿಸುತ್ತಾ ಹೋಗುತ್ತಾರೆ. ಸಂಭಾಷಣೆಯ ಮೂಲಕವೇ ಗೆದ್ದಿರಬಹುದಾದ ಇತ್ತೀಚಿನ ಕನ್ನಡ ಸಿನಿಮಾಗಳ ಪೈಕಿ, ನಾನು ಕಂಡಿರುವಂತೆ 'ಮಠ', 'ಎದ್ದೇಳು ಮಂಜುನಾಥಾ', 'ಸಂತೆಯಲ್ಲಿ ನಿಂತ ಕಬೀರ' ನಂತರ ಬಹುಶಃ 'ರಾಮಾ ರಾಮಾ ರೇ' ಮಾತ್ರ.

ಚಿತ್ರದ ಕೊನೆಯ ಹಂತದಲ್ಲಿ ಒಂದು ಸನ್ನಿವೇಶವಿದೆ: ದಾರಿಯಲ್ಲಿ ಸಿಕ್ಕು ತನ್ನ ಮಗಳ ಹೆರಿಗೆ ಮಾಡಿಸುವಲ್ಲಿ ಸಹಾಯ ಮಾಡಿದ ವೃದ್ಧ ಜೀಪ್ ಚಾಲಕ, ಅವನೊಟ್ಟಿಗೆ ಇರುವ ಕೈದಿ ಹಾಗೂ ಅವರೊಂದಿಗೆ ಪ್ರಯಾಣಿಸುತ್ತಿರುವ ಯುವ ಪ್ರೇಮಿಗಳು-ಇಷ್ಟೂ ಜನರನ್ನು ತಾಯಿ ತನ್ನ ಮನೆಗೆ ಕರೆದೊಯ್ಯುತ್ತಾಳೆ. ತನ್ನ ಹೆಂಡತಿಯನ್ನು ಹೆರಿಗೆಯ ಸಂಕಷ್ಟದಿಂದ ಪಾರು ಮಾಡಿದ ಕೃತಜ್ಞತೆಗೆ ಮಿಲಿಟರಿ ಅಧಿಕಾರಿ ಕೂಡ ಮನೆಯಲ್ಲಿ ಇವರೆಲ್ಲರಿಗೂ ಕೃತಜ್ಞತೆ ತೋರುತ್ತಾನೆ. ಎಲ್ಲರಿಗೂ ಆ ತಾಯಿ ತುತ್ತು ಕಲಸಿ ಕೊಡುತ್ತಾಳೆ. ಅಷ್ಟೂ ಜನರು ಒಟ್ಟಿಗೆ ಕುಳಿತು ಉಣ್ಣುವ ಆ ಕತ್ತಲು ಬೆಳಕಿನ ಸಂಯೋಜನೆಯ ಹೃದಯಸ್ಪರ್ಶಿ, ಉಜ್ವಲ ದೃಶ್ಯವನ್ನು ನೋಡಿಯೇ ಆನಂದಿಸಬೇಕು! ಇಡೀ ಸನ್ನಿವೇಶ ಪ್ರಸಿದ್ಧ ಕಲಾವಿದ ವಿನ್ಸೆಂಟ್ ವ್ಯಾನ್‌ಗೋನ 'ಪೊಟ್ಯಾಟೋ ಈಟರ್ಸ್' ಕಲಾಕೃತಿಯನ್ನು ನೆನಪಿಗೆ ತರುತ್ತದೆ.

ಇಲ್ಲಿನ ಪ್ರತಿ ಪಾತ್ರದಂತೆಯೇ ಪರಿಕರಗಳೂ ರೂಪಕಗಳಾಗಿ ಕಾಡುತ್ತವೆ. ಗಲ್ಲು ಶಿಕ್ಷೆಗೆ ಬಳಕೆಯಾಗಬೇಕಾದ ಹಗ್ಗವನ್ನು, ಗಲ್ಲು ಶಿಕ್ಷೆಗೊಳಪಡಿಸಬೇಕಾದ ರಾಮಣ್ಣ ಹಾಗೂ ಗಲ್ಲಿಗೇರಬೇಕಾದ ಸ್ಯಾಂಡಲ್ ರಾಜಾ ಇಬ್ಬರೂ ಒಟ್ಟಿಗೇ ಆಗತಾನೇ ಹುಟ್ಟಿದ ಮಗುವಿನ ತೊಟ್ಟಿಲು ಕಟ್ಟಲು ಬಳಸುವಾಗಿನ ಹಗ್ಗದ ಪ್ರತಿಮೆ ಪ್ರೇಕ್ಷಕನನ್ನು ಕಾಡುತ್ತದೆ. ದೇವಸ್ಥಾನದಿಂದ ತಂದ ಕುಂಕುಮ ನನ್ನನ್ನು ಕಾಪಾಡುತ್ತದೆಂದು ನಂಬಿದ್ದ ರಾಮಣ್ಣ ಎಲ್ಲವನ್ನೂ ನೀಡಬೇಕಾದವನು ಮನುಷ್ಯನೆಂಬ ದೇವರು ಎಂಬುದು ಅರಿವಾಗುತ್ತಲೇ ಕುಂಕುಮವನ್ನು ಗಾಳಿಗೆ ತೂರಿಬಿಡುತ್ತಾನೆ. ಹೀಗೆಯೇ 'ಜ್ಯೋತಿಷ್ಯ'ದ ಪೊಳ್ಳುತನ, ಚಾನೆಲ್‌ಗಳ ಅತಿರೇಕಗಳನ್ನು ನಿರ್ದೇಶಕ ಸತ್ಯಪ್ರಕಾಶ್ ವಿಡಂಬಿಸುತ್ತಾ ಹೋಗಿದ್ದಾರೆ.


ಇನ್ನು ಕಲಾವಿದರ ತನ್ಮಯತೆಯ ಬಗ್ಗೆ ಹೇಳಬೇಕು. ಜೀಪ್ ಚಾಲಕ ರಾಮಣ್ಣನಾಗಿ ಕಾಣಿಸಿಕೊಂಡಿರುವ ಕೆ. ಜಯರಾಂ ಹಾಗೂ ಕೈದಿಯ ಪಾತ್ರಧಾರಿ ನಟರಾಜ್ ತಮ್ಮ ನಟನೆಯ ಜುಗಲ್‌ಬಂದಿಯಲ್ಲಿ ಪ್ರೇಕ್ಷಕನನ್ನು ಕಟ್ಟಿಹಾಕುತ್ತಾರೆ. ನಟರಾಜ್ ಕೈದಿಯ ಮೌನವೇದನೆ, ಅಸಹಾಯಕತೆ, ವ್ಯಗ್ರತೆ ಎಲ್ಲವನ್ನೂ ಆವಾಹಿಸಿಕೊಂಡವರಂತೆ ಅಭಿನಯಿಸಿದ್ದಾರೆ. ಪಕ್ಕಾ ಹಳ್ಳಿಹೈದನಂತಿರುವ, ಹಳ್ಳಿ ಹೈದನಂತೆಯೇ ಕಾಣಿಸಿಕೊಂಡಿರುವ ಯುವ ಪ್ರೇಮಿ ಧರ್ಮಣ್ಣ ಕಡೂರು ತನ್ನ ಚುರುಕುತನದಿಂದಲೇ ಚಪ್ಪಾಳೆ ಗಿಟ್ಟಿಸುತ್ತಾನೆ. ಆತನ ಪ್ರೇಯಸಿಯಾಗಿ ಕಾಣಿಸಿಕೊಂಡಿರುವ ಬಿಂಬಶ್ರೀ ಕೂಡ ಕಾಡುತ್ತಾಳೆ.

ಇಡೀ ಚಿತ್ರಕ್ಕೆ ದೊಡ್ಡ ಶಕ್ತಿಯಾಗಿ ಒದಗಿಬಂದಿರುವುದು ಛಾಯಾಗ್ರಹಣ, ಸಂಕಲನ ಹಾಗೂ ಹಿನ್ನೆಲೆ ಸಂಗೀತ. ಅದಕ್ಕಿಂತಲೂ ಹೆಚ್ಚಾಗಿ ಒಟ್ಟು ಸಿನಿಮಾದ ಭಾವುಕ ಸನ್ನಿವೇಶಗಳನ್ನು ಕಟ್ಟಿಕೊಟ್ಟಿರುವ ಹಾಡುಗಳು. ಕ್ಲೈಮ್ಯಾಕ್ಸ್‌ನ ಒಂದು ಹಾಡಿನ ಮೂಲಕವೇ ಚಿತ್ರದ ಸಾರಾಂಶವನ್ನೇ ಹಿಡಿದಿಟ್ಟಿರುವ ಸಂಗೀತ ನಿರ್ದೇಶಕ ವಾಸುಕಿ ವೈಭವ್ ಹಾಗೂ ಗೀತರಚನೆಕಾರರು ಮಾನವೀಯ ರಾಗಗಳನ್ನು ಪ್ರೇಕ್ಷಕನೆದೆಯಲ್ಲಿ ಮೀಟುತ್ತಾ ಹೋಗುತ್ತಾರೆ. ಚಿತ್ರದೊಳಗೆ ಸಾಗುವ ಜರ್ನಿಯಲ್ಲಿ ಒಬ್ಬರನ್ನೊಬ್ಬರು ಅರಿಯುತ್ತಾ ಹೋಗುವುದನ್ನು ಸಂಭಾಷಣೆಯಷ್ಟೇ ಸಶಕ್ತವಾಗಿ ಹಾಡುಗಳು ಕಟ್ಟಿಕೊಟ್ಟಿವೆ. ಸಂಭಾಷಣೆ ಬರೆದಿರುವ ಸಿದ್ದಲಿಂಗಯ್ಯ ಎಂಬ ಹೊಸ ಬರಹಗಾರನಿಗೆ ಥ್ಯಾಂಕ್ಸ್ ಹೇಳಲೇಬೇಕು.

ಈ ಹಿಂದೆ 'ಜಯನಗರ ಫೋರ್ಥ್ ಬ್ಲಾಕ್' ಎಂಬ ಕಿರುಚಿತ್ರ ಮಾಡಿದ್ದ ನಿರ್ದೇಶಕ ಡಿ. ಸತ್ಯಪ್ರಕಾಶ್ ಪೂರ್ಣಪ್ರಮಾಣದ ಚಿತ್ರದಲ್ಲಿ ಗೆದ್ದಿದ್ದಾರೆ.


ಇಷ್ಟೆಲ್ಲದರ ನಡುವೆಯೂ 'ರಾಮಾ ರಾಮಾ ರೇ' ಚಿತ್ರಕ್ಕೆ ಕೆಲ ಸಣ್ಣ ಮಿತಿಗಳೂ ಇವೆ. ಲವಿತ್ ಛಾಯಾಗ್ರಹಣ ಅಲ್ಲಲ್ಲಿ ಕಟ್ಟಿಕೊಡುವ ಹಿನ್ನೆಲೆ ಪ್ರಕೃತಿಯ ಲಾಂಗ್ ಶಾಟ್‌ಗಳು

▶▶ 07


ನಟರಾಜ್




ಹರಪನಹಳ್ಳಿ: ಬಿಇಓ ರಾಮಪ್ಪನ ಭ್ರಷ್ಟ ಭೋಜನ



ತನ್ವೀರ್ ಸೇಠ್

ಬಿಇಓ ರಾಮಪ್ಪನಿಗೆ ಶಿಕ್ಷಕರನ್ನು, ಶಿಕ್ಷಣ ಇಲಾಖೆಯನ್ನು ಮುಂಡಾಯಿಸಲು ಒಂದೇ ದಾರಿ ಏನಲ್ಲ. ಅವರದೇ ಸಂಬಳ ಪಡೆಯಲು ನೀಡುವ ಲಂಚದಿಂದ ಶುರುವಾಗಿ ಶಿಕ್ಷಕರ ಪಿ.ಎಫ್., ಜಿ.ಪಿ.ಎಫ್. ಸಾಲ, ಕೆ.ಜಿ.ಐ.ಡಿ. ಸಾಲ ಅಂತೆಲ್ಲ ತಮ್ಮ ಸಂಬಳದ ಮೇಲೆ ಸಾಲ ಪಡೆಯಲು ಬಿಇಓನ ಶಿಫಾರಸ್ಸು ಬೇಕು. ಈ ಶಿಫಾರಸಿಗೆ ಪ್ರತೀ ಸಾಲಕ್ಕೆ 2 ಸಾವಿರ ಲಂಚ ವಸೂಲಿ ಮಾಡುತ್ತಾನೆ. ಇನ್ನು ಶಿಕ್ಷಕರು ವರ್ಗವಾದಾಗ ಬಿಇಓ ಅಂತಹ ಶಿಕ್ಷಕರಿಗೆ ವರ್ಗಾವಣೆ ಚಲನಾದೇಶ ಅಂತಾ ಪತ್ರ ನೀಡಬೇಕು. ಆ ಪತ್ರ ನೀಡಬೇಕೆಂದರೆ ಕಡ್ಡಾಯವಾಗಿ 2 ಸಾವಿರ ರೂಪಾಯಿಯನ್ನು ರಾಮಪ್ಪನ ಜೇಬಿಗೆ ತುರುಕಲೇಬೇಕು.



ರಾಮಪ್ಪ

ಹರಪನಹಳ್ಳಿ ಅನ್ನೋ ಅತಿ ಹಿಂದುಳಿದ ತಾಲ್ಲೂಕಿನ ದುರ್ಗತಿಯೋ ಏನೋ, ಆಯ್ಕೆಯಾಗುವ ಜನಪ್ರತಿನಿಧಿಗಳಿಂದ ಮೊದಲ್ಗೊಂಡು ಸರ್ಕಾರಿ ಕಚೇರಿಗಳಿಗೆ ವಕ್ಕರಿಸುವ ಅಧಿಕಾರಿಗಳವರೆಗೆ ಗಡದ್ದಾಗಿ ಉಂಡುಹೋಗಲು ಕೈಬಾಯಿ ತೊಳೆದುಕೊಂಡು ಸಜ್ಜಾಗಿ ಬರುತ್ತಾರೆಯೇ ವಿನಃ ಈ ನತದೃಷ್ಟ ನೆಲವನ್ನು ಉದ್ಧಾರ ಮಾಡುವ ಇರಾದೆ ಒಬ್ಬರಿಗೂ ಇಲ್ಲ. ಕಳೆದ ನಾಲ್ಕು ವರ್ಷದಿಂದ ಇಲ್ಲಿಗೆ ಬಿಇಓ ಆಗಿ ಎರಡನೇ ಇನ್ನಿಂಗ್ಸ್ ಶುರು ಮಾಡಿಕೊಂಡಿರುವ ರಾಮಪ್ಪ ಅನ್ನೋ ಸರ್ಕಾರಿ ಹೆಗ್ಗಣವೊಂದರ ನಿದರ್ಶನ ಸಾಕು ಹರಪನಹಳ್ಳಿಯ ಆಡಳಿತ ವೈಖರಿ ಅದೆಷ್ಟು ಅಡಾಲೆದ್ದು ಹೋಗಿದೆ ಅನ್ನೋದನ್ನು ಸಾಬೀತುಮಾಡಲು. ಈ ಪುಣ್ಯಾತ್ಮ ಹಿಂದೊಮ್ಮೆ ಇದೇ ಹರಪನಹಳ್ಳಿಯಲ್ಲಿ ಬಿಇಓ ಆಗಿ ಸಾಕಷ್ಟು ಹೆಸರು ಕೆಡಿಸಿಕೊಂಡು, ಶಿಕ್ಷಕರಿಂದಲೇ ಛೀಮಾರಿ ಹಾಕಿಸಿಕೊಳ್ಳುವ ಹಂತದಲ್ಲಿ ವರ್ಗ ಮಾಡಿಸಿಕೊಂಡು ಪಲಾಯನಗೈದಿದ್ದ. ಈಗ ಮತ್ತೆ ವಕ್ಕರಿಸಿರುವ ರಾಮಪ್ಪನ ದರ್ಬಾರಿನಲ್ಲಿ ತಾಲ್ಲೂಕಿನ ಶೈಕ್ಷಣಿಕ ಪ್ರಗತಿ ಸಂಪೂರ್ಣ ನೆಲಕಚ್ಚಿ ಹೋಗಿದೆ. ಬಿಇಓ ಕಚೇರಿ ಕಮೀಷನ್ ದಂಧೆಯ, ಟ್ರಾನ್ಸ್‌ಫರ್ ಕಸುಬಿನ, ಚೇಲಾ ಗುಂಪುಗಾರಿಕೆಯ ಅಫಿಶಿಯಲ್ ಅಡ್ಡೆಯಂತಾಗಿರುವುದು ದುರಾದೃಷ್ಟ.


ಹರಪನಹಳ್ಳಿ ತಾಲ್ಲೂಕಿನಲ್ಲಿ ಖಾಸಗಿ ಮತ್ತು ಸರ್ಕಾರಿ ಸೇರಿದಂತೆ 314 ಪ್ರಾಥಮಿಕ ಶಾಲೆಗಳು, 54 ಪ್ರೌಢಶಾಲೆಗಳಿವೆ. ಹೆಚ್ಚೂಕಮ್ಮಿ ಸಾವಿರಾರು ಶಿಕ್ಷಕ ಶಿಕ್ಷಕಿಯರಿದ್ದಾರೆ. ಸರ್ಕಾರ ಯಾವುದಾದರೂ ಹೊಸ ಶೈಕ್ಷಣಿಕ ಯೋಜನೆ ಘೋಷಿಸಿದರೆ ಹರಪನಹಳ್ಳಿಯ ಸಮಸ್ತ ಶಿಕ್ಷಕ ವರ್ಗವೇ ಬೆಚ್ಚಿಬೀಳುತ್ತದೆ. ಯಾಕೆಂದರೆ ಆ ಯೋಜನೆಯ ನೆಪದಲ್ಲಿ ರಾಮಪ್ಪ ತಮ್ಮನ್ನು ಸುಲಿದು ನುಂಗಿಬಿಡುತ್ತಾನೆ ಅನ್ನೋದು ಅವರಿಗೆ ಖಾತ್ರಿಯಾಗಿರುತ್ತದೆ. ಶಿಕ್ಷಕ ಸಂಪನ್ಮೂಲದ ಮರುಬಳಕೆಯ ನಿಯೋಜನೆ ಇದಕ್ಕೊಂದು ಬೆಸ್ಟ್ ಎಗ್ಸಾಂಪಲ್.

02.07.2016ರಲ್ಲಿ ಸರ್ಕಾರ ಶಿಕ್ಷಕ-ಶಿಕ್ಷಕಿಯರ ಸಂಪನ್ಮೂಲದ ಮರುಬಳಕೆಯ ಉದ್ದೇಶಕ್ಕಾಗಿ ನಿಯೋಜನೆ ಶುರುಮಾಡಿತು. 30 ಜನ ಮಕ್ಕಳಿಗೆ ಒಬ್ಬ ಶಿಕ್ಷಕ ಎನ್ನುವ ನಿಯಮದಂತೆ ಯೋಜನೆ ಜಾರಿಗೊಳಿಸಿತು. 100 ಮಕ್ಕಳಿದ್ದ ಕಡೆ ಐದು ಜನ ಶಿಕ್ಷಕರಿದ್ದರೆ ಅಲ್ಲಿ ಇಬ್ಬರು ಹೆಚ್ಚುವರಿ ಶಿಕ್ಷಕರು ಎಂದು ಪರಿಗಣಿಸಲಾಗುತ್ತದೆ. ಇಂಥಾ ಹೆಚ್ಚುವರಿ ಶಿಕ್ಷಕರನ್ನು ಅಗತ್ಯವಿರುವ ಬೇರೆ ಶಾಲೆಗೆ ನಿಯೋಜನೆ ಮಾಡುವುದು ಇದರ ಉದ್ದೇಶ. ಇದಕ್ಕೊಂದು ಹೆಚ್ಚುವರಿ ಶಿಕ್ಷಕರ ಪಟ್ಟಿ ತಯಾರಿಸಿ, ಕೌನ್ಸೆಲಿಂಗ್ ನಡೆಸುವ ಅಧಿಕಾರವನ್ನು ಆಯಾ ತಾಲ್ಲೂಕಿನ ಬಿಇಓಗಳಿಗೆ ನೀಡಿದೆ. ಅದೇರೀತಿ ರಾಮಪ್ಪನೂ 11 ಜುಲೈ 2016ರಂದು ಕೌನ್ಸಿಲಿಂಗ್ ಮಾಡಿ ಒಂದು ಪಟ್ಟಿ ತಯಾರಿಸಿದ್ದ. ಈ ಪಟ್ಟಿಗೆ ಶಿಕ್ಷಕರ ತಕರಾರು ಶುರುವಾಗಿ ಮತ್ತೆ 28.07.2016ರಂದು ಎರಡನೇ ಬಾರಿಗೆ ಹೊಸದಾಗಿ ಕೌನ್ಸಿಲಿಂಗ್ ಮಾಡಿ ಹೊಸ ಪಟ್ಟಿ ಸಿದ್ಧಪಡಿಸಿದ. ಅಲ್ಲಿಂದಲೇ ನೋಡಿ ಬಿಇಓ ರಾಮಪ್ಪನ ಭ್ರಷ್ಟಾಚಾರದ ನಾಗಾಲೋಟ ಶುರುವಾದದ್ದು.

ಶಿಕ್ಷಕರ ಸಂಪನ್ಮೂಲ ಮರುಬಳಕೆ ಉದ್ದೇಶಕ್ಕೆ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಅಂತವರನ್ನು ಬೇರೆಕಡೆ ನಿಯೋಜಿಸುವುದಿದೆಯಲ್ಲ ಅದು ರಾಜ್ಯದಾದ್ಯಂತ ಬಿಇಓಗಳಿಗೆ ಸಮೃದ್ಧ ವರಮಾನವಾಗಿ ಪರಿಣಮಿಸಿದೆ. ಹರಪನಹಳ್ಳಿ ಬಿಇಓ ರಾಮಪ್ಪ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಗಿಂತ ಹೆಚ್ಚಾದ ಶಿಕ್ಷಕರನ್ನು ಬೇರೆಕಡೆ ನಿಯೋಜಿಸುವ ನೆಪದಲ್ಲಿ ಕಾನೂನುಬಾಹಿರವಾಗಿ ಕಾಸಿಗೆ ತಕ್ಕ ಕಜ್ಜಾಯದಂತೆ ಯಾರ್‍ಯಾರಿಗೆ ಎಲ್ಲೆಲ್ಲಿಗೆ ಬೇಕೊ ಅಲ್ಲಿಗೆ ನಿಯೋಜನೆ ಮಾಡಿದ್ದಾನೆ.

ಹರಪನಹಳ್ಳಿಯ ಇಂಟೀರಿಯರ್ ಶಾಲೆಯಲ್ಲಿರುವ ಶಿಕ್ಷಕ ದಾವಣಗೆರೆ ಸಿಟಿ ಅಥವಾ ಸಿಟಿ ಪಕ್ಕದ ಶಾಲೆಗೆ ನಿಯೋಜನೆಯಾಗಬೇಕೆಂದರೆ ಬೇರೆ ಸಮಯದಲ್ಲಿ ಸಾಧ್ಯವಾಗದು. ಆದರೆ ಈ ಯೋಜನೆಯಲ್ಲಿ ಬಿಇಓ ರಾಮಪ್ಪನಿಗೆ 1 ಲಕ್ಷ ಕೊಟ್ಟರೆ ಸಿಟಿಗೆ, 75 ಸಾವಿರ ಕೊಟ್ಟರೆ ಸಿಟಿ ಪಕ್ಕದ ಹಳ್ಳಿಗೆ, 50 ಸಾವಿರ ಕೊಟ್ಟರೆ ಅವರ ಸ್ವಂತ ಹಳ್ಳಿಗಳಿಗೆ ಅನಾಯಾಸವಾಗಿ ನಿಯೋಜನೆಗಳಾಗುತ್ತಿವೆ.

ರಾಮಪ್ಪನ ಈ 'ದಂಧೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕೆಂದರೆ ಕೆರೆಗುಡೀಹಳ್ಳಿಯ ವಿಜ್ಞಾನ ಶಿಕ್ಷಕಿಯ ವರ್ಗಾವರ್ಗಿ ಪುರಾಣವನ್ನು ಗಮನಿಸಬೇಕು. ಹರಪನಹಳ್ಳಿ ತಾಲ್ಲೂಕಿನ ಕೆರೆಗುಡೀಹಳ್ಳಿ ಶಾಲೆಯಲ್ಲಿ ಬಣಕಾರ ಪುಷ್ಪಲತಾ ಎಂಬಾಕೆ ವಿಜ್ಞಾನ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಈ ಹಿಂದೆ ಸಾಮಾನ್ಯ ವರ್ಗಾವಣೆ ಅಡಿಯಲ್ಲಿ ಈಕೆ ಇಲ್ಲಿಂದ ದಾವಣಗೆರೆ ಸುತ್ತಾಮುತ್ತಾ ವರ್ಗಾವಣೆ ಬಯಸಿದ್ದಳು. ಆದರದು ಸಾಧ್ಯವಾಗಿರಲಿಲ್ಲ. ಆದರೆ ಸರ್ಕಾರ ತಂದ ಹೆಚ್ಚುವರಿ ಶಿಕ್ಷಕರ ನಿಯೋಜನೆಯನ್ನೇ ಬಳಸಿಕೊಂಡ ಬಿಇಓ ರಾಮಪ್ಪ ಪುಷ್ಪಲತಾಳಿಂದ 70 ಸಾವಿರ ಲಂಚ ಪಡೆದು ದಾವಣಗೆರೆ ಪಕ್ಕದ ಕಂಚಿಕೇರೆಗೆ ನಿಯೋಜಿಸಿದ. ಈ ನಿಯೋಜನೆಗೆ ಬಿಇಓ ನೀಡಿದ ಕಾರಣ ಏನು ಗೊತ್ತೆ? ಕೆರೆಗುಡೀಹಳ್ಳಿಗೆ ವಿಜ್ಞಾನ ಶಿಕ್ಷಕರ ಅಗತ್ಯವಿಲ್ಲಾ ಅಂತ. ಆದರೆ ಯಾವ ಕೆರೆಗುಡೀಹಳ್ಳಿ ಶಾಲೆಗೆ ವಿಜ್ಞಾನ ಶಿಕ್ಷಕರು ಬೇಡಾ ಎಂದು ಪುಷ್ಪಲತಾಳನ್ನು ಎತ್ತಂಗಡಿ ಮಾಡಿದನೋ ಅದೇ ಗುಡಿಹಳ್ಳಿ ಶಾಲೆಗೆ ಮಮತಾಜ್ ಬೇಗಂ ಎನ್ನುವ ವಿಜ್ಞಾನ ಶಿಕ್ಷಕಿಯನ್ನು ಪುಷ್ಪಲತಾ ವರ್ಗಾವಣೆಯಾದ ಕಂಚೀಕೆರೆ ಶಾಲೆಯಲ್ಲಿದ್ದ ಶಿಕ್ಷಕಿಯನ್ನು ತಂದು ಬಿಸಾಕಿದ್ದಾನೆ. ಶಿಕ್ಷಕರ ವರ್ಗಾವಣೆ ನಿಯಂತ್ರಣ ಕಾಯ್ದೆ 2005ರ ಪ್ರಕಾರ ಯಾವುದೇ ಶಿಕ್ಷಕರನ್ನು ರಾಜಕೀಯ



ಪ್ರೇಮಾ

ಒತ್ತಡ ಅಥವಾ ಅಧಿಕಾರಿಗಳ ಪಿತೂರಿಯಿಂದ ವರ್ಗ ಮಾಡಲು ಬರುವುದಿಲ್ಲ. ಆದರೆ ಇಲ್ಲಿ ನಡೆದದ್ದು ಮ್ಯೂಚುಯಲ್ ವರ್ಗಾವಣೆ ಅದೂ ಹೆಚ್ಚುವರಿ ಶಿಕ್ಷಕರ ನಿಯೋಜನೆಯ ನೆಪದಲ್ಲಿ! ಹಾಗಾದರೆ ಕೆರೆಗುಡಿಹಳ್ಳಿ ಶಾಲೆಗೆ ವಿಜ್ಞಾನ ಶಿಕ್ಷಕರು ಬೇಡ ಎಂದ ಇದೇ ಬಿಇಓ ರಾಮಪ್ಪ ಮತ್ತೆ ಅದೇ ಶಾಲೆಗೆ ವಿಜ್ಞಾನ ಶಿಕ್ಷಕಿ ಬೇಗಂರನ್ನು ನೇಮಕ ಮಾಡಿದ ಉದ್ದೇಶವಾದರೂ ಏನು? ಕಾಸು ಗೆಬರುವ ಇರಾದೆಯಲ್ಲದೆ ಮತ್ತಿನ್ನೇನು ಇದ್ದೀತು.

ಹೀಗೆ ಪ್ರತಿಯೊಂದು ಯೋಜನೆಯನ್ನೂ ರಾಮಪ್ಪ ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿದ್ದಾನೆ. ಓದುವ ಮಕ್ಕಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಸರ್ಕಾರ ಜಾರಿಗೆ ತಂದಿರುವ ಶೂ ಮತ್ತು ಸಮವಸ್ತ್ರ ನೀಡುವ ಯೋಜನೆಯಲ್ಲೂ ರಾಮಪ್ಪ ಇದೇ ಗೋಲ್‌ಮಾಲ್ ಮಾಡಿದ್ದಾನೆ. ಹರಪನಹಳ್ಳಿಯಲ್ಲಿ 35 ಸಾವಿರ ಮಕ್ಕಳಿಗೆ ಶೂ ಸಪ್ಲೈ ಮಾಡುವ ಗುತ್ತಿಗೆ ನೀಡಲಾಗುತ್ತದೆ. ಈ ಗುತ್ತಿಗೆ ಪಡೆದದ್ದು ಪ್ರಶಾಂತ ಹಟ್ಟಿ ಎನ್ನುವ ಪುಡಿ ರಾಜಕಾರಣಿ. ಈತ ಸರಬರಾಜು ಮಾಡಿದ ಶೂಗಳು ಕಳಪೆಯವು, ಆದರೆ ದುಬಾರಿ ಬೆಲೆಗೆ ಸಪ್ಲೈ ಮಾಡಿದ್ದಾನೆ. ಇಂತಹ ವ್ಯವಹಾರಕ್ಕೆಲ್ಲ ಬಿಇಓ ಸಹಿ ಅತ್ಯಗತ್ಯ, ಹಾಗಾಗಿ ಇಲ್ಲೂ ಲಕ್ಷಾಂತರ ರೂಪಾಯಿ ಲಂಚ ರಾಮಪ್ಪನ ಜೇಬಿಗಿಳಿದಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಇನ್ನು ಸಮವಸ್ತ್ರದ ಬಟ್ಟೆ ಖರೀದಿ ನಡೆದದ್ದು ಹರಪನಹಳ್ಳಿಯ ಚಿನ್ಮಯಿ ಸೆಲೆಕ್ಷನ್ ಅಂಗಡಿಯಲ್ಲಿ, ಇದು ಹೂವಿನಹಡಗಲಿ ಪುರಸಭಾ ಸದಸ್ಯ ಸಂತೋಷ್ ಜೈನ್ ಎನ್ನುವವನ ಅಂಗಡಿ. ಸುಮಾರು 70 ಲಕ್ಷದ ಸಮವಸ್ತ್ರ ವ್ಯಾಪಾರದಲ್ಲಿ ಬಿಇಓ ರಾಮಪ್ಪ ಲಕ್ಷಾಂತರ ರೂಪಾಯಿ ಲಂಚ ಗುಳುಂ ಮಾಡಿದ್ದಾನೆ ಎನ್ನಲಾಗುತ್ತಿದೆ. ಸಮವಸ್ತ್ರ ಖರೀದಿಯ ನಂತರ ಎರಡನೆಯ ಕಂತಾಗಿ ಸರ್ಕಾರ ಸಮವಸ್ತ್ರ ಹೊಲಿಗೆಗಾಗಿ ಪ್ರತಿ ಮಗುವಿಗೆ 200 ರೂ. ನೀಡುತ್ತದೆ. ಅದೂ ಆಯಾ ಶಾಲೆಯ ಎಸ್.ಡಿ.ಎಂ.ಸಿ. ಸಮಿತಿಯ ಅಕೌಂಟಿಗೆ ಜಮಾ ಆಗುತ್ತದೆ. ಈ ಹಣ ಬಿಡುಗಡೆ ಮಾಡಲು ಚೆಕ್‌ಗೆ ಬಿಇಓ ಸಹಿ ಮಾಡಬೇಕು. ಇಲ್ಲೂ ಬಿಇಓ ರಾಮಪ್ಪ ಪ್ರತಿಯೊಂದು ಶಾಲೆಯಿಂದ ಸಾವಿರಾರು ರೂಪಾಯಿ ಲಂಚ ವಸೂಲಿ ಮಾಡುತ್ತಾನೆ ಎನ್ನುವ ಆಪಾದನೆಗಳಿವೆ.

ತಾಲ್ಲೂಕಿನಲ್ಲಿರುವ ಖಾಸಗಿ ಶಾಲೆಗಳ ಮ್ಯಾನೇಜ್‌ಮೆಂಟ್ ಮತ್ತು ಶಿಕ್ಷಕ ವರ್ಗವಂತೂ ಬಿಇಓ ರಾಮಪ್ಪ ಎಂದರೆ ಬೆಚ್ಚಿಬೀಳುವಂತಾಗಿದೆ. ಅನುದಾನಿತ ಖಾಸಗಿ ಶಾಲೆಯ ಶಿಕ್ಷಕ ವರ್ಗದ ಸ್ಯಾಲರಿ ಬಿಲ್‌ಗೆ ಬಿಇಓ ಕೌಂಟರ್ ಸಹಿ ಹಾಕುವುದು ಕಾನೂನು. ಈ ಸಹಿ ಹಾಕಲು ಪ್ರತಿ ಶಾಲೆಯಿಂದ ಪ್ರತಿ ತಿಂಗಳೂ ಐದುಸಾವಿರ ಲಂಚ ಕಡ್ಡಾಯವಾಗಿ ಪೀಕಲೇಬೇಕು. ಹಾಗೆ ಇನ್‌ಕ್ರೀಮೆಂಟು, ಅರಿಯರ್ಸ್ ಅಂತಾ ಬಂದಾಗಂತೂ ಬಿಇಓ ರಾಮ[ಪ್ಪನಿಗೆ] ಹಬ್ಬವೋಹಬ್ಬ.

ಬಿಇಓ ರಾಮಪ್ಪನಿಗೆ ಶಿಕ್ಷಕರನ್ನು, ಶಿಕ್ಷಣ ಇಲಾಖೆ[ಯನ್ನು] ಮುಂಡಾಯಿಸಲು ಒಂದೇ ದಾರಿ ಏನಲ್ಲ, ಅ[ವರದೇ] ಸಂಬಳ ಪಡೆಯಲು ನೀಡುವ ಲಂಚದಿಂದ ಶುರು[ವಾಗಿ] ಶಿಕ್ಷಕರ ಪಿ.ಎಫ್., ಜಿ.ಪಿ.ಎಫ್. ಸಾಲ, ಕೆ.ಜಿ.ಐ.ಡಿ[. ಸಾಲ] ಅಂತೆಲ್ಲ ತಮ್ಮ ಸಂಬಳದ ಮೇಲೆ ಸಾಲ ಪಡೆ[ಯಲು] ಬಿಇಓನ ಶಿಫಾರಸ್ಸು ಬೇಕು. ಈ ಶಿಫಾರಸಿಗೆ [ಪ್ರತೀ] ಸಾಲಕ್ಕೆ 2 ಸಾವಿರ ಲಂಚ ವಸೂಲಿ ಮಾಡುತ್ತಾನೆ. [ಇನ್ನು] ಶಿಕ್ಷಕರು ವರ್ಗವಾದಾಗ ಬಿಇಓ ಅಂತಹ ಶಿ[ಕ್ಷಕರಿಗೆ] ವರ್ಗಾವಣೆ ಚಲನಾದೇಶ ಅಂತಾ ಪತ್ರ ನೀಡಬೇ[ಕು. ಆ] ಪತ್ರ ನೀಡಬೇಕೆಂದರೆ ಕಡ್ಡಾಯವಾಗಿ 2 [ಸಾವಿರ] ರೂಪಾಯಿಯನ್ನು ರಾಮಪ್ಪನ ಜೇಬಿಗೆ ತುರುಕಲೇ[ಬೇಕು].

ಮೊದಲ ಇನ್ನಿಂಗ್ಸ್ ಕರ್ಮಕಾಂ[ಡ]

ಮೊದಲೇ ತಿಳಿಸಿದಂತೆ ರಾಮಪ್ಪ ಬಿಇ[ಓ] ಹರಪನಹಳ್ಳಿಗೆ ವಕ್ಕರಿಸಿರುವುದು ಇದು ಎರಡನೇ... 2001-2004ರ ತನಕ ಬಿಇಓ ಆಗಿ 4 ... ಭರ್ಜರಿಯಾಗಿ ಉಂಡುಹೋಗಿದ್ದ. ಆಗಿನ ಶಾಸಕ... ಪರಮೇಶ್ವರನಾಯ್ಕನ ಪರಮ ಶಿಷ್ಯನಾಗಿ ಧೀಕ್ಷೆ ... ಇಡೀ ತಾಲ್ಲೂಕಿನ ಶಿಕ್ಷಣ ಇಲಾಖೆಯನ್ನೇ ಅದ್ವಾನ ಎ... ಇಂಥಾ ರಾಮಪ್ಪನ ಉಪಟಳದಿಂದ ಬೇಸತ್ತಿದ್ದ ... ಸಂಘ ರಾಮಪ್ಪನ ವಿರುದ್ಧ ಗರಂ ಆಗಿದ್ದಲ್ಲದೇ ಬೀದಿ... ಪ್ರತಿಭಟಿಸಲು ಸಜ್ಜಾಗಿತ್ತು. ಶಿಕ್ಷಕರು ತನ್ನ ... ಮುಗಿಬೀಳುವುದು ಗ್ಯಾರಂಟಿಯಾದ ವರ್ತಮಾನ... ಸಾಕಿಕೊಂಡಿದ್ದ ಶಿಕ್ಷಕ ಮಂಜುನಾಥ ಪೂಜಾರಿ... ತಿಳಿದದ್ದೇ ತಡ 2004ರ ಜನವರಿಯಲ್ಲಿ ದಾ... ದಯಟ್‌ಗೆ ವರ್ಗ ಮಾಡಿಸಿಕೊಂಡ ಎಸ್ಕೇಪಾಗಿದ್ದ. ... ತನ್ನ ದುಂಡಾವರ್ತಿ, ಭ್ರಷ್ಟಾಚಾರ, ಸರ್ವಾಧಿಕಾರಿ ... ಯಿಂದ ಹೆಸರು ಕೆಡಿಸಿಕೊಂಡು ಕೆಲವೇ ದಿನಗಳಲ್ಲಿ ... ಯಾಗಿದ್ದ. ಹೀಗೆ ಸಂಡೂರು, ಸಿಂಧನೂರು, ಹೊಸ... ಅಂತೆಲ್ಲಾ 9 ವರ್ಷ ಅಂಡಲೆದು, ಎಲ್ಲೂ ಸು... ಕಾಲ ಸೇವೆ ಸಲ್ಲಿಸುವಷ್ಟು ಸೈ ಎನಿಸಿಕೊಳ್ಳದೆ ... ಎನಿಸಿಕೊಂಡಿದ್ದೇ ಹೆಚ್ಚು ಕೊನೆಗೆ ಅದ್ಯಾವ ಲಿಂಕು ... ಏನೋ ಮತ್ತೆ ಹರಪನಹಳ್ಳಿ ತಾಲ್ಲೂಕಿಗೆ 20... ಬಿಇಓ ಆಗಿ ವಕ್ಕರಿಸಿಕೊಂಡ.

ಅಧಿಕಾರದಲ್ಲಿ ಯಾರೇ ಇದ್ದರೂ ಅವರನ್ನು ... ಚೇಲಾಗಿರಿಯಿಂದ ಪಳಗಿಸಿ ಸಮಯಸಾಧಿಸಿಕೊಳ್ಳು... ರಾಮಪ್ಪನಿಗೆ ಸಿದ್ಧಿಸಿದೆ. ಪಿ.ಟಿ. ಪರಮೇಶ್ವರನಂತಹ ... ದಾರನಿಗೇ ಮುಲಾಮು ಹಚ್ಚಿದ್ದ ರಾಮಪ್ಪನಿಗೆ ನೆತ್ತಿ ... ರಾಜಕಾರಣಿ ರವೀಂದ್ರನಂತಹ ಶಾಸಕನನ್ನು ಪಳಗಿಸು... ಕಷ್ಟವಾದೀತೆ? ಶಾಸಕ ರವೀಂದ್ರನ ವೀಕ್‌ನೆಸ್ ಗಳ... (ಚಾಡಿ) ಕಿವಿಕಚ್ಚಿಸಿಕೊಳ್ಳುವ ಬಲಹೀನತೆ ಯನ್ನು ... ರಾಮಪ್ಪ ಸರಿಯಾದ ಸಮಯದಲ್ಲಿ ತನ್ನ ಅನು... ತಕ್ಕಂತೆ ಎನ್‌ಕ್ಯಾಷ್ ಮಾಡಿಕೊಳ್ಳ ತೊಡಗಿದ. ಶಾ... ಗದವರ ವಿರುದ್ಧವೇ ರಾಮಪ್ಪ ಚಾಡಿಹೇಳಿ ಶಾ... ಹರಪನಹಳ್ಳಿಯಲ್ಲಿ ದೊಡ್ಡದೊಂದು ವಿರೋಧಿಗಳ ಗ... ಹುಟ್ಟುಹಾಕಿದ ಖ್ಯಾತಿಯೂ ರಾಮಪ್ಪನಿಗೆ ಸಲ್ಲು...

ಎರಡನೇ ಬಾರಿಗೆ ಹರಪನಹಳ್ಳಿಗೆ ವಕ್ಕರಿಸಿ... ರಾಮಪ್ಪ ಮಾಡಿದ ಮೊದಲ ಕೆಲಸವೆಂದರೆ 20... ತನ್ನ ಎತ್ತಂಗಡಿಗೆ ಕಾರಣವಾದ ಶಿಕ್ಷಕರ ಸಂಘಟ... ಧ್ವಂಸ ಮಾಡಿದ್ದು. ತನ್ನ ಚೇಲಾಗಳನ್ನು ಬಳಸಿ... ಶಿಕ್ಷಕರ ಸಂಘದಲ್ಲೇ ಒಡಕು ತಂದಿಟ್ಟ ರಾಮಪ್ಪ... ಶೈಕ್ಷಣಿಕ ವಾತಾವರಣವನ್ನೇ ಕುಲಗೆಡಿಸಿದ್ದಾನೆ. ಬಿಇಓ ರಾಮಪ್ಪನಿಂದ ಶಿಕ್ಷಣ ರಂಗ ಅದ್ಯೆಗೆ ... ವಾಗಲು ಸಾಧ್ಯ?

■ ಟಿ.ಎನ್.ಪ...

ಬಿಇಓ ಸಾಹೇಬರ 'ರಾಮಸೇನೆ'

ಹರಪನಹಳ್ಳಿಯಲ್ಲಿ ಬಿಇಓ ರಾಮಪ್ಪನ ದರ್ಬಾರಿಗೆ ಸಾಥ್ ನೀಡುವುದಕ್ಕೆಂದರೇ ಮಂಜುನಾಥ ಪೂಜಾರ್ ನೇತೃತ್ವದ ಒಂದು ಚೇಲಾ ಗ್ಯಾಂಗ್ ಇದೆ. ಒಟ್ಟು 4 ಜನರ ಈ ಶಿಕ್ಷಕ ಮಹನೀಯರಿಂದ ಶಿಕ್ಷಕ ವೃಂದಕ್ಕೇ ಅವಮಾನವಾಗಿದೆ. ರಾಮಪ್ಪನ ಬೇಕುಬೇಡಗಳ ಸಪ್ಲೇಯರ್ ಗಳಂತೆ ವರ್ತಿಸುವ ಈ ಅಪವಿತ್ರಗಳು ಆತನ ಸಕಲ ಡೀಲ್‌ಗಳ ಮೀಡಿಯೇಟರ್‌ಗಳು.

ಈ ಮಂಜುನಾಥ ಪೂಜಾರ್ ಬಿ.ಓಬಳಾಪುರ ಶಾಲೆಯ ಶಿಕ್ಷಕ. ಯಾವಾಗ ಬಿಇಓಗೆ ಬಕೆಟು ಹಿಡಿಯಲು ಶುರುಮಾಡಿದನೋ ಆವಾಗಿನಿಂದ ರಾಮಪ್ಪ ಪೂಜಾರಿಯ ಋಣ ತೀರಿಸಿಕೊಳ್ಳಲು ಸಾಕ್ಷರತಾ ಕೋ-ಆರ್ಡಿನೇಟರ್ ಆಗಿ ನೇಮಕ ಮಾಡಿದ್ದಾನೆ. ಈಗಾಗಲೇ ಈ ಹುದ್ದೆ ಕಿತ್ತೋಗಿರೋ ಸರಕಾಗಿದೆ. ಇಲ್ಲಿ ಇಬ್ಬರಿಗೆ ಅವಕಾಶವಿಲ್ಲ, ಈಗಾಗಲೇ ಪಾಂಡುರಂಗಪ್ಪ ಆರ್.ಬಡಿಗೇರ ಎನ್ನುವವನು ಈ ಕಿತ್ತೋಗಿರೋ ಹುದ್ದೆಗೆ ನೇಮಕವಾಗಿದ್ದಲ್ಲದೆ ಶಾಸಕ ರವೀಂದ್ರನಿಗೆ ಪಿಎ ಆಗಿ ಮಿಂಚುತ್ತಿದ್ದಾನೆ. ಹಾಗೆ ನೋಡಿದರೆ ಶಾಸಕರಿಗೆ ಶಿಕ್ಷಕರನ್ನು ಪಿಎ ಆಗಿ ನೇಮಿಸಿಕೊಳ್ಳಬಾರದೆಂಬ ಕಾನೂನಿದ್ದರೂ ಅದನ್ನು ಉಲ್ಲಂಘಿಸಿ ಈ ನೇಮಕವಾಗಿದೆ. ಅಂದರೆ ಕ್ಷೇತ್ರದ ವ್ಯವಸ್ಥೆ ಅದೆಷ್ಟು ಹದಗೆಟ್ಟಿದೆ ಎಂಬುದು ಇದರಿಂದ ಅರ್ಥವಾಗುತ್ತದೆ.

ಹರಪನಹಳ್ಳಿ ತಾಲ್ಲೂಕಿನ ಕೆಲ ಸರ್ಕಾರಿ ಶಿಕ್ಷಕರಲ್ಲಿ ರಾಜಕೀಯ ಹೈಲಿದೆ. ಜೊತೆಗೆ ಗ್ಯಾಂಬ್ಲಿಂಗ್, ಬಡ್ಡಿ ವ್ಯವಹಾರದ ನಂಟುಗಳೂ ಇವೆ. ಗಂಟೆ ಹೊಡಿ ಸಂಬಳ ಪಡಿ ಎನ್ನುವ ಜೋಕಿಗೆ ಸಾಕ್ಷಿಯಾಗುವಂತಹ ಶಿಕ್ಷಕರ ದಂಡಿದೆ. ಇಂಥಾ ಶಿಕ್ಷಕರು ತಿಂಗಳಲ್ಲಿ ಒಂದು ದಿನವೂ ಶಾಲೆಗೆ ಬಂದು ಮಕ್ಕಳಿಗೆ ಪಾಠ ಮಾಡುವ ಅಗತ್ಯವೇನಿಲ್ಲ, ಯಾವತ್ತಾದರೂ ಒಂದುದಿನ ಬಿಡುವಿದ್ದಾಗ ಬಂದು ಶಾಲೆಯ ಹಾಜರಾತಿ ಪುಸ್ತಕಕ್ಕೆ ಸಹಿ ಹಾಕಿದರೆ ಸಾಕು, ಸರ್ಕಾರಿ ಸಂಬಳ ಗ್ಯಾರಂಟಿ. ಆದರೆ ಈ ಬಿಟ್ಟಿ ಸಂಬಳದಲ್ಲಿ ಬಿಇಓಗೂ ಶಿಕ್ಷಕರಿಗೂ 50-50 ಪರ್ಸೆಂಟೇಜು ಹಂಚಿಕೆ ಯಾಗುತ್ತದೆ. ಇಲ್ಲಿ ಇಂಥಾ ಶಿಕ್ಷಕರ ಸಂಖ್ಯೆಗೇನು ಕೊರತೆ ಯಿಲ್ಲ, ಅಂತವರೆಲ್ಲ ಬಿಇಓ ರಾಮಪ್ಪನ 'ರಾಮಸೇನೆ'ಯ ಚೇಲಾಗಳು!

ಕೊಪ್ಪಳ: ಶವಪೆಟ್ಟಿಗೆಯತ್ತ ಕೈ ರಾಜಕಾರಣ



ಕೊಪ್ಪಳ ಜಿಲ್ಲಾ ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿಯಿಲ್ಲ. ಮನೆಯೊಂದು ಮೂರು ಬಾಗಿಲಿನಂತಾಗಿದೆ. ತಮ್ಮೊಳಗೇ ಕಿತ್ತಾಡುವ ಕಾಂಗ್ರೆಸಿನ ಲೀಡರಗಳ ದೆಸೆಯಿಂದ ಈಗ ಕಾಂಗ್ರೆಸ್ ದಯನೀಯ ಸ್ಥಿತಿಯಲ್ಲಿದೆ. ಒಂದೂವರೆ ದಶಕಗಳ ಹಿಂದೆ ಠೇವಣಿ ಜಪ್ತಿ ಮಾಡಿಸಿಕೊಳ್ಳುವ ಹೀನಾಯಸ್ಥಿತಿಯ ಲ್ಲಿದ್ದ ಬಿಜೆಪಿಯ ಚೆಡ್ಡಿ ಚತುರರು ಇವತ್ತು ಕಾಂಗ್ರೆಸ್ಸಿಗರ ಕಲಹದಿಂದ ಅನಾಯಾಸಕಾರಿಗಳಾಗಿ ಬೆಳೆದು ನಿಂತು ಕೇಕೆ ಹಾಕುತ್ತಿದ್ದಾರೆ. ಇದರಿಂದ ಕಾಂಗ್ರೆಸ್ ಪಕ್ಷ ಜಿಲ್ಲೆಯಲ್ಲಿ ತನ್ನ ಅಸ್ತಿತ್ವ ಕಳೆದುಕೊಳ್ಳುವ ಭೀತಿಗೆ ಬಂದು ತಲುಪಿದೆ. ಮುಂದಿನ ದಿನಗಳಲ್ಲಿ ತಮ್ಮ ನಡುವಿನ ಬಿನ್ನಮತ ಶಮನ ಮಾಡಿಕೊಂಡು ಒಗ್ಗಟ್ಟಾಗಿ ಮುನ್ನಡೆಯದಿದ್ದರೆ ಕೈ ಲೀಡರುಗಳು ರಾಜಕೀಯವಾಗಿ ಕೇರ್‌ಆಫ್ ಫುಟ್‌ಪಾತ್ ಆಗುವುದು ನಿಶ್ಚಿತ.

2013ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಕೊಪ್ಪಳ ಜಿಲ್ಲೆಯಲ್ಲಿ ಭರ್ಜರಿ ಫಸಲನ್ನೆ ತೆಗೆದಿತ್ತು. ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಲ್ಲಿ ಮೂರರಲ್ಲಿ ಕಾಂಗ್ರೆಸ್ ಬಾವುಟ ಹಾರಾಡಿದ್ದವು. ಬಿಜೆಪಿ ಮತ್ತು ಜೆಡಿಎಸ್ ತಲಾ ಒಂದು ಕ್ಷೇತ್ರಕ್ಕಷ್ಟೇ ಸೀಮಿತವಾಗಿದ್ದವು. ಕೊಪ್ಪಳ ಕ್ಷೇತ್ರದಲ್ಲಂತೂ ಕಾಂಗ್ರೆಸ್‌ನ ಕೆ.ರಾಘವೇಂದ್ರ ಹಿಟ್ನಾಳ್ 5 ಬಾರಿ ಶಾಸಕನಾಗಿ ಮೆರೆದಾಡಿದ್ದ ಬಿಜೆಪಿಯ ಸಂಗಣ್ಣ ಕರಡಿಯನ್ನು ಅನಾಮತ್ತು 27,000 ಮತಗಳ ಅಂತರದಿಂದ ಸೋಲಿಸಿ ಮರ್ಮಾಘಾತ ನೀಡಿದ್ದರು. ಇನ್ನು ಈಗಿನ ಮಂತ್ರಿ ಬಸವರಾಜ ರಾಯರೆಡ್ಡಿ ಕೂಡಾ ಬಿಜೆಪಿ, ಕೆಜೆಪಿ ಹಾಗೂ ಬಿಎಸ್‌ಆರ್ ಎಂಬ ವಿಭಜನೆಯ ಲಾಭ ಪಡೆದು ಬಿಜೆಪಿ ಅಭ್ಯರ್ಥಿ ಹಾಲಪ್ಪ ಆಚಾರರನ್ನು 17000 ಮತಗಳ ಅಂತರದಿಂದ ಸೋಲಿಸಿದ್ದರು. ಕನಕಗಿರಿ ಮೀಸಲು ಕ್ಷೇತ್ರದಿಂದ ಮಾಜಿ ಮಂತ್ರಿ ಶಿವರಾಜ ತಂಗಡಗಿ ಕೂಡ ಕೆಜೆಪಿ ಅಭ್ಯರ್ಥಿ ಬಸವರಾಜ ದಡೇಸ್ಗೂರರನ್ನು 5000 ಮತಗಳ ಅಂತರದಿಂದ ಸೋಲಿಸಿ ವಿಜಯ ಪತಾಕೆ ಹಾರಿಸಿದ್ದರು. ಕುಷ್ಟಗಿಯಲ್ಲಿ ಗೆಲ್ಲುವ ಕುದುರೆಯೆಂದೇ ಬಿಂಬಿತವಾಗಿದ್ದ ಅಂದಿನ ಶಾಸಕ ಅಮರೇಗೌಡ ಬ್ಯೆಯಾಪುರರವರು ಕಾಂಗ್ರೆಸ್ ಮಾಜಿ ಶಾಸಕ ಹಸನಸಾಬ ದೋಟಿಹಾಳನ ಪಕ್ಷದ್ರೋಹದಿಂದ ಬಿಜೆಪಿ ಅಭ್ಯರ್ಥಿ ದೊಡ್ಡನಗೌಡನ ವಿರುದ್ಧ ಕೇವಲ 1500 ಮತಗಳ ಅಂತರದಿಂದ ಸೋಲುವಂತಾಗಿತ್ತು. ಇತ್ತ ಗಂಗಾವತಿಯಲ್ಲಿ ಪಳಗಿದ ರಾಜಕೀಯ ಪಟು ಹೆಂಡದ ದೊರೆ ಹೆಚ್.ಜಿ.ರಾಮುಲುವಿನ ಪುತ್ರ ಹೆಚ್.ಆರ್.ಶ್ರೀನಾಥ ಅಂದಿನ ಜೆಡಿಎಸ್ ಅಭ್ಯರ್ಥಿ ಇಕ್ಬಾಲ್ ಅನ್ಸಾರಿ ವಿರುದ್ಧ ಠೇವಣಿ ಕಳೆದುಕೊಂಡು ಹೀನಾಯ ಸೋಲು ಅನುಭವಿಸಿದ್ದ ಆದಾಗ್ಯೂ ಜಿಲ್ಲೆಯಲ್ಲಿ ಕಾಂಗ್ರೆಸ್ ತನ್ನ ಬಿಗಿತ ಸಾಬೀತುಮಾಡಿತ್ತು.

ಆದರೆ ಈಗ ಪರಿಸ್ಥಿತಿ ಸಂಪೂರ್ಣ ಬಿಗಡಾಯಿಸಿದೆ. ಆಂತರಿಕ ಕಚ್ಚಾಟದಿಂದ ಕಾಂಗ್ರೆಸ್‌ನ ಬಲ ಕ್ಷೀಣಿಸಿದೆ. ಅತಿರಿಕ್ತವಾಗಿ ಬಿಜೆಪಿ, ಕೆಜೆಪಿ, ಬಿಎಸ್‌ಆರ್ ಪಾರ್ಟಿಗಳ ವಿಲೀನದಿಂದ ಕೇಸರಿ ಪಕ್ಷ ತನ್ನ ಬಲಾಢ್ಯತೆಯನ್ನು ವೃದ್ಧಿಸಿಕೊಳ್ಳುವ ಹಾದಿಯಲ್ಲಿದೆ.

ಯಲಬುರ್ಗಾದಿಂದ ರಾಯರೆಡ್ಡಿ ಯಾವಾಗ 6ನೇ ಬಾರಿಗೆ ಶಾಸಕರಾದರೊ ಆಗ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗುವ ಹುಮ್ಮಸ್ಸಿನಲ್ಲಿದ್ದರು. ಆದರೆ ಸಿ.ಎಂ. ಸಿದ್ಧರಾಮಯ್ಯ ಅದಕ್ಕೆ ಬ್ರೇಕ್ ಹಾಕಿದ್ದರು. ಜಿಲ್ಲೆಯಿಂದ ಶಿವರಾಜ ತಂಗಡಗಿಗೆ ಮಂತ್ರಿ ಭಾಗ್ಯ ಒಲಿಯಿತು. ಆದರೆ ತನ್ನ 3 ವರ್ಷ ಅವಧಿಯಲ್ಲಿ ಥೇಟ್ ಅವಿವೇಕಿಯಂತೆ ಅತಾಹುಡಿ ಆಡಳಿತದಿಂದ ಹೆಸರು ಕೆಡಿಸಿಕೊಂಡ ತಂಗಡಗಿ ಮಂತ್ರಿ ಪದವಿ ಕಳೆದುಕೊಂಡದ್ದು ರಾಯರೆಡ್ಡಿ ಪಾಲಿಗೆ ಸಚಿವಗಿರಿ ಬಾಗಿಲನ್ನು ತೆರೆಯಿತು.

ಸಚಿವರ ಸ್ವಕ್ಷೇತ್ರ ಯಲಬುರ್ಗಾದಲ್ಲಿ ರಾಯರೆಡ್ಡಿ ಇಶಾರೆ ಇಲ್ಲದೆ ಕಾಂಗ್ರೆಸ್‌ನಲ್ಲಿ ಒಂದು ಹುಲ್ಲುಕಡ್ಡಿ ಕೂಡಾ ಅಲ್ಲಾಡುವುದಿಲ್ಲ. ಸಚಿವರ ಈ ಸರ್ವಾಧಿಕಾರಿ ಧೋರಣೆ ಕೆಲ ನಿಷ್ಠಾವಂತ ಕಾಂಗ್ರೆಸ್ ಮುಖಂಡರಿಗೆ ಬೇಸರ ತರಿಸಿದೆ. ಜಿಲ್ಲಾ ಪಂಚಮಸಾಲಿ ಸಮಾಜದ ಅಧ್ಯಕ್ಷ ಬಸಲಿಂಗಪ್ಪ ಭೂತೆಯಂತಹ ಮಾಸ್ ಲೀಡರನ್ನೆ ರಾಯರೆಡ್ಡಿ ಬೇಕಂತಲೇ ಕಡೆಗಣಿಸುತ್ತಿರುವುದು ಭೂತೆ ಬೆಂಬಲಿಗರನ್ನು ಕೆರಳಿಸಿದೆ. ಬಸಲಿಂಗಪ್ಪನವರ ತಂದೆ ಕೆ.ಬಿ.ಭೂತೆಯವರು ಸ್ವಾತಂತ್ರ್ಯದ ನಂತರ ಪ್ರಥಮ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಇಂತಹ ಭೂತೆ ಬಸಲಿಂಗಪ್ಪನವರನ್ನು ಕಡೆಗಣಿಸುತ್ತಿರುವುದು ಅವರ ಹಿಂಬಾಲಕರನ್ನು ಕೆರಳಿಸಿದ್ದು ರಾಯರೆಡ್ಡಿಯವರ ಈ ಡೋಂಟ್‌ಕೇರ್ ಪ್ರವೃತ್ತಿ ಮುಂದುವರೆದರೆ ರಾಯರೆಡ್ಡಿ ವಿರುದ್ಧ ಕಾರ್ಯಕರ್ತರು ಸಿಡಿದೇಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಇನ್ನು ಕೊಪ್ಪಳದಲ್ಲಿ ಹಿಟ್ನಾಳ ಫ್ಯಾಮಿಲಿ ಕೈಯಲ್ಲಿ ಕಾಂಗ್ರೆಸ್ ನವನವ ನರಳುತ್ತಿದೆ. ಮಾಜಿ ಶಾಸಕ ಕೆ. ಬಸವರಾಜ ಹಿಟ್ನಾಳ್ ಮತ್ತು ಆತನ ಮಗ ಹಾಲಿ ಶಾಸಕ ಕೆ. ರಾಘವೇಂದ್ರ ಹಿಟ್ನಾಳ್ ಅಹಿಂದ ಹೆಸರಿನಲ್ಲಿ ರಾಜಕಾರಣ ಮಾಡುತ್ತಿರುವುದು ಎಲ್ಲರಿಗೂ ಗೊತ್ತು. ಆದರೆ ಇವರಿಬ್ಬರು ದಲಿತರು ಮತ್ತು ಅಲ್ಪಸಂಖ್ಯಾತರನ್ನು ಕೇವಲ ಓಟ್‌ಬ್ಯಾಂಕ್ ಆಗಿ ಬಳಸಿಕೊಂಡು ನಂತರ ತಮ್ಮ ಕುರುಬ ಜಾತಿ ರಾಜಕೀಯ ಮಾಡುವುದರಲ್ಲಿ ನಿಸ್ಸೀಮರು. ಇನ್ನು ಇವರ ಪಕ್ಷನಿಷ್ಠೆಯೂ ಪ್ರಶ್ನಾರ್ಹವಾದುದು. ಯಾಕೆಂದರೆ ನಗರಸಭೆಯಲ್ಲಿ ಕಾಂಗ್ರೆಸ್‌ಗೆ ಸ್ಪಷ್ಟವಾದ ಬಹುಮತವಿದ್ದರೂ ಪಕ್ಷೇತರ ಸದಸ್ಯ ಮಾರ್ವಾಡಿ ಮಹೇಂದ್ರ ಚೋಪ್ರಾನಿಂದ 2.5 ಕೋಟಿ ಖರ್ಚು ಮಾಡಿಸಿ ತಾವೊಂದಿಷ್ಟು ಗೆಬರಿಕೊಂಡು, ಪ್ರತಿಯೊಬ್ಬ ಕಾಂಗ್ರೆಸ್ ಹಾಗೂ ಜೆಡಿಎಸ್ ಸದಸ್ಯರಿಗೂ ಒಂದಿಷ್ಟು ಹಣ ಬಟವಾಡೆ ಮಾಡಿ ಆತನನ್ನು ಅಧ್ಯಕ್ಷನನ್ನಾಗಿಸಿದ್ದಾರೆ. ಇದು ಹಿಟ್ನಾಳ್ ಕಂಪನಿಯ ಕಾಂಗ್ರೆಸ್ ದ್ರೋಹದ ಪುರಾಣ. ಇನ್ನು ಈ ಹಿಟ್ನಾಳ್ ಕಂಪನಿಯ ಅತೀಯಾದ ಜಾತಿರಾಜಕಾರಣಕ್ಕೆ ಜನತೆ ಕ್ಯಾಕರಿಸಿ ಉಗಿಯುತ್ತಿದ್ದಾರೆ.

ಇದಕ್ಕೆ ಉದಾಹರಣೆ ಎನ್ನುವಂತೆ ಮೊನ್ನೆ ಭಾಗ್ಯನಗರ ಪಟ್ಟಣ ಪಂಚಾಯತಿ ಚುನಾವಣೆಯಲ್ಲಿ ಕಾಂಗ್ರೆಸ್ ಮಕಾಡೆ ಮಲಗಿ, ಬಿಜೆಪಿ ಗೆಲುವು ಪಡೆದಿದೆ. ಹೀಗಾಗಿ ಸ್ಥಳೀಯ ಶಾಸಕ ಕೆ. ರಾಘವೇಂದ್ರ ಹಿಟ್ನಾಳರ ವರ್ಚಸ್ಸಿಗೆ ಗರಬಡಿದಿದೆ. ಇದೇ ಹುಮ್ಮಸ್ಸಿನಲ್ಲಿ ಬಿಜೆಪಿಯಿಂದ ಹಾಲಿ ಸಂಸದ ಸಂಗಣ್ಣ ಕರಡಿಯ ಪುತ್ರ ಜಿ.ಪಂ. ಸದಸ್ಯ ಗವಿಸಿದ್ದಪ್ಪ ಕರಡಿ, ಬಿಜೆಪಿ ಮುಖಂಡ ಸಿ.ವಿ.ಚಂದ್ರಶೇಖರ ಮೊದಲಾದವರು ಹಿಟ್ನಾಳ್ ಕಂಪನಿಯನ್ನು ಬಗ್ಗುಬಡಿಯಲು ತಮ್ಮದೇ ಆದ ತಯಾರಿ ನಡೆಸಿ ಕೊಪ್ಪಳ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಪ್ಲಾನ್ ಮಾಡುತ್ತಿದ್ದಾರೆ.

2008ರಲ್ಲಿ ಲಿಂಗಸೂಗೂರಿನ ಶಾಸಕರಾಗಿದ್ದ ಅಮರೇಗೌಡ ಬ್ಯೆಯಾಪುರರವರು 2013ರಲ್ಲಿ ತಮ್ಮ ಸ್ವಕ್ಷೇತ್ರ ಮೀಸಲು ಕ್ಷೇತ್ರವಾಗಿ ಮಾರ್ಪಟ್ಟದ್ದರಿಂದ ಕುಷ್ಟಗಿಗೆ ಬಂದು ಕಾಂಗ್ರೆಸ್ ಟಿಕೆಟ್ ಪಡೆದಿದ್ದರು. ಆದರೆ ಟಿಕೆಟ್ ಕೈತಪ್ಪಿದ ಬೇಗುದಿಯಲ್ಲಿ ಕಾಂಗ್ರೆಸ್‌ನ ಮಾಜಿ ಶಾಸಕ ಹಸನಾಬ ದೋಟಿಹಾಳ ಚುನಾವಣೆಯಲ್ಲಿ ಕೈಕೊಟ್ಟು ಬಿಜೆಪಿ ಪರವಾಗಿ ಕೆಲಸ ಮಾಡಿದ್ದರಿಂದ ಬಿಜೆಪಿ ಅಭ್ಯರ್ಥಿ ದೊಡ್ಡನಗೌಡ ಗೆದ್ದು ತಮ್ಮ 30 ವರ್ಷಗಳ ರಾಜಕೀಯ ಇತಿಹಾಸದಲ್ಲಿ ಬ್ಯೆಯಾಪುರ ಮೊದಲ ಸೋಲು ಕಾಣುವಂತಾಯ್ತು. ಈಗ ಬ್ಯೆಯಾಪುರ ಮತ್ತು ಹಸನಸಾಬ ತಮ್ಮ ನಡುವಿನ ಭಿನ್ನಾಭಿಪ್ರಾಯವನ್ನು ಮರೆತು ಒಂದಾಗಿದ್ದು ಈ ಸಾರಿ ಕುಷ್ಟಗಿಯಲ್ಲಿ ಬ್ಯೆಯಾಪುರ ಗೆಲುವಿನ ಹಾದಿಯತ್ತ ದಾಪುಗಾಲಿಡುತ್ತಿದ್ದಾರೆ.

ಇನ್ನುಳಿದಂತೆ ಜಿಲ್ಲೆಯ ರಾಜಕೀಯ ಶಕ್ತಿಕೇಂದ್ರ ಗಂಗಾವತಿಯಲ್ಲಿ ಕಾಂಗ್ರೆಸ್ಸಿನ ಪುರಾತನ ಪಿತಾಮಹ ಹೆಚ್.ಜಿ.ರಾಮುಲುವಿನ ಪುತ್ರ ಮತ್ತು ಮಾಜಿ ಎಂಎಲ್‌ಸಿ ಹೆಚ್.ಆರ್.ಶ್ರೀನಾಥನ ಪಾಲಿಗೆ ಜೆಡಿಎಸ್ ಶಾಸಕ ಇಕ್ಬಾಲ್ ಅನ್ಸಾರಿ ದುಃಸ್ವಪ್ನವಾಗಿ ಕಾಡುತ್ತಿದ್ದಾರೆ. ಮಾಜಿ ಸಂಸದ ರಾಮುಲು ಈ ಜಿಲ್ಲೆಯಲ್ಲಿ 30 ವರ್ಷ ಕಾಂಗ್ರೆಸ್ಸನ್ನು ತನ್ನ ಕಪಿಮುಷ್ಠಿಯಲ್ಲಿ ಇಟ್ಟುಕೊಂಡು ಮೆರೆದಿದ್ದ. ಆದರೆ ದುರಂತವೆಂದರೆ ಆತನ ಮಗ ಶ್ರೀನಾಥ ರಾಜಕೀಯವಾಗಿ ಇನ್ನು ಪ್ರಬುದ್ಧನಾಗಿಲ್ಲ. ಈತನ ಪೆದ್ದುತನ, ಉಡಾಫೆಗಳೇ ಆತನ ಪಾಲಿಗೆ ಶತ್ರುಗಳಾಗಿವೆ. ಮುಂದಿನ ದಿನಮಾನಗಳಲ್ಲಿ ಇಕ್ಬಾಲ್ ಅನ್ಸಾರಿ ಕಾಂಗ್ರೆಸ್ ಸೇರುವುದು ಖಚಿತವಾಗಿದ್ದು ಅನ್ಸಾರಿಗೆ ಸಿದ್ಧರಾಮಯ್ಯನವರ ಶ್ರೀರಕ್ಷೆ ಇದೆ. ಜಿಲ್ಲೆಯಲ್ಲಿ ಇಕ್ಬಾಲ್ ಅನ್ಸಾರಿ ಒಬ್ಬ ಮುಸ್ಲಿಂ ನಾಯಕನಾಗಿ ಬೆಳೆದಿದ್ದು ಇವರು ಕಾಂಗ್ರೆಸಿಗೆ ಬಂದರೆ ಪಕ್ಷಕ್ಕೆ ಒಂದಿಷ್ಟು ಚೈತನ್ಯವಾಗುತ್ತದೆ. ಹಾಗಾಗಿ ಶ್ರೀನಾಥ್‌ಗೆ ಟಿಕೆಟ್ ಕೈತಪ್ಪುವ ಸಾಧ್ಯತೆಯೇ ಹೆಚ್ಚು.

ಕನಕಗಿರಿಯಲ್ಲಿ 2008ರಲ್ಲಿ ಪಕ್ಷೇತರ ಶಾಸಕನಾಗಿ ಆಯ್ಕೆಯಾಗಿ ಅದೃಷ್ಟವೆಂಬಂತೆ ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾಗಿ 3 ವರ್ಷ ಮೆರೆದಾಡಿ ನಂತರ ಕೇಡುಗಾಲವೆನ್ನುವಂತೆ ಕುಮಾರಸ್ವಾಮಿ ಜೊತೆಸೇರಿ ಸರ್ಕಾರ ಕೆಡವಲು ಮುಂದಾಗಿ ಅನರ್ಹನಾಗಿದ್ದ ಶಿವರಾಜ್ ತಂಗಡಗಿ ಆಮೇಲೆ ಸುಪ್ರೀಂಕೋರ್ಟ್‌ನಲ್ಲಿ ಗುದ್ದಾಡಿ ಶಾಸಕ ಸ್ಥಾನ ಪಡೆದಿದ್ದ. ಇಂಥಾ ತಂಗಡಗಿ 2013ರಲ್ಲಿ ಕಾಂಗ್ರೆಸ್ ಸೇರಿ ಶಾಸಕನಾಗಿದ್ದಲ್ಲದೆ ಸಿದ್ಧರಾಮಯ್ಯನ ಸಂಪುಟದಲ್ಲಿ ಮಂತ್ರಿಯೂ ಆಗಿದ್ದ. ಆದರೆ ತನ್ನದೇ ಸ್ವಯಂಕೃತಾ ಅಪರಾಧದಿಂದ ಅತ್ಯಂತ ವಿವಾದಿತ ಮಂತ್ರಿಯಾಗಿ ಕಡೆಗೂ ಸಚಿವ ಸ್ಥಾನದಿಂದ ಹೊರದಬ್ಬಿಸಿಕೊಂಡು ಸಂಪೂರ್ಣವಾಗಿ ಹೆಸರು ಕೆಡಿಸಿಕೊಂಡಿದ್ದಾನೆ. ತಂಗಡಗಿಯ ದುರಾಡಳಿತದಿಂದ ಕಾಂಗ್ರೆಸ್ ಕನಕಗಿರಿಯಲ್ಲಿ ಸರ್ವನಾಶವಾಗಿ ಹೋಗುವ ಹಂತ ತಲುಪಿದ್ದು, ಇದನ್ನರಿತಿರುವ ಸಮಯಸಾಧಕ ರಾಜಕಾರಣಿಯಾದ ತಂಗಡಗಿ ಕಾಂಗ್ರೆಸ್‌ಗೆ ಗುಡ್‌ಬೈ ಹೇಳಿ ಬಿಜೆಪಿ ಸೇರುವ ಲಕ್ಷಣಗಳೇ ಢಾಳಾಗಿ ಗೋಚರಿಸುತ್ತಿವೆ. ಒಟ್ಟಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕಾಂಗ್ರೆಸ್ ಪರಿಸ್ಥಿತಿ ದೇವರಿಗೇ ಪ್ರೀತಿಯೆಂಬಂತಾಗಿರುವುದು ಮಾತ್ರ ಸುಳ್ಳಲ್ಲ.

■ ಶಿವಶರಣಪ್ಪ ಪಾಟೀಲ್

---

05 ⏮

ಮತ್ತೆ ಮತ್ತೆ ರಿಪೀಟ್ ಆದಂತೆ ಕಾಣಿಸಿಕೊಳ್ಳುತ್ತವೆ. ಆರು ವರ್ಷಗಳ ಹಿಂದೆ ತಮಿಳಿನಲ್ಲಿ ಬಂದ 'ನಂದಾಲಾಲಾ' ಚಿತ್ರದ ನೆರಳು ಈ ಚಿತ್ರಕ್ಕಿದ್ದಂತಿದೆ. ಅಂತಹುದೇ ಒಂದು ಮುಗ್ಧ-ಮಾನವೀಯ ಪಯಣವನ್ನು ಚಿತ್ರ ಮರು ನಿರೂಪಿಸಿದಂತಿದೆ.

ಆದರೆ ಹೊಸ ನಿರ್ದೇಶಕರಿಗೆಲ್ಲಿದೆ ನೆಲೆ?

ಇಂತಹ ಸಿನಿಮಾಗಳನ್ನು ಮೆಚ್ಚಿಕೊಳ್ಳುತ್ತಲೇ ಹೊಸ ತಲೆಮಾರಿನ ಪ್ರತಿಭಾವಂತ ನಿರ್ದೇಶಕರ ಪಾಡಿನ ಬಗ್ಗೆಯೂ ಚರ್ಚಿಸಬೇಕು.

ಕನ್ನಡದಲ್ಲಿ ಹೊಸ ಪ್ರಯೋಗಗಳಿಗೆ ಕೈಹಾಕುವ 'ಯುವ ನಿರ್ದೇಶಕರ 'ಹಣೆಬರಹ'ವೇ ಸರಿ ಇಲ್ಲವೇನೋ ಎನ್ನಿಸುತ್ತದೆ..! ಇದು ಮೊನ್ನೆಮೊನ್ನೆಯವರೆಗೂ ಸರಿಯಾಗಿತ್ತು ಇತ್ತೀಚಿಗ್ಯಾಕೋ ಸರಿಯಾಗುತ್ತಿಲ್ಲ ಎಂದು ಹೇಳುವ ಮೂಲಕ ಈ ಪಾಡನ್ನು ಮುಂದಿಟ್ಟುಕೊಂಡು ಚರ್ಚಿಸಬಹುದು.

ಇದನ್ನು ಕನ್ನಡದ ಪ್ರೇಕ್ಷಕರು ನಂಬುತ್ತಾರೋ ಬಿಡುತ್ತಾರೋ ಅರ್ಥವಾಗುತ್ತಿಲ್ಲ... ಸುಮ್ಮನೆ ಗಮನಿಸುತ್ತಾ ಹೋಗೋಣ... 'ಸಿನಿಮಾ ಪ್ಯಾರಡೈಸ್' ಸಿನಿಮಾದಿಂದ ಪ್ರೇರೇಪಿತರಾಗಿ 'ಲೂಸಿಯಾ' ಸಿನಿಮಾ ಮಾಡಿ ಗೆದ್ದ ಪವನ್‌ಕುಮಾರ್ ಮತ್ತೊಂದು ಹಿಟ್ ಕೊಡಲು ದೆವ್ವದ ಕಥಾಹಂದರವುಳ್ಳ 'ಯು ಟರ್ನ್'ಗಾಗಿಯೇ ಕಾಯಬೇಕಾಯಿತು..! 'ಗೋವಿಂದಾಯನಮಃ', 'ಗೂಗ್ಲಿ', 'ರಣವಿಕ್ರಮ'ದಂತಹ 'ಬ್ಲಾಕ್ ಬ್ಲಸ್ಟರ್'ಗಳನ್ನು ನಿರ್ದೇಶಿಸಿದರೂ ಪವನ್ ಒಡೆಯರ್ ಮತ್ತದೇ ಕಾಮಿಡಿ ಸಿನಿಮಾ 'ನಟರಾಜ ಸರ್ವಿಸ್' ಮೊರೆ ಹೋಗಬೇಕಾಯಿತು.. 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಎಂಬ ಸಂವೇದನಾಶೀಲ ಸಿನಿಮಾ ಕೊಟ್ಟರೂ ಹೇಮಂತ್‌ಕುಮಾರ್‌ಗೆ ಯಾವ ನಿರ್ಮಾಪಕರೂ ಕಥೆ ಕೇಳಲು ರೆಡಿ ಇಲ್ಲ! 'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ'ಯ ಸಂತೋಷ್ ಆನಂದರಾಮ್ ಪುನೀತ್ ರಾಜ್‌ಕುಮಾರ್ ಅವರ 'ರಾಜಕುಮಾರ'ನ ಗುಂಗಿನಲ್ಲಿದ್ದರೆ, 'ಬಹದ್ದೂರ್'ನ ಚೇತನ್‌ಕುಮಾರ್ ಇನ್ನೂ ಅದೇ ಧ್ರುವ ಸರ್ಜಾನ 'ಭರ್ಜರಿ' ತಯಾರಿಯಲ್ಲಿದ್ದಾರೆ. 'ಅಂಬಾರಿ', 'ಅದ್ದೂರಿ' ಸಕ್ಸಸ್ ನಂತರ 'ರಾಟೆ', 'ಐರಾವತ'ದ ಸೋಲಿನ ಸುಳಿಯಲ್ಲಿ ಎ.ಪಿ. ಅರ್ಜುನ್ ಮೂಲೆಗುಂಪಾದರೆ, 'ತಿಥಿ' ಸಿನಿಮಾದ ಟೀಂ ಬಗ್ಗೆ ಪ್ರಶಂಸೆಗಳ ಸುರಿಮಳೆಯಾದರೂ ಅವರನ್ನು ಕರೆದು ಕೆಲಸ ಕೊಡುವವರಿಲ್ಲ!

ಇದನ್ನು ಹೇಳಲು ಇರುವ ಕಾರಣವೆಂದರೆ, 'ಸ್ಯಾಂಡಲ್‌ವುಡ್'ನಲ್ಲಿ ಹೊಸ ತಲೆಮಾರಿನ ನಿರ್ದೇಶಕರ ಹೊಸ ಅಲೆ ಬಲವಾಗಿ ಬೀಸುತ್ತಿದೆಯಾದರೂ ಅವಕಾಶಗಳ ಕೊರತೆಯಿಂದ ತೊಯ್ದಾಡುತ್ತಿದೆ ಎನ್ನಬಹುದು. ಇಲ್ಲದಿದ್ದರೆ 'ರಾಮಾ ರಾಮಾ ರೇ...'ದಂತಹ ಅದ್ಭುತ ಸಿನಿಮಾಗಳನ್ನು ಮುಂದೆ ಕನ್ನಡ ಪ್ರೇಕ್ಷಕ ಕಳೆದುಕೊಳ್ಳಬೇಕಾಗುತ್ತದೆ.

ಮಲ್ಟಿಪ್ಲೆಕ್ಸ್‌ಗಳೆಂಬ ಸರ್ವಾಧಿಕಾರಿಗಳು...


ಇನ್ನು ಇಂತಹ ಪ್ರಯೋಗಾತ್ಮಕ ಸಿನಿಮಾಗಳು ಕನ್ನಡದಲ್ಲಿ ಬಂದಾಗಲೆಲ್ಲ ನಿರ್ದೇಶಕ, ನಿರ್ಮಾಪಕರು ಮುಖ್ಯ ಥಿಯೇಟರ್‌ಗಳು ಸಿಕ್ಕದೆ ಮಲ್ಟಿಪ್ಲೆಕ್ಸ್‌ಗಳತ್ತ ಮುಖ ಮಾಡುತ್ತಾರೆ. 'ಮಾಲ್ ಥಿಯೇಟರ್'ಗಳ ದುಬಾರಿ ದರಗಳ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ನಡೆದಿದೆ. ಮನಸೋಇಚ್ಛೆ ಟಿಕೆಟ್ ದರ ಬದಲಾಯಿಸುವ ಇಂತಹ ಥಿಯೇಟರ್‌ಗಳ ಮಾಲೀಕರು ಸರ್ವಾಧಿಕಾರಿಗಳಂತೆ ವರ್ತಿಸುತ್ತಾರೆ. ನಾಲ್ಕಾರು ಶೋಗಳಿದ್ದರೂ ಇಂತಹ ಕನ್ನಡ ಸಿನಿಮಾಗಳನ್ನು ಒಂದೇ ಶೋಗೆ ಸೀಮಿತಗೊಳಿಸಿಬಿಡುತ್ತಾರೆ. ಅಲ್ಲದೆ ಪ್ರೇಕ್ಷಕರಿದ್ದರೂ ಇದ್ದಕ್ಕಿಂತೆಯೇ ಇಂತಹ ಸಿನಿಮಾಗಳನ್ನು ಎತ್ತಂಗಡಿ ಮಾಡಿಸಿಬಿಡುತ್ತಾರೆ.

ಮೈಸೂರಿನಲ್ಲಿ 'ರಾಮಾ ರಾಮಾ ರೇ...' ಸಿನಿಮಾ ನೋಡಲು ಹೋದಾಗಲೂ ಖುದ್ದು ಈ ಅನುಭವ ನನಗಾಯಿತು. ಈ ಹಿಂದೆಯೇ ಅದೇ 'ಮಾಲ್ ಥಿಯೇಟರ್'ಗೆ ನಾನು ಎ. ಚಲ ಎಂಬ ಹೊಸ ನಿರ್ದೇಶಕನ 'ಚಿತ್ರಮಂದಿರದಲ್ಲಿ' ಸಿನಿಮಾ ನೋಡಲು ಹೋದಾಗ ಎರಡೇ ದಿನಕ್ಕೆ ಚಿತ್ರ ಪ್ರದರ್ಶನ ರದ್ದುಪಡಿಸಿದ್ದರು. ನಾನು ಹಾಗೂ ಅಲ್ಲಿದ್ದ ಪ್ರೇಕ್ಷಕರು ಪಟ್ಟುಹಿಡಿದು ಕುಳಿತಾಗ ಥಿಯೇಟರ್ ಮಾಲೀಕರು ಸಿನಿಮಾ ತೋರಿಸಿದರು.

ಇಂತಹವುಗಳನ್ನು ಎಂದೂ ಪ್ರಶ್ನಿಸದೆ 'ಮಾಲ್ ಥಿಯೇಟರ್'ಗಳ ಮೋಹಕ್ಕೆ ಬಿದ್ದವರಂತೆ ಬಿಮ್ಮನೆ ಕುಳಿತು ಸಿನಿಮಾ ನೋಡಿಬರುವ ನಮ್ಮ ಮೇಲ್‌ಮಧ್ಯಮ ವರ್ಗದ ಪ್ರೇಕ್ಷಕರು ಕನ್ನಡ ಸಿನಿಮಾಗಳನ್ನು ಉಳಿಸುತ್ತಾರೆಂಬ ವಿಶ್ವಾಸವಿಡಬಹುದೆ?


■ ಮಂಜುನಾಥ್ ಲತಾ

ಪಾಪಿಗಳ ಜಾತ್ರೆ













ತಂದೆಯೊಬ್ಬ ತನ್ನ ಮಗಳ ಮದುವೆ ಮಾಡುವುದು ತಪ್ಪಲ್ಲ, ಹೇಗೆ ಮಾಡಬೇಕು, ಯಾರಿಗೆ ಕೊಡಬೇಕು, ಎಲ್ಲಿ ಮಾಡಬೇಕು, ಎಷ್ಟೆಲ್ಲ ಮಾಡಬೇಕು, ಯಾರನ್ನೆಲ್ಲ ಕರೆಯಬೇಕು, ಇತ್ಯಾದಿಗಳೆಲ್ಲವೂ ಹೆತ್ತವರಿಗೇ ಸಂಬಂಧಪಟ್ಟ ಅತ್ಯಂತ ಖಾಸಗಿಯಾದ ಸಂಗತಿಗಳೆ.. ಎಂತೆಂಥಾ ರಾಜಕಾರಣಿಗಳು, ಉದ್ದಿಮೆಪತಿಗಳಾದರೂ ಪಕ್ಷಭೇದ, ಅರ್ಥಭೇದ ಮರೆತು ವೈವಾಹಿಕ ಸಂಬಂಧ ಬೆಳೆಸಬಹುದಾದರೂ ಮದುವೆಯನ್ನು ತೀರಾ ಸಾರ್ವಜನಿಕಗೊಳಿಸು ವುದಾಗಲಿ, ರಾಜಕೀಯವಾಗಿಸುವುದಾಗಲಿ ಮಾಡಲು ಹೋಗುವುದಿಲ್ಲ, ಆದರೆ ಗಣಿಕಳ್ಳ ಗಾಲಿ ಜನಾರ್ದನ ರೆಡ್ಡಿ ತನ್ನ ಏಕೈಕ ಪುತ್ರಿ ಬ್ರಹ್ಮಿಣಿಯ ಮದುವೆಯನ್ನು ಬೀದಿಗೆ ತಂದಷ್ಟು ಕರ್ನಾಟಕದ ಬೇರ್ಯಾವ ತಂದೆಯೂ ತರಲು ಸಾಧ್ಯವೇ ಇಲ್ಲ.

ಯಾವ ದೇವೇಗೌಡರ ಕುಟುಂಬ ಗಣಿಕಳ್ಳರಿಂದ 300 ಕೋಟಿ ರೂಪಾಯಿಗಳಷ್ಟು ಲಂಚ ಕಿತ್ತಿದೆಯೆಂದು ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿಯೂ ಸೇರಿದಂತೆ ರೆಡ್ಡಿ ಆರೋಪಿಸಿ ರಾದ್ಧಾಂತವೆಬ್ಬಿಸಿದ್ದನೋ, ಈಗ ಅದೇ ದೇವೇಗೌಡರ ಕಾಲಿಗೆ ಬಿದ್ದು ತನ್ನ ಮಗಳು ಅಳಿಯನನ್ನು ಆಶೀರ್ವದಿಸುವಂತೆ ಲಜ್ಜೆಗೆಟ್ಟು ದುಂಬಾಲು ಬೀಳುತ್ತಿದ್ದಾನೆ. ಕಾಡಿಬೇಡಿ ಕುಮಾರಸ್ವಾಮಿಯ ಬೆನ್ನಿಗೆ ಬಿದ್ದು ಮಗಳ ಮದುವೆಗೆ ಆಹ್ವಾನವಿತ್ತಿದ್ದಾನೆ. ಯಡ್ಡಿ ಮುಖ್ಯಮಂತ್ರಿಯಾಗಿದ್ದಾಗ ವಿಧಾನಮಂಡಲದ ಅಧಿವೇಶನದಲ್ಲೇ ಆಗ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯನವರನ್ನು ಇದೇ ರೆಡ್ಡಿ ಎಳೆದಾಡಿದ್ದನ್ನಲ್ಲವೇ? ರೊಚ್ಚಿಗೆದ್ದು ತೊಡೆತಟ್ಟಿದ್ದ ಸಿದ್ದು ಐತಿಹಾಸಿಕ ಬಳ್ಳಾರಿ ಪಾದಯಾತ್ರೆಯನ್ನೂ ಹಮ್ಮಿಕೊಳ್ಳುವ ಮೂಲಕ ರೆಡ್ಡಿ ಪಾಳೆಯಪಟ್ಟಿನ ವಿರುದ್ಧ ಯುದ್ಧ ಸಾರಿದ್ದೂ ಆಯಿತಲ್ಲವೆ?


ಈಗ ರೆಡ್ಡಿಯೇ ದಮ್ಮಯ್ಯ ಗುಡ್ಡೆ ಹಾಕಿ ಮಗಳನ್ನು ಆಶೀರ್ವದಿಸಿರೆಂದು ಮುಖ್ಯಮಂತ್ರಿ ಜೊತೆ ನಿಂತು ಆಹ್ವಾನ ಪತ್ರಿಕೆಯ ಫೋಟೋ ತೆಗೆಸಿಕೊಳ್ಳುತ್ತಾನೆ. ಯಾರೆಂದು ಗೊತ್ತಿಲ್ಲ, ಯಾವ ಸಂಬಂಧವೂ ಇಲ್ಲ; ಹಾಗಿದ್ದೂ ಪಾರ್ವತಮ್ಮ ರಾಜ್‌ಕುಮಾರ್‌ರನ್ನು ಕಂಡು ಗಣಿ ರೆಡ್ಡಿ ಆಹ್ವಾನ ಪತ್ರಿಕೆ ಕೊಡುತ್ತಾನೆ, ಅದರ ಫೋಟೋ ತೆಗೆಸಿ ಪತ್ರಿಕೆಗಳಿಗೆ ಬಿಡುಗಡೆ ಮಾಡುತ್ತಾನೆ. ಚಿತ್ರರಂಗದ ಸ್ಟಾರ್‌ಗಳು, ಧಾರ್ಮಿಕ ಮುಖಂಡರು, ವಿವಿಧ ಕ್ಷೇತ್ರಗಳ ಗಣ್ಯರು- ಹೀಗೆ ಸಿಕ್ಕಸಿಕ್ಕವರನ್ನೆಲ್ಲ ಕಂಡು ತನ್ನ ಮಗಳ ಮದುವೆಗೆ ಬನ್ನಿರೆಂದು ಕಾಡಿಬೇಡಿ ಆಹ್ವಾನ ಪತ್ರಿಕೆ ನೀಡುವುದನ್ನೇ ಮಹಾನ್ ಅಭಿಯಾನವೆಂಬಂತೆ ಮಾಡಹೊರಟ ಗಾಲಿ ಜನಾರ್ದನ ರೆಡ್ಡಿ ನಭೂತೋ ನಭವಿಷ್ಯತಿ ಎಂಬಂತೆ ತನ್ನ ಮಗಳ ಮದುವೆಯನ್ನೇಕೆ ಈ ರೀತಿ ಬೀದಿರಂಪ ಮಾಡಲು ಹೊರಟಿದ್ದಾನೆ?

ಅದ್ದೂರಿ ಕರೆಯೋಲೆ?

ಇನ್ನು ಮದುವೆಯ ಆಹ್ವಾನ ಪತ್ರಿಕೆಯ ಹುಚ್ಚಾಟ ಹೇಗಿದೆಯೆಂದರೆ ಈ ಥರದ ಪ್ರತಿ ಆಹ್ವಾನ ಪತ್ರಿಕೆಯ ಬೆಲೆಯೇ ಆರೂವರೆ ಸಾವಿರಕ್ಕೂ ಹೆಚ್ಚಿದೆ. ಗಿಫ್ಟ್ ಬಾಕ್ಸ್ ಮಾದರಿಯಲ್ಲಿ ಚಿಕ್ಕದೊಂದು ಪೆಟ್ಟಿಗೆಯಾಕಾರದ ಆಹ್ವಾನ ಪತ್ರಿಕೆ ತೆರೆದದ್ದೇ ತಡ, ಅದು ಲ್ಯಾಪ್‌ಟಾಪ್‌ನಂತೆ ಪರದೆ ತೆರೆದುಕೊಳ್ಳುತ್ತದೆ. ಅದರಲ್ಲಿ ತೆಲುಗು ಸಿನಿಮಾದ ಫ್ಯಾಮಿಲಿ ಸಾಂಗ್ ಒಂದಕ್ಕೆ ಪಾತ್ರಗಳು ಹಾಡಿ ಕುಣಿವ ರೀತಿಯಲ್ಲಿ ಜನಾರ್ದನ ರೆಡ್ಡಿ, ಅವರ ಶ್ರೀಮತಿ, ಮಗ ಮತ್ತು ಮಗಳು ಸೇರಿಕೊಂಡು 'ಬನ್ನಿ, ಬನ್ನಿ ಹರಸಬನ್ನಿ, ಸ್ನೇಹಿತರೇ... ನಮ್ಮಾತ್ಮೀಯರೇ.....!' ಎಂದು ಕುಣಿದು ಕುಪ್ಪಳಿಸುತ್ತಿದ್ದಾರೆ. ಭಾವೀ ಅಳಿಯ ರಾಜೀವ್ ರೆಡ್ಡಿಯೂ ತೆಲುಗು ಸಿನಿಮಾದ ವಿಲನ್‌ನಂತೆ ಭಯಂಕರ ಎಂಟ್ರಿ ಕೊಡುತ್ತಿದ್ದಾನೆ. ಆಹ್ವಾನ ಪತ್ರಿಕೆಗೇ ಆರೂವರೆ ಸಾವಿರವೆಂದರೆ ಇನ್ನು ಹಾಡಿನ ಚಿತ್ರೀಕರಣ, ಮೇಕಪ್, ಕಾಸ್ಟ್ಯೂಮ್ಸ್, ಸಂಗೀತ, ಗ್ರಾಫಿಕ್ಸ್ ಎಲ್ಲಾ ಸೇರಿ ಕಮ್ಮಿಯೆಂದರೂ ಒಂದು ಕೋಟಿ ವೆಚ್ಚವಾಗಿರಲೇಬೇಕು.

ತಮಾಷೆಯೆಂದರೆ ಸದರಿ ಹಾಡಿಗೆ ಹೆಜ್ಜೆ ಹಾಕುತ್ತಿರುವ ಗಣಿ ರೆಡ್ಡಿ ಈಗ ಹೊಸ ಗೆಟಪ್ಪಿನಲ್ಲಿದ್ದಾನೆ. ಹಿಂದಿದ್ದ ಬೋಳುತಲೆಗೆ ಬದಲಾಗಿ ಹೇರ್ ಟ್ರಾನ್ಸ್‌ಪ್ಲಾಂಟ್ ಮಾಡಿಸಿಕೊಂಡು ಪಕ್ಕಾ ತೆಲುಗು ಸಿನಿಮಾದ ಖಳನಾಯಕನ ವರಸೆಯಲ್ಲೇ ರೆಡ್ಡಿ ಪೋಜು ಕೊಡುತ್ತಿದ್ದಾನೆ. ಇದು ಕೇವಲ ಕರೆಯೋಲೆಯ ಕತೆಯಾದರೆ ಇನ್ನು ಮದುವೆಯ ಅಬ್ಬರ, ಅಟ್ಟಹಾಸ, ಇನ್ನೆಂಥದ್ದಿರಬೇಡ?

ನವೆಂಬರ್ 16 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಬ್ರಹ್ಮಿಣಿ-ರಾಜೀವ್ ರೆಡ್ಡಿ ಮದುವೆಗೆಂದೇ ಐವತ್ತು ಕೋಟಿ ರೂಪಾಯಿಗಳ ಬಜೆಟ್ಟಂತೆ. ಹಿಂದಿ ನಟ ಶಾರುಖ್ ಖಾನ್, ಕತ್ರೀನಾ ಕೈಫ್, ಅನುಷ್ಕಾ



ಶರ್ಮ, ರಣಬೀರ್ ಕಪೂರ್ ಮುಂತಾದ ನಟರಿಗೆಂದೇ ಪ್ರತಿಷ್ಠಿತ ವಿಂಡ್ಸರ್ ಮ್ಯಾನರ್ ಹೋಟೆಲಿನಲ್ಲಿ ಭರ್ಜರಿ ಹತ್ತು ಸೂಟುಗಳನ್ನು ಕಾಯ್ದಿರಿಸಲಾಗಿದೆಯಂತೆ. ದೇಶದ ಬೇರೆಬೇರೆ ಭಾಗಗಳಿಂದ ಬರುವ ಅತಿಥಿಗಳು, ವಿದೇಶಗಳಿಂದ ಆಗಮಿಸುವ ಎನ್ನಾರೈಗಳಿಗೆಂದೇ ಬೆಂಗಳೂರಿನ ಐಷಾರಾಮಿ ಹೋಟೆಲುಗಳಾದ ಅಶೋಕಾ, ವೆಸ್ಟೆಂಡ್, ಯಲಹಂಕದ ಕ್ಯಾಲಿಫೋರ್ನಿಯಾ ರೆಸಾರ್ಟ್, ಎಂ.ಜಿ. ರಸ್ತೆಯ ಛಾನ್ಸರಿ, ಒಬೇರಾಯ್, ಯುಬಿಸಿಟಿಯ ಜೆಡಬ್ಲ್ಯೂ ಮ್ಯಾರಿಯಟ್ ಮುಂತಾದ ಪಂಚತಾರಾ ಹೋಟೆಲುಗಳ ಎಲ್ಲಾ ರೂಮುಗಳನ್ನೂ ಕಾಯ್ದಿರಿಸಲಾಗಿದೆಯಂತೆ!

ಅಳಿಯ ರಾಜೀವ್ ರೆಡ್ಡಿ!

ಕನ್ನಡ ಚಿತ್ರರಂಗದ ಸ್ಟಾರ್‌ಗಳಾದ ಪುನೀತ್, ಉಪೇಂದ್ರ, ಸುದೀಪ್, ದರ್ಶನ್ ಮುಂತಾದವರೆಲ್ಲರಿಗೂ ಮದುವೆಗೆ ಬರಲೆಂದೇ ತಲಾ ಐವತ್ತು ಲಕ್ಷದಂತೆ ಭಕ್ಷೀಸು ಕೊಟ್ಟಿದ್ದಾನಂತೆ ಗಣಿ ರೆಡ್ಡಿ. ಇದಲ್ಲದೆ ತೆಲುಗು ಚಿತ್ರರಂಗದ ಹೀರೋಗಳಾದ ಪ್ರಭಾಸ್, ಮಹೇಶ್ ಬಾಬು, ಜೂನಿಯರ್ ಎನ್‌ಟಿಆರ್, ನಿರ್ದೇಶಕ ರಾಜಮೌಳಿ, ದಾಸರಿ ನಾರಾಯಣರಾವ್ ಮುಂತಾದವರಿಗೆಂದೇ ತಲಾ ವಜ್ರದ ನೆಕ್ಲೆಸ್ ಒಂದನ್ನು ರೆಡ್ಡಿ ಕಾಣಿಕೆಯಾಗಿ ಕೊಟ್ಟಿದ್ದಾನಂತೆ. ಹೀಗೆ ತೆಲುಗು ಸಿನಿಮಾ ರಂಗದ ಸ್ಟಾರ್‌ಗಳನ್ನೆಲ್ಲ ಬೆಂಗಳೂರಿನ ಪ್ಯಾಲೇಸ್ ಗ್ರೌಂಡಿಗೆ ಕರೆತರುವ ಹೊಣೆ ಹೊತ್ತಿರುವುದು ಆಂಧ್ರದ ಪ್ರಭಾವಿ ರಾಜಕೀಯ ನಾಯಕ ಮತ್ತು ಮಾಜಿ ಮುಖ್ಯಮಂತ್ರಿ ವೈ.ಎಸ್. ರಾ... ರೆಡ್ಡಿಯ ಮಗ ಜಗನ್ ಮೋಹನ್ ರೆಡ್ಡಿ.

ಏಕೆಂದರೆ ಗಣಿ ರೆಡ್ಡಿ ತನ್ನ ಮಗಳು ಬ್ರಹ್ಮಿ... ಕೊಟ್ಟು ಮದುವೆ ಮಾಡುತ್ತಿರುವ ಯುವ... ರಾಜೀವ್ ರೆಡ್ಡಿ ಬೇರೆ ಯಾರೂ ಅಲ್ಲ ಅವಿಭಜಿತ... ಮಾಜಿ ಮುಖ್ಯಮಂತ್ರಿಯಾಗಿದ್ದ ವೈಎಸ್‌ಆರ್... ಖಾಸಾ ತಮ್ಮನ ಮಗನಂತೆ. ಮೂಲತಃ ಗುಂಟೂರಿನ ಹಾಲಿ ತೆಲಂಗಾಣದ ಹೈದ್ರಾಬಾದಿ... ರಾಜೀವ್ ರೆಡ್ಡಿಯೇನೂ ಸಾಮಾನ್ಯನಲ್ಲ. ಒಂದಾನೊಂದು ಕಾಲದ ಗಣಿ ದೈತ್ಯನೇ. ವೈ... ಬದುಕಿದ್ದಾಗ ಜಗನ್ ಪಾಲುದಾರಿಕೆಯಲ್ಲಿ ಅನ... ಮಲಪನಗುಡ್ಡಿ ಅರಣ್ಯದ ಗಣಿ ಲೂಟಿಯಲ್ಲಿ... ಮತ್ತೊಬ್ಬ ಪಾಲುದಾರನಂತಿದ್ದುದೇ ರಾಜೀವ್... ತಂದೆ ಕೃಷ್ಣಾ ರೆಡ್ಡಿ!

ವೈಎಸ್‌ಆರ್ ಮುಖ್ಯಮಂತ್ರಿಯಾಗಿದ್ದಷ್ಟು... ಆಂಧ್ರದ ಗಣಿ ಪರ್ಮಿಟ್ಟಿನ ಹೆಸರಲ್ಲಿ ಕರ್ನಾಟ... ನಕಾಶೆಯನ್ನೇ ಬದಲಾಯಿಸಿ ಬಳ್ಳಾರಿ ವಿಭಾಗ... ದೋಚಿದ್ದ ಗಣಿ ಕೊಳ್ಳೆಯ ಪಾಲಲ್ಲೇ ರಾಜೀವ್... ಸಾಮ್ರಾಜ್ಯ ವಿಸ್ತರಿಸಿತು. ಇಂಗ್ಲೆಂಡಿನಲ್ಲಿ ರಾಜೀ... ಹೆಸರಲ್ಲೇ ಕನ್‌ಸ್ಟ್ರಕ್ಷನ್ ಕಂಪೆನಿ ತಲೆ ಎತ್ತಿತ್ತು... ನಾಲ್ಕೂ ದಿಕ್ಕಿನಲ್ಲಿ ರಾಜೀವ್ ರೆಡ್ಡಿಯ ಹೆಸರಲ್ಲಿ... ಮಾಲುಗಳೆದ್ದವು. ಕಟ್ಟಡ ನಿರ್ಮಾಣ, ರಿಯಲ್... ಗಣಿಗಾರಿಕೆಯಲ್ಲಿ ಸಹಸ್ರಾರು ಕೋಟಿ ರೂಪಾ... ಬಂಡವಾಳ ಹೂಡಿದ ಗಾಲಿ ರೆಡ್ಡಿ ಮತ್ತು... ರೆಡ್ಡಿಯ ಕುಟುಂಬಸ್ಥರು ಇದ್ಯಾವುದನ್ನೂ ಭಾರತ... ಗಮನಕ್ಕೆ ಬಾರದಂತೆ ನೋಡಿಕೊಂಡರು. ದೋಚಿದ... ಕೈಬಿಟ್ಟು ಹೋಗಬಾರದಲ್ಲ, ಅದಕ್ಕೀಗ... ಕುಟುಂಬಗಳು ವೈವಾಹಿಕ ಬಂಧನಕ್ಕೊಳಪಡುವ... ಮತ್ತಷ್ಟು ಬಲಾಢ್ಯರಾಗುತ್ತಿದ್ದಾರೆ.

ಪ್ಯಾಚಪ್


ಎತ್ತಿಂದೆತ್ತ ಲೆಕ್ಕ ಹಾಕಿದರೂ ಮದುವೆ ಹೈದ... ನಲ್ಲೋ, ಗುಂಟೂರಿನಲ್ಲೋ, ತೆಲಂಗಾಣದ ರಾಯ... ದಲ್ಲೋ ನಡೆಯಬೇಕಿತ್ತಲ್ಲವೆ? ಹೆಚ್ಚೆಂದರೆ ಬ... ಲ್ಲಾದರೂ ನಡೆಯಬೇಕಿತ್ತು. ಎಲ್ಲಾ ಬಿಟ್ಟು ಬೆಂಗ... ನಡೆಯುತ್ತಿರುವುದೇಕೆ?

ಅದು ಗಣಿ ರೆಡ್ಡಿಯ ತಲೆ. ಮುಂದಿನ... ಚುನಾವಣೆ ಹೊತ್ತಿಗೆ ಹಾಲಿ ಮುಖ್ಯಮಂತ್ರಿ ಚಂ... ನಾಯ್ಡು ವರ್ಚಸ್ಸು ಕುಂದಿರುತ್ತದೆ... ಪರ್‍ಯಾಯ... ಆಂಧ್ರದ ಮುಖ್ಯಮಂತ್ರಿಯಾಗುವುದಕ್ಕೂ... ಕರ್ನಾಟಕದಲ್ಲೇ ಬಿಜೆಪಿ ಅಧಿಕಾರ ಹಿಡಿ... ಸಹಜವಾಗೇ ಯಡ್ಡಿ ಮುಖ್ಯಮಂತ್ರಿ ಗಾದಿಯ... ಕರ್ನಾಟಕದಲ್ಲಿ ಬಿಜೆಪಿ ಮತ್ತು ಆಂಧ್ರದಲ್ಲಿ ವೈ... ಕಾಂಗ್ರೆಸ್, ಸಾಲದ್ದಕ್ಕೆ ಕೇಂದ್ರದಲ್ಲೂ ಬಿಜೆಪಿ. ರೊ... ತುಪ್ಪಕ್ಕೆ ಬೀಳಲು ಇದಕ್ಕಿಂತ ಬೇಕೆ? ಅತ್ತ... ಮತ್ತೆ ಗಣಿಲೂಟಿ ಇತ್ತ ಬಳ್ಳಾರಿಯಲ್ಲೂ ಹಾದ... ಅದಿರು ಡಕಾಯಿತಿ!

ಇಂಥಾದ್ದೊಂದು ಅನುಕೂಲ ಮತ್ತೆ ರೂ... ಬೇಕಲ್ಲ; ಅದಕ್ಕೆ ಮತ್ತೆ ತಾನು ಬಳ್ಳಾರಿಯಿಂದಲೇ... ಗೆದ್ದು ಯಡ್ಡಿ ಸಂಪುಟದಲ್ಲಿ ಮತ್ತೆ ಮಂತ್ರಿಯಾಗ...

ನಟ ಭಯಾನಕ ಸಾಯಿಕುಮಾರ್‌ನ ಹುಚ್ಚಾಟಗಳು

ಇಲ್ಲದ ಕತೆ ಕಟ್ಟಿ ಗಣಿರೆಡ್ಡಿಯನ್ನು ಪಾರ್ವತಮ್ಮ ರಾಜ್‌ಕುಮಾರ್ ಬಳಿ ಕರೆದೊಯ್ದು, ಮದುವೆಯ ಆಮಂತ್ರಣ ಕೊಡಿಸಿ, ಅದರದೊಂದು ಫೋಟೋ ಕೂಡ ತೆಗೆಸಿ ಅದು ಪತ್ರಿಕೆಗಳಲ್ಲೂ ಪ್ರಕಟವಾಗುವಂತೆ ನೋಡಿಕೊಂಡ ಆ ಪುಣ್ಯಾತ್ಮನಾದರೂ ಯಾರು ಗೊತ್ತೇ?




ನಟ ಭಯಾನಕ ಸಾಯಿಕುಮಾರ್. ಪಕ್ಕಾ ಆಂಧ್ರಾ ಬ್ರಾಂಡ್, ಪುಟ್ಟಾ ಚೌಕಾಸಿ ಗಿರಾಕಿ ಸಾಯಿಕುಮಾರ್‌ಗೀಗ ಅಸಾಧ್ಯ ನಿರುದ್ಯೋಗ. ಹೀರೋ ಪಾತ್ರಗಳಿರಲಿ ಸಣ್ಣಪುಟ್ಟ ಪಾತ್ರಗಳಿಗೂ ಕೇಳೋರು ಗತಿಯಿಲ್ಲ, ಬಿಜೆಪಿಗೆ ಸೇರ್ಪಡೆಗೊಂಡು ಬಾಗೇಪಲ್ಲಿಯಿಂದ ಕಣಕ್ಕಿಳಿದರೂ ಜನ ಮೂಸಲಿಲ್ಲ, ಹೇಗೂ ಆಂಧ್ರದ ಲಿಂಕಿತ್ತಲ್ಲ, ಅಂಟಿಕೊಂಡಿದ್ದು ಬಳ್ಳಾರಿ ಗಣಿ ಖದೀಮರಿಗೆ. ಬಿಜೆಪಿ ಆಳ್ವಿಕೆಯಲ್ಲಿ ಗಣಿಗ್ಯಾಂಗ್ ಅಟ್ಟಹಾಸಕ್ಕೆ ಪೂರಕವೆಂಬಂತೆ ನಡೆದದ್ದು ಶ್ರೀ ಕೃಷ್ಣದೇವರಾಯ ಪಟ್ಟಾಭಿಷೇಕ ಮಹೋತ್ಸವ. ಅಂದರೆ ಶ್ರೀ ಕೃಷ್ಣದೇವರಾಯ ಪಟ್ಟಾಭಿಷೇಕ ಮಾಡಿಕೊಂಡ ಐನೂರನೇ ವರ್ಷದ ನಿಮಿತ್ತ ಹಂಪಿ ಉತ್ಸವವನ್ನೇ ಪಟ್ಟಾಭಿಷೇಕೋತ್ಸವವಾಗಿ ಪರಿವರ್ತಿಸಿದ ರೆಡ್ಡಿ ಗ್ಯಾಂಗ್ ಅದರ ಮೇಜುವಾನಿಕೆ ವಹಿಸಿದ್ದು ನಟಾಗ್ರೇಸರ ಸಾಯಿಕುಮಾರ್‌ಗೆ.

2010ರ ಜನವರಿ 26ರಂದು ಹಂಪಿಯಲ್ಲಿ ಅದ್ಯಾವ ಪರಿ ಅದ್ದೂರಿಯೆಂದರೆ ಮನರಂಜನಾ ಕಾರ್ಯಕ್ರಮದ ವೇದಿಕೆಗೆಂದೇ ಐದು ಕೋಟಿ ಸುರಿಯಲಾಯ್ತು, ಆಗಿನ ಎಲ್ಲಾ ಗಣಿ ಖದೀಮರಿಂದಲೂ ದುಡ್ಡೆತ್ತಿದ್ದ ರೆಡ್ಡಿ ಗ್ಯಾಂಗ್ ಕಾರ್ಯಕ್ರಮದ ವೀಡಿಯೋ ಮಾಡಲೆಂದೇ 1 ಕೋಟಿ ಉಡಾಯಿಸಿತ್ತು. ಸರ್ಕಾರ ಮೂರೋ ಮೂರೂವರೆ ಕೋಟಿಯನ್ನೋ ಕೊಟ್ಟಿದ್ದರೆ ಹತ್ತು ಕೋಟಿಗೂ ಅಧಿಕ ಮೊತ್ತ ಹಾಕಿದ್ದು ಗಣಿರೆಡ್ಡಿ. ಸಿನಿಮಾ ನಟರನ್ನು ಕರೆತರುವುದು, ಅವರಿಂದ ಡ್ಯಾನ್ಸ್ ಮಾಡಿಸುವುದು, ಮನರಂಜನೆ, ಸಂಗೀತ, ಲೈಟಿಂಗ್ಸ್ ಎಂದೆಲ್ಲ ಸಾಯಿಕುಮಾರ್ ಬಿಲ್ಲು ಹರಿದದ್ದೇ ಹರಿದದ್ದು.

ಹಂಪಿ ಉತ್ಸವವೊಂದರಲ್ಲೇ ಸರಿಸುಮಾರು ಐದು ಕೋಟಿ ರೂ ಅಧಿಕ ಮೊತ್ತ ಲಪಟಾಯಿಸಿದ ನಟ ಸಾಯಿಕುಮಾರ್ ಈಗ ಋಣ ತೀರಿಸಬೇಕಲ್ಲ, ಗಣಿರೆಡ್ಡಿಯನ್ನು ರಾಜ್‌ಕುಮಾರ್ ಕುಟುಂಬದ ಪ್ರತಿಯೊಬ್ಬರ ಮನೆಗೂ ಕರೆದೊಯ್ದಿದ್ದಾನೆ. ಉಪೇಂದ್ರ, ರವಿಚಂದ್ರನ್, ಸುದೀಪ್, ಶಿವಣ್ಣ ಹೀಗೆ ಸಿಕ್ಕಸಿಕ್ಕ ನಟರೆಲ್ಲರ ಮನೆಗೂ ಎಡತಾಕಿಸಿದ್ದಾನೆ. ಆಮಂತ್ರಣದಲ್ಲಿ ಬರುವ ಹಾಡನ್ನೂ ಈತನೇ ಯೋಚಿಸಿದ್ದಂತೆ. ಈತನ ತಲೆಗಾರಿಕೆಯ ಮೇರೆಗೆ ಗಾಲಿರೆಡ್ಡಿ ಕುಟುಂಬ ಹಾಡುತ್ತಾ ಕುಣಿಯುತ್ತಾ ಅದರ ವೀಡಿಯೋ ಮಾಡಿ ಮದುವೆಗೆ ಕರೆಯುವ ಹುಚ್ಚಾಟಕ್ಕಿಳಿದದ್ದಂತೆ. ಹಡಬಿಟ್ಟಿ ದುಡ್ಡು ಹಡಬಿಟ್ಟಿ ಚೇಲಾಗಳು ಮತ್ತವರ ಪಾಲಿನ ಖದೀಮ ಧಣಿಗಳೂ ಸೇರಿಬಿಟ್ಟರೆ ಏನೆಲ್ಲಾ ಮಂಗಾಟಗಳಾಗುತ್ತವೆ ಎಂಬುದಕ್ಕೆ ಇದಕ್ಕಿಂತ ಬೇಕೆ?

ಮಧುಗಿರಿ ಶಾಸಕ ರಾಜಣ್ಣನಿಗೆ ಜೆಡಿಎಸ್ ಗಾಳ?



ತುಮಕೂರು ಜಿಲ್ಲೆಯ ಪ್ರಭಾವಿ ರಾಜಕಾರಣಿ, ರಾಜ್ಯ ...ಕ್ಸ್ ಬ್ಯಾಂಕ್‌ನ ಅಧ್ಯಕ್ಷ, ಜಿಲ್ಲಾ ಡಿಸಿಸಿ ಬ್ಯಾಂಕ್ ಅಧ್ಯಕ್ಷ ...ಹಾಲಿ ಮಧುಗಿರಿ ಶಾಸಕ ರಾಜಣ್ಣನವರನ್ನು ಕಾಂಗ್ರೆಸ್ ...ದ ಲಿಫ್ಟ್ ಮಾಡಿ ತನ್ನ ತೆಕ್ಕೆಗೆ ಮತ್ತೆ ಸೇರಿಸಿಕೊಳ್ಳಲು ...ಎಸ್ ಕಸರತ್ತು ನಡೆಸುತ್ತಿದೆ ಎನ್ನುವ ವರ್ತಮಾನಗಳು ...ಲ್ಲೂಕಿನಲ್ಲಿ ಭಾರೀ ಸಂಚಲನ ಉಂಟುಮಾಡಿದೆ. ರಾಜಣ್ಣ ...ಕ್ಕೆ ಕಾಂಗ್ರೆಸ್ ಪಾರ್ಟಿಯಲ್ಲಿದ್ದರೂ ಜಿಲ್ಲಾ ಉಸ್ತುವಾರಿ ...ಂತ್ರಿ ಟಿ.ಬಿ.ಜಯಚಂದ್ರ ಜೊತೆ ಅವರಿಗಿರುವ ತಿಕ್ಕಾಟ ...ರೀತಕ್ಕೆ ಬಂದು ನಿಂತಿದೆ. ಸಾರ್ವಜನಿಕ ಸಮಾರಂಭ ...ಲ್ಲೇ ಈ ಇಬ್ಬರು ವಾಗ್ವಾದ ನಡೆಸುವಷ್ಟರಮಟ್ಟಿಗೆ, ...ಲ್ಲಾ ಉಸ್ತುವಾರಿ ಮಂತ್ರಿಗಿರಿಯನ್ನು ಜಯಚಂದ್ರರಿಂದ ...ತ್ತಿಕೊಂಡು ಪರಮೇಶ್ವರ್‌ಗೆ ಕೊಡಿ ಅಂತು ಸಿಎಂರನ್ನು ...ಜಣ್ಣ ಒತ್ತಾಯಿಸುವಷ್ಟರಮಟ್ಟಿಗೆ ಅವರ ಭಂಗೀಕುಸ್ತಿ ...ಜನೆಯ ಘಟ್ಟಕ್ಕೆ ಬಂದು ತಲುಪಿವೆ. ಇದನ್ನು ಎನ್‌ಕ್ಯಾಶ್ ...ಡಿಕೊಂಡು ರಾಜಣ್ಣರನ್ನು ಮತ್ತೆ ಜೆಡಿಎಸ್‌ಗೆ ಕರೆತರಲು ...ದ್ದು ರಾಜ್ಯಾಧ್ಯಕ್ಷ ಕುಮಾರಸ್ವಾಮಿಯವರೇ ಮುತುವರ್ಜಿ ...ಸಿದ್ದಾರೆ ಎನ್ನಲಾಗುತ್ತಿದೆ.

...ಸತತ ಎರಡು ಅವಧಿಯಿಂದ ಯಾವುದೇ ...ಧಿಕಾರವಿಲ್ಲದೆ ಹತಾಶ ಸ್ಥಿತಿಗೆ ತಲುಪಿರುವ ಜೆಡಿಎಸ್‌ಗೆ ...ಂಬರುವ 2018ರ ವಿಧಾನಸಭೆ ಚುನಾವಣೆಯೇ ...ಕಾರಣ. ಕಾವೇರಿ ವಿವಾದದಲ್ಲಿ ದೇವೇಗೌಡರ ಹಾಲೊಳ್ಳುವಿಕೆ ಪಕ್ಷಕ್ಕೆ ಸ್ವಲ್ಪಮಟ್ಟಿಗೆ ಜನಮನ್ನಣೆ ಗಳಿಸಿಕೊಟ್ಟಿರುವುದು ಜೆಡಿಎಸ್ ಅಂಗಳದಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಹಾಗಾಗಿ ಶತಾಯಗತಾಯ ಅಧಿಕಾರ ಹಿಡಿಯಲೇಬೇಕೆಂದು ತೀರ್ಮಾನಿಸಿರುವ ಪಕ್ಷದ ಮುಖಂಡರು ಬೇರೆ ಪಕ್ಷಗಳ ಅತೃಪ್ತ ಶಾಸಕರನ್ನು ತಮ್ಮ ಪಕ್ಷದತ್ತ ಸೆಳೆಯುವ ದೊಡ್ಡ ಪಟ್ಟಿಯನ್ನೇ ಸಿದ್ಧ ಮಾಡಿಟ್ಟುಕೊಂಡಿದ್ದಾರೆ. ಅಷ್ಟಕ್ಕೂ ಇಂತಹ ಪಟ್ಟಿ ಬಿಜೆಪಿ, ಕಾಂಗ್ರೆಸ್ ಪಾರ್ಟಿಯವರ ಬಳಿಯೂ ಇದೆ ಎನ್ನುವುದು ರಹಸ್ಯವೇನಲ್ಲ.


ತುಮಕೂರಿನಲ್ಲಿ ಹಿಡಿತ ಸಾಧಿಸುವ ನಿಟ್ಟಿನಲ್ಲಿ ರಾಜಣ್ಣನವರ ಪ್ರಾಮುಖ್ಯತೆಯನ್ನು ಮನಗಂಡಿರುವ ಕುಮಾರಸ್ವಾಮಿ ರಾಜಣ್ಣರನ್ನು ಜೆಡಿಎಸ್‌ಗೆ ಕರೆತರುವ ಹೊಣೆಯನ್ನು ಕೊರಟಗೆರೆ ಶಾಸಕ ಸುಧಾಕರ್ ಲಾಲ್ ಮತ್ತು ಗುಬ್ಬಿ ಶಾಸಕ ಶ್ರೀನಿವಾಸ್‌ಗೆ ವಹಿಸಿದ್ದಾರೆ ಎನ್ನಲಾಗಿದೆ. ಸುಧಾಕರ್‌ಗೆ ರಾಜಣ್ಣನೇ ರಾಜಕೀಯ ಗುರುವಾದರೆ, ಶ್ರೀನಿವಾಸ್ ಮತ್ತು ರಾಜಣ್ಣನ ನಡುವೆ ಆತ್ಮೀಯ ಒಡನಾಟವಿದೆ. ಇದನ್ನೇ ಬಂಡವಾಳವಾಗಿಸಿಕೊಳ್ಳಲು ಜೆಡಿಎಸ್ ಯೋಜನೆ ರೂಪಿಸಿದಂತಿದೆ. ಅಂದಹಾಗೆ, ರಾಜಣ್ಣ ಈ ಮೊದಲು ಇದೇ ಜೆಡಿಎಸ್‌ನಲ್ಲಿ ಇದ್ದಂತವರು. ಯಾವಾಗ ಕುಮಾರಸ್ವಾಮಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡು ಸಮ್ಮಿಶ್ರ ಸರ್ಕಾರ ರಚಿಸಿದರೋ ಆಗ ಸೈದ್ಧಾಂತಿಕ ನಿಲುವಿಗೆ ತಲೆಕೊಟ್ಟು ದಿವಂಗತ ಎಂ.ಪಿ.ಪ್ರಕಾಶ್‌ರ ನೇತೃತ್ವದಲ್ಲಿ ಕಾಂಗ್ರೆಸ್‌ಗೆ ವಲಸೆ ಹೋಗಿದ್ದರು.

ಇತ್ತೀಚೆಗೆ ಮಂಡ್ಯದಲ್ಲಿ ನಡೆದ 'ಜಾಗ್ವಾರ್' ಸಿನಿಮಾದ ಆಡಿಯೋ ರಿಲೀಸ್‌ನ ನಂತರ ನಡೆದ ಸಭೆಯಲ್ಲಿ ತುಮಕೂರು ಶಾಸಕರ ತಂಡ ಕುಮಾರಸ್ವಾಮಿಯವರನ್ನು ಭೇಟಿ ಮಾಡಿ ಜಿಲ್ಲೆಯಲ್ಲಿ ಪಕ್ಷಕ್ಕೆ ಬಲ ಬರಬೇಕೆಂದರೆ ರಾಜಣ್ಣನವರನ್ನು ಪಕ್ಷಕ್ಕೆ ಕರೆತರಬೇಕು ಎಂಬ ಸಲಹೆಯ ಜೊತೆಗೆ ಕಾಂಗ್ರೆಸ್‌ನಲ್ಲಿ ಜಯಚಂದ್ರ-ರಾಜಣ್ಣ ನಡುವೆ ನಡೆಯುತ್ತಿರುವ ಶೀತಲ ಸಮರದ ಸುಳಿವನ್ನೂ ನೀಡಿ ಬಂದಿದ್ದರು. ಅದಾದನಂತರ ಕುಮಾರಸ್ವಾಮಿ ಈ ವಿಚಾರವಾಗಿ ಉತ್ಸುಕರಾಗಿದ್ದಾರೆ ಎನ್ನಲಾಗಿದೆ. ಪಕ್ಷದ ಜಿಲ್ಲಾಧ್ಯಕ್ಷ ಸ್ಥಾನ ಅಥವಾ ಪಕ್ಷ ಅಧಿಕಾರಕ್ಕೆ ಬಂದರೆ ಒಳ್ಳೆಯ ಸಚಿವ ಸ್ಥಾನ ನೀಡುವ ಭರವಸೆಗಳ ಮೂಲಕ ರಾಜಣ್ಣರನ್ನು ಸೆಳೆಯುವ ಪ್ರಯತ್ನಗಳು ಶುರುವಾಗಿವೆ.


ಇತ್ತ ಪಕ್ಷದ ಮುಖಂಡರು ರಾಜಣ್ಣನನ್ನು ಜೆಡಿಎಸ್‌ಗೆ ಕರೆತರಲು ಉತ್ಸುಕರಾಗಿದ್ದರೆ ಅತ್ತ ಮಧುಗಿರಿಯ ಸ್ಥಳೀಯ ಜೆಡಿಎಸ್ ಮುಖಂಡರು ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಈ ಹಿಂದೆ ರಾಜಣ್ಣನಿಗೆ ದಲಿತ ವಿರೋಧಿ ಪಟ್ಟಕಟ್ಟಲು ಯತ್ನಿಸಿದ್ದ ಕೆಲವರು ಆತ ತಮ್ಮ ಪಕ್ಷಕ್ಕೆ ಬಂದರೆ ತಮ್ಮನ್ನು ಮೂಲೆಗುಂಪು ಮಾಡಿಬಿಡಬಹುದೆನ್ನುವ ಆತಂಕದಲ್ಲಿ ಇಂತಹ ವಿರೋಧ ವ್ಯಕ್ತ ಪಡಿಸುತ್ತಿದ್ದಾರೆ. ಆದರೆ ರಾಜ್ಯಾಧಿಕಾರದ ಹೊಂಗನಸಿನಲ್ಲಿರುವ ಕುಮಾರಸ್ವಾಮಿ ಈ ತಕರಾರುಗಳಿಗೆ ಕಿಮ್ಮತ್ತಿನ ಬೆಲೆ ನೀಡದೆ ರಾಜಣ್ಣನಿಗೆ ಗಾಳ ಹಾಕುವ ಆಪರೇಷನ್‌ಗೆ ಅದಾಗಲೇ ಚಾಲನೆ ನೀಡಿದ್ದಾರೆ ಎನ್ನುವ ಸುದ್ದಿಗಳು ಮಧುಗಿರಿಯ ತುಂಬಾ ಹರಿದಾಡುತ್ತಿವೆ.

ಇತ್ತ ಬಿಜೆಪಿಯೂ ರಾಜಣ್ಣನಿಗೆ ಗಾಳ ಹಾಕುವ ಸಾಧ್ಯತೆ ದಟ್ಟವಾಗಿ ಕಾಣುತ್ತಿದೆ. ಜಿಲ್ಲೆಯಲ್ಲಿ ಪಕ್ಷಕ್ಕೆ ನೆಲೆ ದಕ್ಕಿಸಿಕೊಡಲು ಮುಖಂಡರು ಹುಕುಂ ಹೊರಡಿಸಿರುವುದರಿಂದ ತುಮಕೂರು ಗ್ರಾಮಾಂತರ ಶಾಸಕ ಬಿ.ಸುರೇಶ್ ಗೌಡ ರಾಜಣ್ಣನ ಜೊತೆ ಮಾತುಕತೆ ನಡೆಸುತ್ತಿದ್ದಾರೆ ಎನ್ನಲಾಗಿದೆ. ಇತ್ತೀಚೆಗಷ್ಟೆ ಕಂಭತ್ತನಹಳ್ಳಿಯಲ್ಲಿ ನಡೆದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಉದ್ಘಾಟನಾ ಸಮಯದಲ್ಲಿ "ನಾನು 2013ರ ವಿಧಾನಸಭಾ ಚುನಾವಣೆಯಲ್ಲಿ ಸೋಲುವ ಹಂತಕ್ಕೆ ತಲುಪಿದ್ದಾಗ ಕೆ.ಎನ್.ರಾಜಣ್ಣರನ್ನು ಭೇಟಿಯಾಗಿ ಅವರ ಜೊತೆ ಮ್ಯಾಚ್‌ಫಿಕ್ಸಿಂಗ್ ಮಾಡಿಕೊಂಡ ನಂತರ ಅವರಿಂದಲೇ ಗೆದ್ದೆ. ಕೆಎನ್ಆರ್‌ರವರಿಗೆ ಕಾಂಗ್ರೆಸ್ ಪಕ್ಷದಿಂದ ಮೋಸವಾಗಿದೆ. ಅವರಿಗೆ ಸಚಿವ ಸ್ಥಾನವನ್ನು ನೀಡದೇ ವಂಚಿಸಿದ್ದಾರೆ. ಕಾಂಗ್ರೆಸ್ ಪಕ್ಷ ಕೇವಲ ಬಕೆಟ್ ಹಿಡಿಯುವವರಿಗೆ ಮಾತ್ರ ಸೀಮಿತವಾಗಿದೆ" ಅಂತೆಲ್ಲ ಬಹಿರಂಗವಾಗಿ ಒದರಾಡಿದ ಸುರೇಶ್ ಗೌಡ ತಮ್ಮ ಪಾರ್ಟಿಯ ಹಿಡನ್ ಅಜೆಂಡಾದ ಗುಟ್ಟು ಬಿಟ್ಟುಕೊಟ್ಟಿದ್ದಾರೆ.


ಇದೆಲ್ಲದರ ನಡುವೆ ರಾಜಣ್ಣ ಯಾವ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎನ್ನುವ ಗುಟ್ಟನ್ನು ಬಿಟ್ಟುಕೊಡುತ್ತಿಲ್ಲ. ಕಾಂಗ್ರೆಸ್ ಪಕ್ಷದ ಬಗ್ಗೆ ಅಸಮಾಧಾನ, ಸ್ವಪಕ್ಷೀಯರಿಂದಲೇ ಕಾಲೆಳೆಸಿಕೊಂಡ ನೋವು, ಜೊತೆಗೆ ಮಂತ್ರಿಗಿರಿ ತಪ್ಪಿದ ಸಿಟ್ಟು ಎಲ್ಲವೂ ಅವರಲ್ಲಿದೆ. ಆದರೆ ದುಡುಕಿನ ನಿರ್ಧಾರ ತೆಗೆದುಕೊಳ್ಳುವಷ್ಟು ಎಳಸು ರಾಜಕಾರಣಿ ಅವರಲ್ಲ. ಸದ್ಯಕ್ಕಂತೂ ಕಾದುನೋಡುವ ತಂತ್ರ ಅನುಸರಿಸುತ್ತಿದ್ದಾರೆ. ಮುಂದೇನಾಗುತ್ತೋ ಕಾಲವೇ ಉತ್ತರಿಸಲಿದೆ. ■




ಸುಧಾಕರ್ ಲಾಲ್



ಸುರೇಶ್ ಗೌಡ



ಕುಮಾರಸ್ವಾಮಿ







...ಷ್ಮ ಶ್ರೀರಾಮುಲು ಮತ್ತು ಅಣ್ಣ ಸೋಮಶೇಖರ ರೆಡ್ಡಿ ...ಂತ್ರಿಗಳಾದರೂ ಸಾಕು ಬಳ್ಳಾರಿ ರಿಪಬ್ಲಿಕ್ ಮತ್ತೆ ಚಾಲ್ತಿಗೆ ...ಬದಂತೆಯೇ......!

ಅದಕ್ಕೆ ತನ್ನ ಈಗಿನ ಇಮೇಜ್ ಬದಲಾಯಿಸಿ ...ಂಡರಷ್ಟೇ ಉಳಿಗಾಲವೆಂಬ ರೆಡ್ಡಿ ತಲೆಗಾರಿಕೆಯೇ ಮಗಳ ...ದುವೆಯನ್ನು ನೆಪವಾಗಿಸಿಕೊಂಡಿದೆ. ತಲೆಗೆ ಟೋಪನ್, ...ಪೂರ ದೇಹ. ಹೊಸ ಗೆಟಪ್ಪು, ಕನ್ನಡದಲ್ಲಿ ಹಾಡು ...ತ್ತು ನಾಡಿನ ಗಣ್ಯರೆಲ್ಲರಿಗೂ ಆಮಂತ್ರಣ. ಮುಂದೆ ...ಡ್ಡಿ ಸಂಪುಟದಲ್ಲಿ ತಾನೇನಾದರೂ ಮಂತ್ರಿಯಾಗಲು ...ರೋಧ ಎದುರಾಯಿತೆಂದರೆ ಅದಕ್ಕೆ ಪ್ಯಾಚಪ್ಪು ...ಾಡಲೆಂದೇ ದೇವೇಗೌಡ, ಕುಮಾರಣ್ಣ, ಸಿಎಂ ...ದ್ದರಾಮಯ್ಯ ಮತ್ತು ಕನ್ನಡ ಪರ ಸಂಘಟನೆಗಳ ಬಾಯಿ ...ುಚ್ಚಿಸಲು ಪಾರ್ವತಮ್ಮ ರಾಜ್‌ಕುಮಾರ್‌ಗೆ ಕರೆಯೋಲೆ. ...ತ್ತು ಸದನದಲ್ಲೇ ಗಣಿ ರೆಡ್ಡಿಯ ವಿರುದ್ಧ ತೊಡೆತಟ್ಟಿದ ...ಸ್ಸಿ ಬಳ್ಳಾರಿ ಪಾದಯಾತ್ರೆ ಮಾಡಿಯೂ ಈಗ ರೆಡ್ಡಿಯನ್ನು ...ಬಿಟ್ಟುಕೊಂಡಿದ್ದಾರೆಂದರೆ ಅದು ಕೇವಲ ಮಾನವೀಯ ...ಾರ್ಯವಷ್ಟೇ. ತನ್ನ ಮಗಳನ್ನು ಆಶೀರ್ವದಿಸಿ ಎಂದು ...ದೆಯೊಬ್ಬ ಮನೆತನಕ ಬಂದನೆಂದರೆ ಆತನನ್ನು ...ಬೇಕುವಷ್ಟು ಅನಾಗರಿಕರಂತೂ ಕನ್ನಡಿಗರಲ್ಲ.

ಸಿಕ್ಕಿದ್ದು ಬರೀ 300 ಕೋಟಿ

...ಮೋದಿ ಪ್ರಧಾನಿಯಾಗುತ್ತಿದ್ದಂತೆ ಸಿಬಿಐ ನ್ಯಾಯಾಲಯ ...ಲ್ಲಿದ್ದ ಕರ್ನಾಟಕದ ಗಣಿ ಸಂಪತ್ತಿನ ಭಾರೀ ಪ್ರಮಾಣದ ...ಟಿಯ ಒಂದೊಂದೇ ಕೇಸುಗಳೆಲ್ಲವನ್ನೂ ಹಳ್ಳ ಹಿಡಿಸಲಾಯಿತು. ಮುಖ್ಯಮಂತ್ರಿಯಾಗಿದ್ದಷ್ಟೂ ಕಾಲ ಯಡ್ಡಿಯನ್ನು ಇನ್ನಿಲ್ಲದಂತೆ ಪೀಡಿಸಿದ ಬಳ್ಳಾರಿ ಗ್ಯಾಂಗ್ ಯಡ್ಡಿ ಮತ್ತೆ ರಾಜ್ಯ ಬಿಜೆಪಿ ಅಧ್ಯಕ್ಷರಾಗುತ್ತಿದ್ದಂತೆ ಸಾರಾಸಗಟಾಗಿ ಶರಣಾಯಿತು. ಇತ್ತ ಯಡ್ಡಿಯನ್ನು ಸರಿಮಾಡಿಕೊಳ್ಳುತ್ತಿದ್ದಂತೆ ಅತ್ತ ಶ್ರೀರಾಮುಲುವನ್ನು ಛೂಬಿಟ್ಟು ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್‌ಗೂ ರೆಡ್ಡಿ ಗಾಳ ಬೀಸಿದ್ದ. ಇದರ ಫಲವೇ ಸಿಬಿಐ ತನ್ನ ಒಂದೊಂದೇ ಕುಣಿಕೆಗಳನ್ನು ಸಡಿಲಿಸಿತು. ಹೈದ್ರಾಬಾದ್ ಜೈಲಿನಲ್ಲಿ ಈ ಹೊತ್ತಿಗಾಗಲೇ ಎರಡು ವರ್ಷ ಕಂಬಿ ಎಣಿಸಿದ್ದ ರೆಡ್ಡಿ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಲ್ಲೂ ಒಂದೂಕಾಲು ವರ್ಷ ಮುದ್ದೆ ಮುರಿದಿದ್ದ.

ಹೈದ್ರಾಬಾದ್ ಸಿಬಿಐ ಕೋರ್ಟಿನಲ್ಲಿದ್ದದ್ದು ಬರೋಬ್ಬರಿ 887 ಕೋಟಿ ರೂಪಾಯಿಗಳ ಮೊತ್ತದ ಗಣಿ ಲೂಟಿಯ ಕೇಸು. ಕೇವಲ 887 ಕೋಟಿಯ ಲೂಟಿ ಏನಿದ್ದರೂ ಒಂದು ಸರ್ವೆ ನಂಬರಿಗೆ ಸಂಬಂಧಪಟ್ಟದ್ದಾಗಿತ್ತು. ಉಳಿಕೆ ಸರ್ವೆ ನಂಬರುಗಳ ಲೆಕ್ಕ ಹಾಕಿದ್ದರೆ ಅದು ಐದು ಸಾವಿರ ಕೋಟಿಗೂ ಮೀರುತ್ತಿತ್ತು. ಇದರ ತನಿಖೆಯಲ್ಲಿದ್ದ ಸಿಬಿಐನ ಜಂಟಿ ನಿರ್ದೇಶಕ ಲಕ್ಷ್ಮಿನಾರಾಯಣನನ್ನು ರಾತ್ರೋರಾತ್ರಿ ಎತ್ತಂಗಡಿ ಮಾಡಿ ಆ ಜಾಗಕ್ಕೆ ತಮಿಳನೊಬ್ಬನನ್ನು ನೇಮಿಸಲಾಯ್ತು. ಇದ್ದಕ್ಕಿದ್ದಂತೆ ಸರ್ಕಾರಿ ವಕೀಲರೂ ಮೆತ್ತಗಾದರು.

ಇದು ಹೈದ್ರಾಬಾದ್ ಸಿಬಿಐಗಷ್ಟೇ ಸೀಮಿತವಾಗಲಿಲ್ಲ. ಕರ್ನಾಟಕದ ಸಿಬಿಐ ಒಂದೇ ಐದು ಪ್ರಮುಖ ಗಣಿ ಲೂಟಿ ಪ್ರಕರಣಗಳ ವಿಚಾರಣೆ ನಡೆಸಿ ರೆಡ್ಡಿಯ ಕುಣಿಕೆ ಬಿಗಿಯಾಗಿಸಿತ್ತು. ಕರ್ನಾಟಕ ಲೋಕಾಯುಕ್ತ ದಾಖಲಿಸಿದ್ದು ಒಟ್ಟು 25 ಎಫ್‌ಐಆರ್‌ಗಳನ್ನು. ರೆಡ್ಡಿಯ ಚಿನ್ನದ ಸಿಂಹಾಸನ, ಬ್ಯಾಂಕ್ ಖಾತೆಗಳು, ಆಸ್ತಿಪಾಸ್ತಿ ಎಲ್ಲವನ್ನೂ ಸಿಬಿಐ ಜಪ್ತಿ ಮಾಡಿತ್ತಾದರೂ, ಜಪ್ತಿಯಾದ ಸ್ಥಿರಚರ ಎಲ್ಲವೂ ಮುನ್ನೂರು ಕೋಟಿಯನ್ನೂ ಮೀರಿರಲಿಲ್ಲ. ಹಾಗೆ ನೋಡಿದರೆ ಬಳ್ಳಾರಿ ಗಣಿ ರೆಡ್ಡಿ ಪಡೆ ದೋಚಿದ್ದು ಐವತ್ತು ಸಾವಿರ ಕೋಟಿಗೂ ಅಧಿಕ ಮೊತ್ತದ ಅದಿರು.

ಮುನ್ನೂರು ಕೋಟಿಯೆಲ್ಲಿ ಐವತ್ತು ಸಾವಿರ ಕೋಟಿಯೆಲ್ಲಿ? ಸಿಬಿಐ ತನಿಖೆ ಮುಂದುವರಿಸಿದ್ದೇ ಆಗಿದ್ದಲ್ಲಿ ಲೂಟಿಯಾದ ಕರ್ನಾಟಕದ ಗಣಿ ಸಂಪತ್ತಿನ ಪೈಸೆಪೈಸೆಯೂ ಜಪ್ತಿಯಾಗಬೇಕಿತ್ತು. ಈಗ ನೋಡಿದರೆ ತನಿಖೆಯೂ ಇಲ್ಲ ಲೂಟಿಯಾದ ಸಂಪತ್ತಿನ ಜಪ್ತಿಯೂ ಇಲ್ಲ. ಸಾಲದ್ದಕ್ಕೆ ಜಾಮೀನು ಬೇರೆ. ಕನ್ನಡಿಗರ ನೆತ್ತಿ ಮೇಲೆ ಮೊಟಕಿದಂತೆ, ದೇಶದ ಸಂವಿಧಾನ ಮತ್ತು ಪ್ರಜಾತಂತ್ರಕ್ಕೇ ಸೆಡ್ಡು ಹೊಡೆದಂತೆ ರೆಡ್ಡಿ ತನ್ನ ಮಗಳ ಮದುವೆ ಮಾಡಿಸುತ್ತಿದ್ದಾನೆ. ಮಗಳ ಮದುವೆಗೇ ನೂರು ಕೋಟಿ ಸುರಿಯುತ್ತಾನೆಂದರೆ ಇನ್ನು ಬಚ್ಚಿಟ್ಟ ಮೊತ್ತ ಇನ್ನೆಷ್ಟಿರಬೇಡ?

ಅದು ಕರ್ನಾಟಕದ ಭೂಸಂಪತ್ತಿನ ಲೂಟಿಯ ಮೊತ್ತವಲ್ಲವೆ? ಎಲ್ಲವನ್ನೂ ಸರ್ಕಾರ ಜಪ್ತಿ ಮಾಡಿಕೊಂಡ ಮೇಲೂ ಈ ಪಾಟಿ ಸುರಿದು ಮಗಳ ಮದುವೆ ಮಾಡುತ್ತಿದ್ದಾನೆಂದರೆ ಕರ್ನಾಟಕ ಸರ್ಕಾರ, ಕನ್ನಡ ಜನತೆ, ಇಲ್ಲಿನ ಪೊಲೀಸು, ಕೋರ್ಟ್ ಕಾನೂನೆಲ್ಲವೂ ತನ್ನ ಕಾಲಕಸವೆಂದು ರೆಡ್ಡಿಯೇ ಹೀಯಾಳಿಸಿದಂತಲ್ಲವೆ? ದೇವೇಗೌಡ, ಸಿದ್ದರಾಮಯ್ಯ, ಕುಮಾರಸ್ವಾಮಿಯೆಲ್ಲ ನಡೆದ ಲೂಟಿಯ ಆಳಅಗಲವನ್ನೇ ಮರೆತುಬಿಟ್ಟರೆ?




■ ರಾ. ಸೋಮನಾಥ್

ಈಗಲೂ ಕಾಲ ಮಿಂಚಿಲ್ಲ; ಕೊಲೆಗಡುಕ ಧರ್ಮಕಾರಣ ಮಾಡುತ್ತಿರುವ ತನ್ನ ಶಿಷ್ಯ ಗಣದ ಹೃದಯ-ಮಿದುಳು ಶುದ್ಧೀಕರಣಕ್ಕಾಗಿ ಪೇಜಾವರರು ಉಪವಾಸ ಕೂರಬೇಕಾದ ಅನಿವಾರ್ಯತೆಯಿದೆ. ಪೇಜಾವರರು ತನ್ನ ಕಾಲಿಗೆ ಅಡ್ಡ ಬೀಳುವ ಬಿಜೆಪಿಯ-ಆರ್‌ಎಸ್‌ಎಸ್‌ನ ತೂಕದ ಮುಂದಾಳುಗಳ ಮತ್ತು ಚಕ್ರವರ್ತಿ, ಪ್ರಮೋದ್ ಮುತಾಲಿಕ್, ಕಲ್ಲಡ್ಕ ಭಟ್ಟನಂಥ ಅಬ್ರಾಹ್ಮಣ ವಿರೋಧಿಗಳ ಮನಸ್ಸಿನ ಮಾಲಿನ್ಯ ತೊಳೆವ ಉಪವಾಸ ಮಾಡಿದಾಗಷ್ಟೇ ಆತನ ಹಿಂದೂತ್ವಕ್ಕೆ ಮಾನವೀಯತೆಯ ಜೀವಕಳೆ ಬರಬಲ್ಲದು; ಇಲ್ಲದಿದ್ದರೆ ಪೇಜಾವರರದು ಪ್ರೇತ ಕಳೆಯ ಹಿಂದೂತ್ವ ಎಂಬುದು ನಿಸ್ಸಂಶಯ!!


ಚಲೋ ಉಡುಪಿ ಚಮತ್ಕಾರ:

ನೀಲಿಕಡಲಿನ ಭೋರ್ಗರೆತಕ್ಕೆ ಬೆಚ್ಚಿಬಿದ್ದಿದ

ಪೇಜಾವರ ಪುಂಡ ಪಡೆ!!




ಸೂಲಿಬೆಲೆ ಚಕ್ರವರ್ತಿ


ಕಲ್ಲಡ್ಕ ಪ್ರಭಾಕರ್ ಭಟ್ಟ


ದಲಿತ-ದಮನಿತರ ಒಂದೇ ಒಂದು ಸ್ವಾಭಿಮಾನಿ ಸಮಾವೇಶಕ್ಕೆ ಇಡೀ ಸಂಘಪರಿವಾರವೇ ತತ್ತರಿಸಿಹೋಗಿದೆ! ಆಹಾರ ನಮ್ಮ ಆಯ್ಕೆ; ಭೂಮಿ ನಮ್ಮ ಹಕ್ಕು ಎನ್ನುತ್ತ ದಲಿತ-ದಮನಿತರು ನೀಲಿ ಕಡಲಾಗಿ ಉಡುಪಿಯಲ್ಲಿ ಭೋರ್ಗರೆದ ಸದ್ದಿಗೆ ಕೇಸರಿ ಪಡೆಯ 'ದಂಡ' ನಾಯಕ ಸಾಕ್ಷಾತ್ ಪೇಜಾವರ ಸ್ವಾಮೀಜಿಯೇ ಬೆಚ್ಚಿಬಿದ್ದು ತಿಣುಕಾಡುವಂತಾಗಿದೆ. ಹಿಂದೂತ್ವದ ಶತಶತಮಾನದ ದೌರ್ಜನ್ಯ-ಶೋಷಣೆಯಿಂದ ಸುಸ್ತಾದವರೆಲ್ಲ ಒಂದಾಗಿ ಕರ್ನಾಟಕದ ಉದ್ದಗಲಕ್ಕೆ ಜಾಥಾ ನಡೆಸಿ ಅಂತಿಮವಾಗಿ ಢೋಂಗಿ ಹಿಂದೂ ಸುಧಾರಕ ವಿಶ್ವೇಶತೀರ್ಥ ಸ್ವಾಮಿಯ ವಿಶ್ವ ಹಿಂದೂ ಪರಿಷತ್‌ನ ಹೆಡ್ಡಾಫೀಸಿನಂತಿರುವ ಕೃಷ್ಣ ಮಠದ ಅಂಗಳದ ಆಸುಪಾಸಿನಲ್ಲಿ ಅಕ್ಟೋಬರ್ 9ರಂದು ಜಮೆಯಾಗುತ್ತಾರೆಂಬುದು ಪಕ್ಕಾ ಆದಾಗಲೇ ಜನಿವಾರ ಪಾಳೆಯದಲ್ಲಿ ಅಲ್ಲೋಲಕಲ್ಲೋಲವೇ ಶುರುವಾಗಿತ್ತು!

ನೀಲಿ ಜತೆ ಕೆಂಪು ಬಣ್ಣವೂ ಸೇರುತ್ತದೆ. ಇದರೊಂದಿಗೆ ಮುಸ್ಲಿಮರೂ ಹೆಜ್ಜೆ ಹಾಕುತ್ತಾರೆಂಬ ಆತಂಕಕ್ಕೆ ಬಿದ್ದಿದ್ದ ಪುರೋಹಿತಶಾಹಿ ಪಟಾಲಮ್‌ಗೆ ಈ ಒಗ್ಗೂಡುವಿಕೆ ತಮ್ಮ ಕೇಡುಗಾಲದ ಮುನ್ಸೂಚನೆಯಂತೆ ಬೆದರಿಸಲಾರಂಭಿಸಿತ್ತು. ಹೀಗಾಗಿ ಹೇಗಾದರೂ ಮಾಡಿ ಚಲೋ ಉಡುಪಿಯ ಮೂಲ ಆಶಯವನ್ನೇ ಬುಡಮೇಲು ಮಾಡಲು ರಹಸ್ಯ ಷಡ್ಯಂತ್ರಗಳನ್ನು ಆರಂಭದಲ್ಲೇ ಹೆಣೆಯಲಾರಂಭಿಸಿತ್ತು ಹಿಂದೂತ್ವದ ತಂಡ. ಹಿಂದುಳಿದವರು ತಿರುಗಿಬಿದ್ದರೆ ತಮ್ಮ ಹುಸಿ ಹಿಂದೂತ್ವದ ಕಾರ್ಯಾಚರಣೆಯಾದ ಮುಸ್ಲಿಮ್-ಕ್ರಿಶ್ಚಿಯನ್ ವಿರೋಧಿ ಕಾಳಗಕ್ಕೆ ಕಾಲಾಳುಗಳೇ ಸಿಗಲಾರರೆಂದು ಚಲೋ ಉಡುಪಿಗೆ ಭಂಗ ತರುವ ಹಿಕಮತ್ತು ವ್ಯವಸ್ಥಿತವಾಗಿ ನಡೆದಿತ್ತು. ಈ ಕುತಂತ್ರಕ್ಕೆ ಸಾಮಾಜಿಕ ಜಾಲತಾಣವನ್ನು ಬಳಸಿಕೊಂಡಿದ್ದ ಹಿಂದೂ ಹರಾಮಿಗಳು ಇದೊಂದು ದಲಿತರಿಂದಾಗುವ ಮೈಲಿಗೆ ಕಾರ್ಯಕ್ರಮ, ಗೋಮಾಂಸ ತಿನ್ನುವ ಪಾರ್ಟಿ ಎಂಬಂತೆ ಫೇಸ್‌ಬುಕ್, ವಾಟ್ಸ್‌ಆಪ್‌ಗಳಲ್ಲಿ ಹಸಿಹಸೀ ಸುಳ್ಳನ್ನು ಹರಿಬಿಡಲಾಗಿತ್ತು.

ಅಬ್ರಾಹ್ಮಣರನ್ನೇ ಒಡೆದು ಹಿತ ಸಾಧಿಸುವ ಹಿಕಮತ್ತು ದಲಿತ ವಿರೋಧಿ ಬ್ರಾಹ್ಮಣಿಕೆ ಗ್ಯಾಂಗು ಮಾಡಿದರೂ ಅದು ಫ್ಲಾಪ್ ಆಗಿ ಹೋಯ್ತು. ನರೇಂದ್ರ ಮೋದಿಯ ನಾಮಬಲವನ್ನೇ ಬಳಸಿಕೊಂಡು ಬ್ರಿಗೇಡ್ ಬಿಸ್ನೆಸ್ ಮಾಡಿ ಕಾಸು ಮಾಡಿಕೊಂಡ ಮಿಥುನ್ ಚಕ್ರವರ್ತಿ ಯಾನೆ 'ಚಕ್ರವರ್ತಿ' ಸೂಲಿಬೆಲೆಗೆ ಎಂಬ ಬಾಡಿಗೆ ಮಾತುಗಾರ ಹೊಟ್ಟೆ ಹೊರೆಯುವ ಸ್ಕೆಚ್ ಹಾಕಿಕೊಂಡಿದ್ದ. ಕನಕದಾಸ-ಗಾಂಧೀಜಿಯನ್ನು ಮುಂದಿಟ್ಟುಕೊಂಡು ದಲಿತರ ನಡೆಯಿಂದ ಕೊಳಕಾಗುವ-ಮಲಿನವಾಗುವ ಉಡುಪಿಯ ರಸ್ತೆ-ಬೀದಿಗಳನ್ನು ಸ್ವಚ್ಛ ಮಾಡುತ್ತೇನೆ ಎಂದ. ತನ್ನ ನಮೋ ಬ್ರಿಗೇಡ್ ಮಾಡಲಿರುವ ಈ ಹಿಂದೂ 'ಉದ್ಧಾರ'ದ ಕೈಂಕರ್ಯಕ್ಕಾತ ಕೊಟ್ಟ ಹೆಸರು- ಕನಕ ನಡೆ! ವಿಪರ್ಯಾಸವೆಂದರೆ, ಕೊಲೆಗಡುಕ ನರೇಶ್ ಶೆಣೈನಂಥವರ ಅತ್ಯಾಪ್ತ ಮಿತ್ರನಾದ ಈ ಚಕ್ರವರ್ತಿ ಗಾಂಧಿಯನ್ನೇ ಕೊಂದು ಹಾಕಿ ಸಂಭ್ರಮಿಸಿದ ಗೋಡ್ಸೆ ಸಂತತಿಯವನು; ಕನಕನನ್ನು ಕೃಷ್ಣ ಗುಡಿಯಿಂದ ಹೊರಗಿಟ್ಟು ಮಡಿ ಮಸಲತ್ತು ಮಾಡುತ್ತಿರುವ ಬ್ರಾಹ್ಮಣಿಕೆಯ ಪುಖರ ಪುಂಗಿ ಪುಂಗವ!!

ನಮೋ ಬ್ರಿಗೇಡ್ ಯಾನೆ ಯುವ ಬ್ರಿಗೇಡ್‌ನದು ಚಲೋ ಉಡುಪಿ ಹೊರಟಿರುವ ದಲಿತ-ದಮನಿತರ ವಿರುದ್ಧವೇ ತನ್ನ ಕನಕ ನಡೆ ಅಭಿಯಾನ ಎಂದು ಜಾಲತಾಣಗಳಲ್ಲಿ ನೇರಾನೇರ ಅಟ್ರಾಸಿಟಿ ಅಪರಾಧ ನಡೆಸಿದ್ದ ಚಕ್ರವರ್ತಿ. ಯಾವಾಗ ಚಲೋ ಉಡುಪಿ ಅದ್ಭುತ ಯಶಸ್ಸು ಕಂಡಿತೋ ಆಗ ಹತಾಶೆಯಿಂದ ಮೈ-ಕೈ ಪರಚಿಕೊಳ್ಳತೊಡಗಿದ್ದ. ಇಷ್ಟಕ್ಕೆ ಈ ಮನುಶಾಸ್ತ್ರಪೀಡಿತ ಪೀಡೆ ಸುಮ್ಮನಾಗಲಿಲ್ಲ. ಚಲೋ ಉಡುಪಿ ಯಶಸ್ಸಿನ ಪ್ರಯೋಜನ ಅಬ್ರಾಹ್ಮಣ ಸಮುದಾಯಕ್ಕೆ ಸಿಗದಂತೆ ಮಾಡುವ ಪಾತಕಕ್ಕೆ ಬಿದ್ದುಬಿಟ್ಟ. ಹಿಂದುಳಿದವರಲ್ಲೇ ಕ್ಷೋಭೆ ಹುಟ್ಟುಹಾಕಲು, ದಲಿತ-ದಮನಿತರು ಒಂದಾಗುವಂತೆ ಮಾಡಿ ಅವರನ್ನು ಹಿಂದೂತ್ವದ ಯುದ್ಧಕ್ಕೆ ಗುರಾಣಿಯಾಗಿ ನಿಲ್ಲಿಸಿಕೊಳ್ಳುವ ಫಿಟ್ಟಿಂಗ್ ಶುರುವಿಟ್ಟುಕೊಂಡ. ಚಕ್ರವರ್ತಿಯ ಈ ಹಿಂದೂ ಧರ್ಮ ರಕ್ಷಣೆಯ ಹಿಂದೆ ಅವಿತು ನಿಂತು ಮಾರ್ಗದರ್ಶನ ಮಾಡುತ್ತಿದ್ದದ್ದು ಶ್ರೀಶ್ರೀಶ್ರೀ ಪೇಜಾವರ ಸ್ವಾಮೀಜಿ ಆಗಿತ್ತು!!

ಜ್ಞಾನ ಶ್ರೇಷ್ಠ ಕನಕದಾಸರನ್ನು ಕಿಂಡಿಯಲ್ಲಿ ಬಂಧಿಸಿಟ್ಟು ತಮ್ಮ ದುಡ್ಡು ಮಾಡುವ ದಂಧೆಗೆ ಬಂಡವಾಳವಾಗಿರುವ ಕೃಷ್ಣನನ್ನು ಭವ್ಯ ದೇವಸ್ಥಾನದಲ್ಲಿಟ್ಟಿರುವ ಮಾಧ್ವ ಬ್ರಾಹ್ಮಣಶಾಹಿ ಪರಂಪರೆಯ ಅಷ್ಟ ಮಠದ ಅನಿಷ್ಟ ಸ್ವಾಮಿಗಳು ಚಕ್ರವರ್ತಿ ಕನಕನ ಹೆಸರು ದುರುಪಯೋಗಿಸಿಕೊಂಡಾಗ ಅದನ್ನು ತಡೆಯಲಿಲ್ಲ. ಬದಲಿಗೆ ಈ ಅಷ್ಟ ವೈಭೋಗದ ಸನ್ಯಾಸಿಗಳ ನೇತಾರ ಪೇಜಾವರ ಸ್ವಾಮಿ ಚಕ್ರವರ್ತಿಗೆ ಕುಮ್ಮಕ್ಕು ಕೊಡುತ್ತ ಸಾಗಿದರು. ಯಾವಾಗ ಕುರುಬ ಸಮುದಾಯ ಸ್ವಾಮಿಗಳು ಮತ್ತು ಪ್ರಗತಿಪರರು-ವಿಚಾರವಾದಿಗಳು ಕನಕನ ಹೆಸರಲ್ಲಿ ಹುಚ್ಚಾಟ ಆಡಿದರೆ ಹುಷಾರ್ ಎಂದು ಎಚ್ಚರಿಕೆ ಕೊಟ್ಟರೋ ಆಗ ಚಕ್ರವರ್ತಿಯ ಫೋಟೋ ಬದಲಾಗಿ ಹೋಯ್ತು. ತನ್ನ ಬ್ರಿಗೇಡಿನದು ಕನಕನಡೆಯಲ್ಲ; ಉಡುಪಿ ಸ್ವಚ್ಛ ಮಾಡೋ ಪೊರಕೆ ಪರಾಕ್ರಮ ಎಂದು ಉಲ್ಟಾ ಹೊಡೆದುಬಿಟ್ಟ.


ಉಡುಪಿ ಸ್ವಚ್ಛ ಮಾಡಲು ಸೇರಿರುವ 'ಜನಸ್ತೋಮ'

ಜನರು ಈತನ ಬಫೂನ್‌ಗಿರಿಗೆ ಬಿದ್ದುಬಿದ್ದು ನಕ್ಕರೂ ಸಂತ ಶ್ರೇಷ್ಠ ಪೇಜಾವರರಿಗೆ ಮಾತ್ರ ಏನೂ ವ್ಯತ್ಯಾಸವೇ ಅನ್ನಿಸಲಿಲ್ಲ. ಪಕ್ತಿಭೇದದಂಥ ಪಾಪಕೃತ್ಯದಿಂದ ಡೀಮೊರಲೈಸ್ ಆಗಿರುವ ಪೇಜಾವರರಿಗೆ ಚಕ್ರವರ್ತಿಯಂಥ ಢೋಂಗು ಭೂಪನ ಬಡಿವಾರ ಅನಿವಾರ್ಯವಾಗಿತ್ತು, ಪಾಪ! ಆತ ಉಡುಪಿಯ ಬೀದಿಗಳಲ್ಲಿ ದಲಿತರು ನಡೆದಾಡಿ ಅಶುದ್ಧ ಮಾಡಿದ್ದಾರೆ; ಅದನ್ನು ತನ್ನ ಬ್ರಿಗೇಡ್‌ನಿಂದ ಸ್ವಚ್ಛ ಮಾಡಿಸುತ್ತೇನೆಂದು ಹೇಳುತ್ತಿರುವುದು ದಲಿತರಿಗೆ ಮಾಡುವ ಅವಮಾನ-ಗೇಲಿ, ಕಾನೂನುಬಾಹಿರ ಅಪರಾಧ, ಅಕ್ಷಮ್ಯ ಅಸ್ಪೃಶ್ಯತಾಚರಣೆ ಎಂಬ ಸತ್ಯ ಸಾಕ್ಷಾತ್ಕಾರ ಪೇಜಾವರಿಗೆ ಆಗಲೇ ಇಲ್ಲ. ದಲಿತರನ್ನು-ಅಬ್ರಾಹ್ಮಣ ದಮನಿತರನ್ನೆಲ್ಲ ಮೂದಲಿಸಿ ಬ್ರಾಹ್ಮಣ ಶ್ರೇಷ್ಠತೆ ಕಾಪಾಡುವ ಜಿದ್ದಿಗೆ ಪೇಜಾವರರು ಬಿದ್ದಿದ್ದರಿಂದಲೇ ಅಧಿಕಪ್ರಸಂಗಿ ಚಕ್ರವರ್ತಿಗೆ ಅಂಕುಶ ಇಡುವ ಗೋಜಿಗೆ ಹೋಗಲೇ ಇಲ್ಲ.

ಈ ಸೂಲಿಬೆಲೆಗೆ ಹಿಂದೂತ್ವದ ಮನೆಮುರುಕುತನವೇ ಹೊಟ್ಟೆಪಾಡಿನ ಕಸುಬು. ಕಳೆದ ಲೋಕಸಭೆ ಎಲೆಕ್ಷನ್ ಹೊತ್ತಲ್ಲಿ ಮೋದಿ ಬ್ರಿಗೇಡ್ ಕಟ್ಟಿ ಮೋದಿ ಚಿತ್ರದ ಟಿಶರ್ಟ್-ಟೋಪಿ ಉದ್ಯಮ ನಡೆಸಿದ್ದ ಈ ವೈಶ್ಯವಾಣಿ ಸಮುದಾಯದ ಧರ್ಮವ್ಯಾಪಾರಿ ಕೋಟಿ-ಕೋಟಿ ಕಮಾಯಿಸಿದ್ದಾನೆ. ಉತ್ತರ ಕನ್ನಡದ ಹೊನ್ನಾವರ ತನ್ನಜ್ಜಿಯ ಊರು ಎನ್ನುವ ಈತನಿಗೆ ಊರೂರಿಗೆ ಬೆಂಕಿಹಾಕುವ ಜಗದೀಶ ಕಾರಂತ, ಕಲ್ಲಡ್ಕ ಭಟ್ಟ, ಅನಂತಕುಮಾರ್ ಹೆಗಡೆಯಂತೆ ಸಂಘಿ ಸರದಾರನಾಗಿ ಕಾಯಂ ವರಮಾನದ ಹುದ್ದೆಗೇರುವ ಹಪಾಹಪಿ. ಉಡುಪಿ-ಚಿಕ್ಕಮಗಳೂರು ಕ್ಷೇತ್ರದ ಸಂಸದೆ ಶೋಭಾ ಕರಂದ್ಲಾಜೆ, ಪಕ್ಕದ ಉತ್ತರ ಕನ್ನಡದ ಸಂಸದ ಅನಂತಕುಮಾರ್ ಹೆಗಡೆ ಶಾಸಕರಾಗಿ ಮಂತ್ರಿಯಾಗುವ ಇರಾದೆಯಲ್ಲಿರುವುದರಿಂದ ಚಕ್ರವರ್ತಿಯ ಕಣ್ಣು ಈ ಎರಡು ಲೋಕಸಭಾ ಕ್ಷೇತ್ರದ ಮೇಲೆ ಬಿದ್ದಿದೆ. ಕಳೆದ ಬಾರಿಯೇ ನರೇಶ್ ಶೆಣೈನಂಥ ಅಪ್ಪಟ ಕೊಲೆಗಡುಕರಿಂದ ಉತ್ತರ ಕನ್ನಡದ ಬಿಜೆಪಿ ಟಿಕ[...] ಲಾಬಿ ಮಾಡಿದ್ದ ಚಕ್ರವರ್ತಿಗೆ ಅನಂತ ಹೆಗಡೆ [...] ಕನ್ನಡದಲ್ಲಿ ಕಾಲಿಡಲು ಬಿಟ್ಟಿರಲಿಲ್ಲ. ಈಗಲೂ [...] ಆತ ಈ ಹಳಿ ಇಲ್ಲದೆ ಹಿಂದೂತ್ವದ ರೈಲು ಓಡಿ[...] ಚಕ್ರವರ್ತಿಗೆ ಅವಕಾಶ ಕೊಡಲು ಅನಂತ ಹೆಗಡೆ ರೆಡಿ[...] ಈತನ ಹಿಂದೂತ್ವದ ಹರಾಮಿ ಮಾತಿನ ಓಘದಲ್ಲಿ [...] ಕಾಣೆಯಾಗುವ ಭಯ ಅನಂತ ಹೆಗಡೆಗೆ.

ಹಾಗಾಗಿ ಚಕ್ರವರ್ತಿಗೆ ಉಡುಪಿ-ಚಿಕ್ಕಮಗಳ[...] ಕ್ಷೇತ್ರವೇ ಪ್ರಶಸ್ತವಾಗಿ ಕಂಡಿದೆ. ವಿಷ ಭಟ್ಟನ ಚೇಲ[...] ಕೇಸರಿ ಅಂಕಣಗಳನ್ನು ಬರೆಯುತ್ತಿದ್ದ ಖಾಲಿ ಬುರು[...] ಪ್ರತಾಪನೇ ಸಂಸದನಾಗಿರುವಾಗ ದಿನದ ಇಪ್ಪತ್ತ[...] ಗಂಟೆಯೂ ಸಂಘದ ಸಾಹಸ ಮಾಡುವ ತಾನೇಕೆ ಉ[...] ಎಂಪಿ ಆಗಬಾರದೆಂಬ ಪ್ರಶ್ನೆ ಚಕ್ರವರ್ತಿಯದು. ವಿನಾ[...] ಬಾಳಿಗಾ ಎಂಬ ಚೆಡ್ಡಿ ಮಾಹಿತಿ ಹಕ್ಕು ಕಾರ್ಯಕರ್ತ[...] ಬರ್ಬರವಾಗಿ ಕತ್ತರಿಸಿ ಹಾಕಿದ ಪಕ್ಕಾ ಕ್ರಿಮಿನಲ್ ನ[...] ಶೆಣೈ ಜತೆ ಕರಾವಳಿಯಲ್ಲಿ ನಿಗೂಢ ಉ[...] ಪಾಲುದಾರಿಕೆಯಲ್ಲಿ ಮಾಡುತ್ತಿರುವ ಚಕ್ರವರ್ತಿಗೆ ಪೇ[...] ಸ್ವಾಮಿಯಂಥ ಸಂಘಿ ಸಂತರ ಕೃಪಾಕಟಾಕ್ಷ ಬೇಕ[...] ಈ ದೂ(ದು)ರಾಲೋಚನೆಯಿಂದಲೇ ಆತ ಚ[...] ಉಡುಪಿಯಿಂದ ಪೇಜಾವರರಿಗೆ ಆಗಿರುವ ಮುಜುಗರ[...] ಬಚಾಯಿಸುವ ನೆಪದಿಂದ ಸ್ವಚ್ಛ ಉಡುಪಿ ಉಪ[...] ಕೈಹಾಕಿದ್ದಾನೆ.

ರೇಪಿಸ್ಟ್ ರಾಘು ಸ್ವಾಮಿ ಪರವಾಗಿ ಪ್ಯಾಕೇಜ್ ಭ[...] ಮಾಡುತ್ತ ಹೊರಟಿದ್ದ ಈ ಚಕ್ರವರ್ತಿ ಸಾರ್ವಜನಿ[...] ರಾಘುನ ರಾಸಲೀಲಾ ವಿನೋದಗಳನ್ನು ಸಮರ್ಥಿ[...] ಪ್ರಹಸನ ನಡೆಸಿದ್ದಾಗಲೇ ಈತ ಅದೆಂಥ ಕೀಳು ಅಭಿರು[...] ಸಂಘಿ ಎಂಬುದು ಸಾಬೀತಾಗಿತ್ತು!

ರಾಘು ಸ್ವಾಮಿ ನೂರಾರು ಬಾರಿ ರಾಮ[...] ಗಾಯಕಿಯನ್ನು ಬಳಸಿಕೊಂಡಿದ್ದಾನೆಂದು ಆರೋ[...] ಬಂದಾಗ ಈ ಚಕ್ರವರ್ತಿ ಸಂಸಾರಿಯಿಂದಲೇ [...] ಬಾರಿ ಮಾಡಲಾಗದ್ದು ನಮ್ಮ ಗುರುವಿಂದ ಆಗಲು ಸಾ[...] ಎಂದು ಅಸಹ್ಯವಾಗಿ ಮಾತಾಡಿದ್ದ. ಹೆಣ್ಣಿನ ಬಗ್ಗೆ [...] ಕೆಟ್ಟದಾಗಿ ಮಾತಾಡಿದ್ದ ಈತ ಪರಸ್ತ್ರೀಯನ್ನು ಮಾತೆ [...] 'ಸಂಸ್ಕೃತಿ'ಯ ಸಂಘಿ ಪರಿವಾರದವನೆಂಬುದೇ [...] ಜೋಕು. ರಾಘು ಸ್ವಾಮಿ ಕೊಟ್ಟಿದ್ದ ಕೂಲಿ ಆಸೆಗೆ ಚಕ್ರ[...] ರಾಮಕಥಾ ಗಾಯಕಿಯನ್ನು ಬಹಿರಂಗವಾಗಿ [...] ಕೊಳಕು ಭಾಷೆಯಲ್ಲಿ ಜರೆದಿದ್ದು ಆತನ [...] ಗುಣಧರ್ಮವನ್ನು ಅನಾವರಣ ಮಾಡಿಬಿ[...] ಇತಿಹಾಸವನ್ನು ಹುಸಿ ಹಿಂದೂತ್ವದ ಪ್ರಚಾರಕ್ಕೆ [...] ಬೇಕೋ ಹಾಗೆ ತಿರುಚುವ ಕುಕಲೆ ಕ[...] ಮಾಡಿಕೊಂಡಿರುವ ಈತ ಟಿಪ್ಪು ಸುಲ್ತಾನ್‌ನನ್ನು ದೇಶದ[...] ಮಾಡಬಲ್ಲ; ವಿವೇಕಾನಂದರನ್ನು ಹೈಜಾಕ್ ಮಾಡಿ [...] ಸ್ವಾಮಿ ಮಾಡಬಲ್ಲ. ಹಿಂದೂತ್ವದ ಕುಚೋ[...] ಮಾತುಗಾರಿಕೆ, ಎಡಪಂಥೀಯರ ಮೂದಲಿಕೆ, ಇತಿ[...] ಹಿಂದೂತ್ವದ ಟಚ್‌ಅಪ್ ಕೊಡುವಿಕೆ, ಸಿದ್ದು ಸ[...] ಟೀಕಿಸುವಂಥ ಈತನ ಕುಹಕದ ತುಣುಕುಗಳು ಸಾಮ[...] ಜಾಲತಾಣದಲ್ಲಿ ಹರಿದಾಡುತ್ತಲೇ ಇರುತ್ತದೆ.

ಊರಿಗೆ ಬೆಂಕಿ ಹಾಕಿ ಮೈಕಾಯಿಸಿಕೊಳ್ಳುವ ಕ[...] ಮನಸ್ಥಿತಿಯ ಚಕ್ರವರ್ತಿ ಗೊಂದಲಕ್ಕೆ [...]



ಕೇಸರಿ ಕೊಚ್ಚೆಯಲ್ಲಿ ಮಾಧ್ಯಮಗಳು!!

ರಾಜ್ಯದಲ್ಲಿ ಕಳೆದ ಅಕ್ಟೋಬರ್ ನಾಲ್ಕರಿಂದ ಒಂಬತ್ತರವರೆಗೆ ನಡೆದ 'ಚಲೋ ಉಡುಪಿ' ಜಾಥಾ ಇತಿಹಾಸದ ಪುಟದಲ್ಲಿ ದಲಿತ-ದಮನಿತರ ಅಭೂತಪೂರ್ವ ಹೋರಾಟ ಎಂದೇ ದಾಖಲಾಗಿ ಹೋಗಿದೆ! ಬಹುಶಃ ಇಂಥದ್ದೊಂದು ಶೋಷಕರ ನಡುಗಿಸುವ ಹೋರಾಟ ಸ್ವಾತಂತ್ರ್ಯಾನಂತರ ಕರ್ನಾಟಕದಲ್ಲಿ ನಡೆದಿಲ್ಲ. ಭೂಮಿ ನಮ್ಮ ಹಕ್ಕು, ಆಹಾರ ನಮ್ಮ ಆಯ್ಕೆ ಎನ್ನುತ್ತ ದಲಿತರು, ಹಿಂದುಳಿದವರು, ದಮನಿತರು ಅಲ್ಪಸಂಖ್ಯಾತರು, ಆದಿವಾಸಿಗಳು, ಸಮಾನ ಮನಸ್ಕರು, ಎಡಪಂಥೀಯರು, ಪ್ರಗತಿ ಪರರೆಲ್ಲ ಭಿನ್ನಮತ ಮರೆತು ಒಂದಾಗಿ ರಾಜ್ಯದ ವಿವಿಧ ಊರುಗಳಲ್ಲಿ ಸಂಚರಿಸಿ ದೊಡ್ಡ ಸಂಖ್ಯೆಯಲ್ಲಿ ಉಡುಪಿಯಲ್ಲಿ ಜಮೆಯಾಗಿ ವೈದಿಕವಾದಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಇದು ಅಬ್ರಾಹ್ಮಣರ ತಲೆ ತೊಳೆದು ಬೇಳೆ ಬೇಯಿಸಿಕೊಳ್ಳುತ್ತಿದ್ದ ಠಕ್ಕ ಹಿಂದೂತ್ವವಾದಿಗಳನ್ನು ಕಂಗಾಲಾಗಿಸಿಬಿಟ್ಟಿದೆ.

ಸಂಘ ಸರದಾರರು ಚಲೋ ಉಡುಪಿಯ ಸುನಾಮಿ ಕಂಡು ಅದೆಷ್ಟು ಹೆದರಿದ್ದಾರೆಂದರೆ, ಕೋಮುವಾದಿಗಳ ಜಗದ್ಗುರು ಎಂದೇ ಹೆಸರುವಾಸಿಯಾಗಿರುವ ಪೇಜಾವರ ಸ್ವಾಮಿ ಮತ್ತವರ ಶಿಷ್ಯ ಸಂಕುಲ ವಿಪರೀತ-ವೈಪರೀತ್ಯದ ಹೇಳಿಕೆ ಕೊಡುತ್ತಿದೆ.

ಚಲೋ ಉಡುಪಿ ಬ್ರಾಹ್ಮಣ-ಅಬ್ರಾಹ್ಮಣ ಎರಡೂ ಸಮಾಜದಲ್ಲಿ ಒಂಥರಾ ತಲ್ಲಣ ಮೂಡಿಸಿದೆ. ಪುರೋಹಿತಶಾಹಿ ಬಳಗದಲ್ಲಿ ಋಣಾತ್ಮಕ ಸಂಚಲನ ಸೃಷ್ಟಿಯಾಗಿದ್ದರೆ ಶೂದ್ರ ಸಂಕುಲದಲ್ಲಿ ಧನಾತ್ಮಕ ಕಂಪನಗಳು ಏಳುತ್ತಿದೆ. ವೈದಿಕಶಾಹಿಯ ಕಣ್ಣು ಕೆಂಪಾಗಲು ಚಲೋ ಉಡುಪಿ ಸಮಾರೋಪದಲ್ಲಿ ಜಿಗ್ನೇಶ್ ಮೇವಾನಿ ಎಂಬ ದಲಿತ-ದಮನಿತರ ಆಶಾಕಿರಣ ಸಿಡಿಸಿದ ಕೃಷ್ಣ ಮಠದ ಪಂಕ್ತಿಭೇದ ಬಾಂಬ್ ಎಂಬ ಪುಕಾರು ಎಬ್ಬಿಸಲಾಗಿದೆ. ವಾಸ್ತವವೆಂದರೆ, ದಲಿತ-ದಮನಿತರು ಈ ಪರಿ ಸಂಘಟಿತರಾಗಿ ಬೀದಿಗಿಳಿದಿದ್ದಾರೆಂದರೆ ಮುಂದೆ ಅದು ತಮ್ಮ ಹಿಂದೂ ರಾಷ್ಟ್ರ ಸ್ಥಾಪನೆಯ ಹಿಡನ್ ಅಜೆಂಡಾಕ್ಕೆ ಗಂಡಾಂತರಕಾರಿ ಎಂಬ ಭಯ ಬ್ರಾಹ್ಮಣಶಾಹಿಗಳ ಬಾಧಿಸುತ್ತಿದೆ.

ಕೇಸರೀಕರಣಗೊಂಡಿರುವ ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ಸ್ ಮೀಡಿಯಾಗಳು ಈ ಉಡುಪಿ ಚಲೋವನ್ನು ಬುದ್ಧಿಪೂರ್ವಕವಾಗೇ ಉಪೇಕ್ಷಿಸಿದ್ದವು. ಶತಶತಮಾನಗಳಿಂದ ವೈದಿಕಶಾಹಿಗಳ ದಬ್ಬಾಳಿಕೆ-ಶೋಷಣೆ-ಹಿಕಮತ್ತುಗಳಿಂದ ನೊಂದು-ಬೆಂದ ದಲಿತ-ದಮನಿತರು ಒಂದಾಗಿ ಐತಿಹಾಸಿಕ ಹೋರಾಟ ಮಾಡುತ್ತಿದ್ದರೂ ಆ ಬಗ್ಗೆ ಪ್ರಚಾರ ಕೊಡಲೇ ಇಲ್ಲ. ರೇಪಿಸ್ಟ್ ರಾಘು ಸ್ವಾಮಿ ಸ್ತ್ರೀ ವ್ಯಾಮೋಹಿ, ಲಿವಿಂಗ್ ಟು ಗೆದರ್ ಸಂಸ್ಕೃತಿಯ ಸಂನ್ಯಾಸಿ ಎಂದು ನ್ಯಾಯಾಲಯವೇ ಹೇಳಿದರೂ ಆತನೊಬ್ಬ 'ಶುದ್ಧ ಸ್ವಾಮೀಜಿ' ಎಂಬಂತೆ ಆತ್ಮಘಾತುಕ ಪ್ರಚಾರ ಕೊಡುತ್ತಿರುವ ಕೇಸರಿಪೀಡಿತ ಪತ್ರಿಕೆ-ಟಿವಿ ಚಾನೆಲ್‌ಗಳು ಸಮಾಜದಲ್ಲಿ ದೊಡ್ಡ ಸಂಚಲನ ಮೂಡಿಸಿದ ಚಲೋ ಉಡುಪಿ ಬಗ್ಗೆ ಸೊಲ್ಲೆತ್ತದೆ ತಮ್ಮ ಪೀತಪ್ರವರ ತೋರಿಸಿಕೊಂಡಿವೆ.

ಯಶಸ್ವೀ ಉಡುಪಿ ಚಲೋ ಮುಗಿದ ಮರುದಿನ ಕೆಲವು ಕೊಳಕು ಪತ್ರಿಕೆಗಳು ಮೂಲೆಯಲ್ಲಿ ಸುದ್ದಿ ಪ್ರಕಟಿಸಿ ಇದೊಂದು ಫ್ಲಾಪ್‌ಶೋ ಎಂಬಂತೆ ಬಿಂಬಿಸಲು ತಿಪ್ಪರಲಾಗಹಾಕಿವೆ. ಮಣಿಪಾಲ ಪೈಗಳ 'ಮರಣವಾಣಿ'ಯಲ್ಲಂತೂ ಉಡುಪಿ ಚಲೋದ ಬಗ್ಗೆ ಬಂದ ಸುದ್ದಿ ಎಂಥದು ಗೊತ್ತಾ? ಚಲೋ ಸಂಘಟಕರು ಬಂದೋಬಸ್ತ್‌ಗೆ ಬಂದಿದ್ದ ಪೊಲೀಸರಿಗೆ ಊಟವನ್ನೇ ಕೊಡದೆ ಸತಾಯಿಸಿದರೆಂದು ಹಸಿಹಸೀ ಸುಳ್ಳು ಬರೆದಿತ್ತು ಪೈ ವಾಣಿ. ನಿಜವೆಂದರೆ, ಪೊಲೀಸರು ಮೊದಲೇ ಘೀ ರೈಸ್, ದಾಲ್ ತೊವ್ವೆ ಬೇಯಿಸಿದ ಮೊಟ್ಟೆ ಹೊಟ್ಟೆ ತುಂಬ ತಿಂದಿದ್ದರು. ಸರ್ಕಾರಿ ನಿಯಮದಂತೆ ಡ್ಯೂಟಿ ಮೇಲಿರುವ ಪೊಲೀಸರು ಹೊರಗಿನ ಊಟ ಮಾಡುವಂತಿಲ್ಲ, ಏಕೆಂದರೆ ಕಿಡಿಗೇಡಿಗಳು ಊಟದಲ್ಲಿ ಅಮಲ-ವಿಷ ಬೆರೆಸಿ ಕುಕೃತ್ಯ ಸಾಧಿಸುವ ಸಾಧ್ಯತೆಯಿರುತ್ತದೆಂದು. ಆದರೆ ಚಲೋ ಉಡುಪಿ ಡ್ಯೂಟಿಗೆ ಬಂದಿದ್ದ ಪೊಲೀಸರು ನಂಬಿಕೆಯಿಂದಲೇ ಸಮಾವೇಶದ ಊಟ ತಿಂದಿದ್ದರು.

ಮತ್ತೊಂದು ಚೆಡ್ಡಿ ಪತ್ರಿಕೆಯಲ್ಲಂತೂ ದಲಿತರ ಮಕ್ಕಳ ಕೈಗೆ ಪೆನ್ನು-ಕಂಪ್ಯೂಟರ್ ಕೊಡುವ ಬದಲಿಗೆ ನೀಲಿ ಬಾವುಟ ಕೊಟ್ಟು ಹಾದಿ ತಪ್ಪಿಸಲಾಗಿದೆ ಎಂದು ಗೀಚಲಾಗಿದೆ. ಚಲೋ ಉಡುಪಿಯ ಮೂಲ ಉದ್ದೇಶದಲ್ಲಿ ದಲಿತ-ದಮನಿತರ ಮಕ್ಕಳ ತಲೆಯಲ್ಲಿ ಕೋಮು ವಿಷ ತುಂಬಿ ಅವರ ಕೈಗೆ ಭಗವಾಧ್ವಜ, ತ್ರಿಶೂಲ ಕೊಟ್ಟು ಹುಸಿ ಹಿಂದೂತ್ವದ ಯುದ್ಧಕ್ಕೆ ಕಳಿಸಿ ವಿದ್ಯೆಯಿಂದ ವಂಚಿಸುವವರ ಬಗ್ಗೆ ಜಾಗೃತಿ ಮೂಡಿಸುವುದಾಗಿದೆ. ಇದು ಆ ಬೆಪ್ಪು ತಕ್ಕಡಿ ವಿಷವಾಣಿ ವರದಿಗಾರನಿಗೆ ಮತ್ತಾತನ ಜನಿವಾರ ಸಿದ್ಧಾಂತಿ ಬಾಸ್‌ಗೆ ಅದ್ಹೇಗೆ ಅರ್ಥವಾದೀತು?

ಯಾರೆಷ್ಟೇ ಹೊಟ್ಟೆಕಿಚ್ಚಿನ ಮಾತಾಡಲಿ. ನೀಲಿ ಕಡಲಿನ ಅಬ್ಬರ ಮನುವಾದಿಗಳು ಮಗ್ಗಲು ಬದಲಿಸಿದಾಗೆಲ್ಲ ಬೆಚ್ಚಿಬೀಳಿಸುತ್ತಲೇ ಇದೆ!

...ಧಾಭಾಸದ ಹೇಳಿಕೆಗಳ ಮೇಲೆ ಹೇಳಿಕೆ ಕೊಡುತ್ತ ...ದ್ದ ಪೇಜಾವರ ಸ್ವಾಮಿಯನ್ನು ರಕ್ಷಿಸಿ ಧರ್ಮಕಾರಣದ ...ರ್ಭ ಗಿಟ್ಟಿಸುವ ಭರದಲ್ಲಿ ಸಾರ್ವಜನಿಕ-ಸಂಘಟಿ...ತಾಚರಣೆಯ ಅಸಡ್ಡಾಳ ಅನಾಚಾರ ಮಾಡಿದ್ದಾನೆ. ...ಲೀಸರು ಸ್ವಯಂಪ್ರೇರಿತರಾಗಿ ಚಕ್ರವರ್ತಿಯ ಮೇಲೆ ...ಸಿಟಿ ಕೇಸು ಜಡಿಯಲು ಯಾವ ಅಡ್ಡಿಯೂ ಇಲ್ಲದ ...ಲಸು ಹಲಬುವಿಕೆ ಆತನದು. ದುರಂತವೆಂದರೆ ದಲಿತ ...ಳ ಗೃಹಮಂತ್ರಿ ಪರಮ್ ಯಾಕೆ ಈತನಕ ಈ ...ರ್ತಿ ವಿರುದ್ಧ ಪೊಲೀಸರು ಕೇಸು ಜಡಿಯುವಂತೆ ...ಡಿಲ್ಲ ಎಂದು ದಲಿತರು-ದಮನಿತರು ಬಾಯ್ಬಾಯಿ ...ದುಕೊಳ್ಳುತ್ತಿದ್ದಾರೆ. ಸಿದ್ದುರ ಸೋಕಾಲ್ಡ್ ಸೆಕ್ಯುಲರ್ ...ರ ಯಾಕಿಷ್ಟು ನಿಸ್ಸಹಾಯಕತೆಯಿಂದ ಒದ್ದಾಡುತ್ತಿದೆ ...ಬುದೇ ಮಿಲಿಯನ್ ಡಾಲರ್ ಪ್ರಶ್ನೆಯಾಗಿ ಒಂಚೂರು ...ಗಿಕ ನ್ಯಾಯ ತತ್ವದ ಪ್ರಜ್ಞೆ ಇರುವವರನ್ನೆಲ್ಲ ಕಾಡುತ್ತಿದೆ.

...ಪೇಜಾವರ ಸ್ವಾಮಿ ಯಾವಾಗಲೂ ತಾನೂ ದಲಿತ ... ದಲಿತರ ಕೇರಿಗೇ ಹೋದ ಸನ್ಯಾಸಿ ಎಂದು ತಾರೀಫು ...ಡಿಕೊಳ್ಳುತ್ತಲೇ ಇರುತ್ತಾರೆ. ಇಂಥ ಪೇಜಾವರ ಸ್ವಾಮಿ ...ಲಿತರ ನಡೆಯಿಂದ ಮಲಿನ ಆಗಿರುವ ಉಡುಪಿ ಸ್ವಚ್ಛ...ಡಲು ಯಾವ ಬ್ರಿಗೇಡ್ ತಯಾರಾಗಿದೆ..." ಎಂದು ...ಗುಮಾರಿ ಸಂಸ್ಕೃತಿಯ ಚಕ್ರವರ್ತಿ ಸೂಲಿಬೆಲೆ ...ಡಿದಾಗ ಆತನ ಮಾತು ಖಂಡಿಸಿ ನಾಲ್ಕು ಮಾತು ...ಳುವ ನೈತಿಕ ಸ್ಥೈರ್ಯ ತೋರಿಸಲಿಲ್ಲ, ಮನೆ-ಮಠ-...ಪ್ಪುಗಳಿಂದ ದಲಿತರನ್ನು ಹೊರಗಿಟ್ಟು ತಾನು ದಲಿತ...ವೆಂದು ಹೇಳುವ ಪೇಜಾವರರ ಸೋಗಲಾಡಿತನಕ್ಕಿದು ...ಂತ ನಿದರ್ಶನ. ನಿಜಕ್ಕೂ ದಲಿತರ ಬಗ್ಗೆ ಪೇಜಾವರರಿಗೆ ...ಕಳಿ-ಪ್ರೀತಿ-ಗೌರವಗಳಿದ್ದರೆ ಚಕ್ರವರ್ತಿಯನ್ನು ...ದೊಳಗೇ ಬಿಟ್ಟು ಕೊಳ್ಳುತ್ತಿರಲಿಲ್ಲ, ಅಲ್ಲವಾ? ಆ ...ತ-ದಮನಿತ ವಿರೋಧಿ ಕೇಸರಿ ಕರಾಮತ್ತುಗಾರ ಸ್ವಚ್ಛ ...ಡುಪಿ-ಕನಕ ನಡಿಗೆ- ಕೃಷ್ಣ ಮಠ ಸಹಾಯಿ ಎಂದೆಲ್ಲ ...ಕ್ಕೊಂದು ವರಸೆ ಪ್ರದರ್ಶಿಸುತ್ತ ದಲಿತರನ್ನು ...ಮಾನಿಸುತ್ತಿದ್ದಾಗಲೂ ಪೇಜಾವರರು ಸುಮ್ಮನಿದ್ದದ್ದು ...ನ್ನು ಬಿಂಬಿಸುತ್ತದೆ?

...ಚಕ್ರವರ್ತಿಯ ಕುಚೋದ್ಯಕ್ಕೆ ಕುಮ್ಮಕ್ಕು ಪೇಜಾವರರದೆ ...ಬ ಸಂಶಯ ಬರದೇ ಇರುತ್ತದಾ? ದಲಿತರನ್ನು ...ಮಾನಿಸಿ, ಕಿಚಾಯಿಸಿ ಬ್ರಾಹ್ಮಣಿಕೆಯ ಮಡಿ-ಮೈಲಿಗೆ ...ಟ್ಟು ಅಬಾಧಿತವಾಗಿ ನಡೆಸುವ ಯೋಚನೆ-ಯೋಜನೆಗೆ ...ಜಾವರರು ಪ್ರಚೋದನೆ ನೀಡುತ್ತಿದ್ದಾರೆಂದೆನಿಸದಾ? ...ಗೂ ಜಿಲ್ಲಾಡಳಿತವೇ ಬ್ರಿಗೇಡ್‌ನ ಆಕ್ಷೇಪಾರ್ಹ ಸ್ವಚ್ಛತಾ ...ರ್ಯಕ್ರಮಕ್ಕೆ ತಡೆ ನೀಡಬೇಕಾಗಿ ಬಂತು. ಆದರೂ ...ನೂರಷ್ಟು ಚೆಡ್ಡಿ-ಕಾವಿ 'ಕರ ಸೇವಕರು' ಮಠದೊಳಗಣ ...ಳೆ ತೆಗೆಯಲು ಚಕ್ರವರ್ತಿ ಜತೆ ಬೆವರು ಇಳಿಸಿದ್ದಾರೆ? ...ಲ್ಲಾ ಜಿಲ್ಲಾಡಳಿತ ಅರ್ಥಾತ್ ಪರಮ್‌ರ ಪೊಲೀಸ್ ...ಷ್ಟೆ ಎಡವಿದೆ; ಎಲ್ಲೆಲ್ಲಿಂದಲೋ 200ರಷ್ಟು ಚೆಡ್ಡಿಗಳು ...ದು ಮಠದ ಅಂಗಳದಲ್ಲಿ ಜಮೆ ಆಗುವ ತನಕ ...ಡಳಿತ ಏನು ಮಾಡುತ್ತಿತ್ತು? ಬಿಜೆಪಿಯನ್ನು ಬೆಳೆಸುವ ...ಗ್ರೆಸಿಗರ ಸಾಫ್ಟ್ ಹಿಂದೂತ್ವ ಅಂದರೆ ಇದೇ ತಾನೆ?

... ಉಡುಪಿ ಚಲೋ ಜಾಡು ಹಿಡಿದುಹೊರಟರೆ ...ದಂತೂ ಖಾತ್ರಿಯಾಗುತ್ತದೆ. ದಲಿತ-ದಮನಿತರು ಮೈ ...ಡವಿ ಎದ್ದು ನಿಂತಿರುವುದು ಮಠಬಾನಿಗಳ, ...ರೋಹಿತಶಾಹಿಗಳ, ಸಂಘಿ ಸಂಕುಲದ ನಿದ್ದೆಗೆಡಿಸಿಬಿಟ್ಟಿದೆ. ...ಗಾಗಿ ಹಿಂದುಳಿದವರಲ್ಲಿ ಭೇದ ಮೂಡಿಸುವ, ಜನರನ್ನು ...ದಿಕ್ಕು ತಪ್ಪಿಸುವ ಕಿತಾಪತಿಗಳು ನಡೆಯುತ್ತಿವೆ. ಮೋದಿಯ ...ಜರಾತ್‌ನ ದಲಿತ-ದಮನಿತರ ಹೋರಾಟಗಾರ-ಕವಿ-...ಲೇಖಕ ಜಿಗ್ನೇಶ್ ಮೇವಾನಿ ಚಲೋ ಉಡುಪಿಗೆ ...ಬರುತ್ತಾರೆಂದಾಗಲೇ ಸಂಘ ಸರದಾರರ ಜಂಘಾಬಲವೇ ...ಡುಗಿಹೋಗಿತ್ತು, ಈ ಉಡುಪಿ ಚಲೋ ಹಿಂದೂತ್ವದ ...ಮುತ್ತಿಗೆ ದಲಿತ-ಶೂದ್ರ, ಕಾಲಾಳುಗಳ ಕೋತಾ ...ಬರುತ್ತದೆಂಬ ಭಯ ಚೆಡ್ಡಿಗಳಲ್ಲಿ ಆರಂಭವಾಗಿತ್ತು ...ಡುಪಿ ಚಲೋದ ಮೂಲ ಆಶಯವಾದ ಆಹಾರದ ...ಯ್ಕೆ, ಭೂಮಿ ಹಕ್ಕು ಮತ್ತು ಸ್ವಾಭಿಮಾನದ ಪ್ರಶ್ನೆಗಳನ್ನು ...ವಾರಿಗಳು ಉಪಾಯವಾಗಿ ಮರೆಮಾಚುತ್ತ ಇದೊಂದು ... ಶಿಷ್ಟರ ಕೊಳಕರ ಹೋರಾಟ ಎಂಬಂತೆ ಬಿಂಬಿಸಿ ...ಕೇಸರಿ ಶೂದ್ರರ ತಲೆ ತೊಳೆಯುವ ತಂತ್ರಗಾರಿಕೆ ...ಹೆಣೆದುಕೊಂಡಿದ್ದಾರೆ.



ಚಲೋ ಉಡುಪಿ ಸಮಾವೇಶ

ಸಮಾವೇಶದಲ್ಲಿ ಜಿಗ್ನೇಶ್ ಮೇವಾನಿ ಸಾಂದರ್ಭಿಕವಾಗಿ ಉಡುಪಿ ಮಠದಲ್ಲಿನ ಪಂಕ್ತಿಭೇದದ ಬಗ್ಗೆ ಆಡಿದ ಒಂದು ವಾಕ್ಯವೇ ಈಗ ದೊಡ್ಡ ರಾದ್ಧಾಂತಕ್ಕೆ ನೆವ ಮಾಡಿಕೊಳ್ಳಲು ಪೇಜಾವರ ಸ್ವಾಮಿ ಮತ್ತವರ ಕೇಸರಿ-ಚೆಡ್ಡಿ ಬಳಗ ಹವಣಿಸುತ್ತಿದೆ. ಪಂಕ್ತಿ ಭೇದ ನಿಲ್ಲಿಸದಿದ್ದರೆ ಮಠಕ್ಕೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಜಿಗ್ನೇಶ್ ಹೇಳಿದ್ದು ದೊಡ್ಡ ಅಪರಾಧ ಎಂಬಂತೆ ಬಿಂಬಿಸಲಾಗುತ್ತಿದೆ. ದಲಿತರು ಕೃಷ್ಣಮಠಕ್ಕೆ ಸಶಸ್ತ್ರ ದಾಳಿಗೆ ಹೊಂಚು ಹಾಕಿದ್ದಾರೆಂಬಂತೆ ಯುದ್ಧದ ಮೂಡ್ ಸೃಷ್ಟಿಗೆ ಕಿತಾಪತಿ ನಡೆಸಲಾಗುತ್ತಿದೆ. ದಲಿತರ-ದಮನಿತರ ಆದ್ಯತೆ ಕೃಷ್ಣಮಠ ಅಲ್ಲವೇ ಅಲ್ಲ! ಆದರೂ ಬೇಕಂತಲೇ ದಲಿತರು ಕೃಷ್ಣ ಮಠವನ್ನು ಗುರಿ ಮಾಡಿಕೊಂಡಿದ್ದಾರೆಂದು ಬೊಬ್ಬೆ ಹೊಡೆಯಲಾಗುತ್ತಿದೆ.

ಎಡಬಿಡಂಗಿ ಪೇಜಾವರ ಸ್ವಾಮಿಯಂತೂ ಇಂದೋ ನಾಳೆಯೋ ದಲಿತರೆಲ್ಲ ಉಡುಪಿ ಮಠಕ್ಕೆ ಹತಾರಗಳೊಂದಿಗೆ ದಾಳಿ ಮಾಡುತ್ತಾರೆಂಬಂತೆ ಸೀನ್ ಕ್ರಿಯೇಟ್ ಮಾಡುತ್ತಿದ್ದಾರೆ. ಮಠಕ್ಕೆ ಮುತ್ತಿಗೆ ಹಾಕಿದರೆ ಉಪವಾಸ ಸತ್ಯಾಗ್ರಹ ಮಾಡ್ತೇನೆ ಎಂದು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ನಮ್ಮ ಮಠದಲ್ಲಷ್ಟೇ ಅಲ್ಲ, ಶೃಂಗೇರಿ ಮಠ, ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯದಲ್ಲೂ ಪಂಕ್ತಿಭೇದವಿದೆ ಎಂದು ಅಲವತ್ತುಕೊಳ್ಳುತ್ತಿದ್ದಾರೆ. ಇಲ್ಲಿರುವ ಪ್ರಶ್ನೆ ಜಾತಿತಾರತಮ್ಯದ್ದೇ ಹೊರತು ಪೇಜಾವರರು ಗುರಿಯಲ್ಲ. ಅಕಸ್ಮಾತ್ ಕುಕ್ಕೆಯಲ್ಲಿ ದಲಿತ-ದಮನಿತರ ಸಮಾವೇಶ ಇದ್ದಿದ್ದರೆ, ಜಿಗ್ನೇಶ್ ಅಲ್ಲಿಯ ಮಡೆಸ್ನಾನದ ಅನಿಷ್ಟದ ಬಗ್ಗೆ ಸೊಲ್ಲೆತ್ತುತ್ತಿದ್ದರು. ಧರ್ಮಸ್ಥಳದಲ್ಲಾಗಿದ್ದರೆ ಮಂಜುನಾಥ ಸ್ವಾಮಿಯನ್ನು ಸುತ್ತುವರಿದಿರುವ ಧರ್ಮವ್ಯಾಪಾರಿಗಳ ಬಗ್ಗೆ ವ್ಯಾಖ್ಯಾನ ಮಾಡುತ್ತಿದ್ದರೇನೋ? ಶೃಂಗೇರಿಯಲ್ಲಾಗಿದ್ದರೆ ಮಡಿ-ಮೈಲಿಗೆ ಎತ್ತಿ ಆಡದೇ ಆತ ಬಿಡುತ್ತಿರಲಿಲ್ಲ. ಇದು ಸರಳ ಸತ್ಯ. ಇದೆಲ್ಲ ಪೇಜಾವರರಿಗೆ ಅರ್ಥವಾಗಲು ಬೌದ್ಧಿಕ ದಿವಾಳಿ ಕೋರತನವಾ? ಅಥವಾ ಗೊತ್ತಿದ್ದೂ ದಲಿತರ-ದಮನಿತರ ಹೋರಾಟದ ಮೂಲ ಆಶಯ ಮರೆಮಾಚಿ ಜನರ ದಿಕ್ಕುತಪ್ಪಿಸಿ ಧರ್ಮಕಾರಣ ಮಾಡುವ ಕುತಂತ್ರವಾ?


ಪೇಜಾವರರು ತನ್ನ ಮಠದೊಳಗಣ ಪಂಕ್ತಿಭೇದ-ಜಾತೀಯತೆಯ ಹೂರಣ ಹೊರಬಿದ್ದಿರುವುದರಿಂದ ಅದೆಷ್ಟು ಗಡಿಬಿಡಿಗೆ ಬಿದ್ದಿದ್ದಾರೆಂದರೆ, ಮಹಾನ್ ಮಾನವತಾವಾದಿ ಬಸವಣ್ಣನವರನ್ನೇ ತನ್ನ 'ಸಿದ್ಧಾಂತ'ಕ್ಕೆ ತಕ್ಕಂತೆ ವ್ಯಾಖ್ಯಾನಿಸಿದ್ದಾರೆ. ಲಿಂಗ ದೀಕ್ಷೆ ಪಡೆಯದವರ ಜತೆ ಭೋಜನ ಮಾಡುವುದು ಏಳು ಜನ್ಮಗಳ ನರಕಕ್ಕೆ ಕಾರಣವಾಗುವುದು- ಎಂದು ಬಸವಣ್ಣ ಹೇಳಿದ್ದಾರೆಂದು ಸುಳ್ಳು-ಸುಳ್ಳೇ ಹಲುಬಿದ್ದಾರೆ. ತನ್ನ ಜೀವಮಾನದುದ್ದಕ್ಕೂ ಬ್ರಾಹ್ಮಣ ಶ್ರೇಷ್ಠತೆ ಮತ್ತು ಜಾತಿ ವ್ಯವಸ್ಥೆ ವಿರುದ್ಧ ಹೋರಾಡಿದ್ದ ಬಸವಣ್ಣ ಜಾತಿವಾದಿ ಎಂಬಂತೆ ಪೇಜಾವರ ಬಡಬಡಿಸಿದ್ದಾರೆ. ಆತ ಡ್ಯಾಮೇಜು ಕಂಟ್ರೋಲಿಗೆ ಮಾಡಬಾರದ್ದೆಲ್ಲ ಮಾಡುತ್ತಿದ್ದಾರೆ.

ದಲಿತೋದ್ಧಾರಕ್ಕೆ ದಲಿತರ ಕೇರಿಗೆ ಹೋಗಿದ್ದೇನೆ ಎನ್ನುವ ಪೇಜಾವರರು ಆ ದಲಿತರು ತನ್ನ ಕೇರಿಗೆ ಬರುತ್ತಾರೆಂದಾಗ ಮುಖ ಸಿಂಡರಿಸಿ ಚಕ್ರವರ್ತಿ ಸೂಲಿಬೆಲೆಯಂಥ ಮನುಷ್ಯ ವಿರೋಧಿ ಪಿಶಾಚಿಯನ್ನು ಛೂಬಿಟ್ಟದ್ದು ವಿಪರ್ಯಾಸವೇ ಸರಿ! ದಲಿತರು ಆಹಾರದ ಆಯ್ಕೆ, ಭೂಮಿಯ ಹಕ್ಕು, ಸ್ವಾಭಿಮಾನದ ಬೇಡಿಕೆ ಮುಂದಿಟ್ಟು ಚಲೋ ಉಡುಪಿ ನಡೆಸಿದಾಗ ಈ ಹಿಂದೂ ಸಂತ ಬೆಂಬಲಿಸಿದ್ದರೆ ಆತ ಎಲ್ಲರ ಕಣ್ಣಿಗೆ ದೊಡ್ಡವರಾಗಿ ಬಿಡುತ್ತಿದ್ದರು. ದಲಿತರಿಗೆ ಸಿಗುವ ನ್ಯಾಯ ಹಿಂದೂಗಳಿಗೆ ಸಿಕ್ಕ ನ್ಯಾಯವೆಂದು ಬಗೆಯುವ ಹೃದಯವೈಶಾಲ್ಯ ಪೇಜಾವರರಲ್ಲಿ ಇಲ್ಲದೇಹೋಯಿತು. ಮಾಧ್ವ ಬ್ರಾಹ್ಮಣ ಮಠದ ಗುರುವಾದ ಪೇಜಾವರರಿಗೆ ಅವರದೇ ಆದ ಕಟ್ಟುಪಾಡುಗಳಿವೆ ನಿಜ. ದಲಿತರ ಕೇರಿಗೆ ಹೋಗಿ 'ಕ್ರಾಂತಿ' ಮಾಡಿದವರಿಗೆ ತನ್ನೂರಿಗೆ ಬರುವ ದಲಿತರ ಬೆಂಬಲಿಸಲು ಭಯವೆಂಬುದೇ 'ದ್ವೈತ ಸಿದ್ಧಾಂತ'ವಾ? ಇದೇ ಪೇಜಾವರರ ದ್ವಂದ್ವ ಸಿದ್ಧಾಂತ ಅಲ್ಲವಾ?

ದಲಿತರ ಬೆಂಬಲಿಸಲಾಗದ ಸಂದಿಗ್ಧವಿದ್ದರೆ ಚಲೋ ಉಡುಪಿಯ ಬಗ್ಗೆ ಸುಮ್ಮನಾದರೂ ಇರಬಹುದಿತ್ತು ಪೇಜಾವರರು. ಊಹುಂ ಅದೂ ಮಾಡಲಿಲ್ಲ. ಉಪವಾಸ ಸತ್ಯಾಗ್ರಹದ ಬೆದರಿಕೆ ಹಾಕಿದರು. ಸೂಲಿಬೆಲೆಯಂಥ ದಗಲುಬಾಜಿಗೆ ಅನವಶ್ಯಕ ಅವಕಾಶ ಕೊಟ್ಟು ಕೆಟ್ಟರು. ಪೇಜಾವರರು ಉಪವಾಸದ ಬಾಂಬ್ ಹಾಕುತ್ತಿರುವುದು ಇದೇ ಮೊದಲೇನಲ್ಲ. ಹಿಂದೆ ಪುತ್ತಿಗೆ ಮಠದ 'ಸಹೋದ್ಯೋಗಿ' ಸ್ವಾಮಿಯನ್ನು ಪಳಗಿಸಲು ಉಪವಾಸ ಅಸ್ತ್ರ ಬಳಸಿದ್ದರು. ದಲಿತರ ಮೇಲೆ ಹಲ್ಲೆಗಳಾದಾಗ ನೀವೇಕೆ ಸುಮ್ಮನಿದ್ದೀರಿ ಎಂದು ಕೇಳಲಾಗಿತ್ತು, ಆಗ ಸಿಕ್ಕಿಬಿದ್ದಿದ್ದ ಪೇಜಾವರರು ಇನ್ನು ದಲಿತರ ಮೇಲೆ ಹಲ್ಲೆಯಾದರೆ ಉಪವಾಸ ಸತ್ಯಾಗ್ರಹ ಮಾಡ್ತೇನೆ ಎಂದಿದ್ದು. ಆದರೆ ಆ ನಂತರ ಅದೆಷ್ಟೋ ದಲಿತ ದೌರ್ಜನ್ಯದ ಪ್ರಕರಣ ನಡೆದರೂ ಪೇಜಾವರರು ಉಪವಾಸ ಮಾತ್ರ ಮಾಡಲೇ ಇಲ್ಲ. ಪೇಜಾವರ ಮಠದ ಪರಿಸರದಲ್ಲೇ ಹಜಬ್ಬ-ಹಸನಬ್ಬ ಎಂಬ ಪಾಪದ ಬ್ಯಾರಿಗಳಿಬ್ಬರನ್ನು ಹಿಂದೂ ರೌಡಿಗಳು ಧರ್ಮದ ಕಾರಣಕ್ಕೆ ಬೆತ್ತಲೆ ಮಾಡಿ ಹಿಂಸಿಸಿ ಇಡೀ ಜಗತ್ತಿಗೇ ಹಿಂದೂತ್ವದ 'ಪ್ರಭೆ' ಪಸರಿಸಿದ್ದರು. ಆಗಲೂ ಪ್ರಾಯಶ್ಚಿತ್ತಕ್ಕಾದರೂ ಈ ಸಾಧು ಒಂದು ದಿನವೂ ಉಪವಾಸ ಮಾಡಲಿಲ್ಲ. ಆ ಮೂಲಕ ತನ್ನ ಧರ್ಮದವರಿಗೆ ಮನುಷ್ಯತ್ವ ಬೋಧಿಸುವ ಹೊಣೆಗಾರಿಕೆ ನಿಭಾಯಿಸಲಿಲ್ಲ. ಮೊನ್ನೆ ಮೊನ್ನೆ ಉಡುಪಿಯ ಕೆಂಜೂರಿನ ಪ್ರವೀಣ ಪೂಜಾರಿ ಎಂಬ ಚೆಡ್ಡಿ ಪೋರನನ್ನೇ ಕೌಬ್ರಿಗೇಡ್ ಕೊಂದು ತಿಂದಾಗಲೂ ಪೇಜಾವರರಿಗೆ ಏನೂ ಅನ್ನಿಸಲಿಲ್ಲ. ಆಗಲಾದರೂ ಹಿಂದೂತ್ವದ ಶುದ್ಧೀಕರಣಕ್ಕೆ ಪೇಜಾವರರು ಉಪವಾಸ ಮಾಡಬಹುದಿತ್ತು!

ಈಗಲೂ ಕಾಲ ಮಿಂಚಿಲ್ಲ, ಕೊಲೆಗಡುಕ ಧರ್ಮಕಾರಣ ಮಾಡುತ್ತಿರುವ ತನ್ನ ಶಿಷ್ಯ ಗಣದ ಹೃದಯ-ಮಿದುಳು ಶುದ್ಧೀಕರಣಕ್ಕಾಗಿ ಪೇಜಾವರರು ಉಪವಾಸ ಕೂರಬೇಕಾದ ಅನಿವಾರ್ಯತೆಯಿದೆ. ಪೇಜಾವರರು ತನ್ನ ಕಾಲಿಗೆ ಅಡ್ಡ ಬೀಳುವ ಬಿಜೆಪಿಯ-ಆರ್‌ಎಸ್‌ಎಸ್‌ನ ತೂಕದ ಮುಂದಾಳುಗಳ ಮತ್ತು ಚಕ್ರವರ್ತಿ, ಪಮೋದ್ ಮುತಾಲಿಕ್, ಕಲ್ಲಡ್ಕ ಭಟ್ಟನಂಥ ಅಬ್ರಾಹ್ಮಣ ವಿರೋಧಿಗಳ ಮನಸ್ಸಿನ ಮಾಲಿನ್ಯ ತೊಳೆವ ಉಪವಾಸ ಮಾಡಿದಾಗಷ್ಟೇ ಅವರ ಹಿಂದೂತ್ವಕ್ಕೆ ಮಾನವೀಯತೆಯ ಜೀವಕಳೆ ಬರಬಲ್ಲದು; ಇಲ್ಲದಿದ್ದರೆ ಪೇಜಾವರರದು ಪ್ರೇತ ಕಳೆಯ ಹಿಂದೂತ್ವ ಎಂಬುದು ನಿಸ್ಸಂಶಯ!!

■ ಶುದ್ಧೋಧನ



ಬಿಂಡಿಗನವಿಲೆಗೆ ಬಂದ ಬೆಳಕು!


ಬಿಂಡಿಗನವಿಲೆ ಮಂಡ್ಯ ಜಿಲ್ಲೆ ಮೇಲುಕೋಟೆ ನಂತರ ಮತ್ತೊಂದು ಐತಿಹಾಸಿಕ ತಾಣ. ಆದರೆ ಇದು ಪ್ರವಾಸಿತಾಣವಲ್ಲ. ವೈನತೇಯ ದೇವಸ್ಥಾನದ ಸುತ್ತು ಕೈತಂಟಿನ ಅಯ್ಯಂಗಾರಿಗಳ ಮನೆಗಳು. ಈ ಮನೆಗಳ ನಂತರ ಶ್ರೇಣೀಕೃತ ಸಮಾಜದ ಅಂತಸ್ತನ್ನು ಪಾಲಿಸುತ್ತಿದ್ದ ಉಳಿದವರ ಮನೆಗಳಿದ್ದ ಒಂದು ಗ್ರಾಮ.

ನಾನು ಮಿಡಲ್‌ಸ್ಕೂಲ್ ಓದಿದ್ದು ಇಲ್ಲಿ. ಆದ್ದರಿಂದ ದೇವಸ್ಥಾನದ ಬೀದಿಯ ಪಕ್ಕದಲ್ಲಿದ್ದ ಸ್ಕೂಲು ಮುಗಿದನಂತರ ಈ ಅಯ್ಯಂಗಾರಿ ಕೇರಿ ದರ್ಶನ ಮಾಡುವ ಅವಕಾಶ ಸಿಗುತ್ತಿತ್ತು. ವರ್ಷಕ್ಕೊಂದು ಬಾರಿ ಇಲ್ಲಿನ ಗರುಡ ದೇವರ ರಥೋತ್ಸವ ನಡೆಯುತ್ತದೆ. ಆದಕ್ಕಾಗಿ ಎಲ್ಲಿಂದಲೋ ಹಾರಿಬರುವ ಅಯ್ಯಂಗಾರಿಗಳನ್ನು ನೋಡುವುದೇ ನಮಗೊಂದು ಸಂಭ್ರಮ. ಆ ಕಾಲಕ್ಕೆ ನಾವೆಂದೂ ನೋಡದಿದ್ದ ಸೂಪರ್ ಡಿಲಕ್ಸ್ ಬಸ್ಸುಗಳನ್ನು ನೋಡಿದ್ದೇ ಇಲ್ಲಿನ ದೇವಸ್ಥಾನದ ಆವರಣದಲ್ಲಿ. ಈ ದೇವರಿಗೆ ಮಂಗಳವಳ್ಳಿ ಎಂಬ ಗ್ರಾಮದ ಗೌಡರುಗಳು ಬಂದು ರಥ ಶೃಂಗರಿಸಿ ಎಳೆದುಕೊಡುತ್ತಿದ್ದರು. ಅಯ್ಯಂಗಾರರ ಬೀದಿಗಳು ರಂಗೋಲೆಯಿಂದ ಶೃಂಗಾರಗೊಂಡಿರುತ್ತಿದ್ದವು. ಈ ಜನ ನಮಗಾರಿಗೂ ಅರ್ಥವಾಗದ ಯಾವುದೋ ಭಾಷೆ ಮಾತನಾಡುತ್ತ ರಥೋತ್ಸವ ಮುಗಿಸಿ ಹೊರಟುಹೋಗುತ್ತಿದ್ದರು. ಮತ್ತೆ ಈ ದೇವಮಾನವರನ್ನು ನೋಡಲು ಒಂದು ವರ್ಷ ಕಾಯಬೇಕಾಗಿತ್ತು.

ನಾವೆಲ್ಲಾ ಹೈಸ್ಕೂಲಿಗೆ ಹೋದನಂತರ ತಿಳಿದಿದ್ದೇನೆಂದರೆ, ಈ ನಾಡಿನಲ್ಲಿ ಖ್ಯಾತನಾಮರಾಗಿದ್ದ ಪೊಲೀಸ್ ಕಮೀಷನರ್ ಗರುಡಾಚಾರರು ಮತ್ತು ಕನ್ನಡದ ಮೊಟ್ಟ ಮೊದಲ ಕಲರ್ ಸಿನಿಮಾ ನಿರ್ಮಾಪಕ ಮತ್ತು ನಿರ್ದೇಶಕ ಬಿ.ಎಸ್. ರಂಗ ಇದೇ ಊರಿನವರು ಎಂಬುದು. ನಂತರ ಕನ್ನಡ ಸಾಹಿತ್ಯದ ಪರಿಚಯವಾದ ನಂತರ ಬಂಕಿಮಚಂದ್ರ ಚಟರ್ಜಿಯವರ ಬಂಗಾಳಿ ಕಾದಂಬರಿಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದ ಬಿ. ವೆಂಕಟಾಚಾರ್ಯರು ಇದೇ ಊರಿನರೆಂದು ತಿಳಿಯಿತು. ಆನಂತರ ನಾರಾಯಣಸ್ವಾಮಿಯವರೂ ಕೂಡ ಇದೇ ಊರಿನವರೆಂದು ಅವರದೊಂದು ನಾಟಕವನ್ನು ನೋಡಿದಾಗ ತಿಳಿಯಿತು. ಏಕೆಂದರೆ 'ಬಂಗಾರದ ಕೋಟೆ' ಎಂಬ ಬಂಗಾಳಿ ನಾಟಕವನ್ನವರು ಬಿಂಡಿಗನವಿಲೆ ಬ್ರಾಹ್ಮಣರಿಗೆ ಅರ್ಪಿಸಿದ್ದರು.

ನಾರಾಯಣಸ್ವಾಮಿಯವರು ಮಾಧ್ಯಮಿಕ ಶಾಲೆಯನ್ನು ಬಿಂಡಿಗನವಿಲೆಯಲ್ಲೇ ಮುಗಿಸಿದ್ದರು. **1966** ರಲ್ಲಿ ಡಿಗ್ರಿ ಮುಗಿಸಿದ ಅವರು ಬಂಗಾಳಕ್ಕೆ ಹೋಗಿ, ಗುಡ್ಡಗಾಡು ಜನರ ಸೇವೆ ಮಾಡುತ್ತ ಬಂಗಾಳಿ ಕಲಿತರು. ಐದು ವರ್ಷದಲ್ಲವರು ಬಂಗಾಳಿ ಸಾಹಿತ್ಯವನ್ನು ಕನ್ನಡಕ್ಕೆ ತರುವಷ್ಟು ಭಾಷಾ ಸಂಪತ್ತು ಪಡೆದರು. ಆದರ ಫಲವಾಗಿ 'ಮಾರೀಚನ ಬಂಧುಗಳು', 'ಕವಿ ಕಹಾನಿ ಸಲ್ಯೂಷನ್', 'ಮಾನವ ಜನ್ಮ ದೊಡ್ಡದು', 'ಭೂಕಂಪದ ಮುನ್ನ', 'ಜ್ವಾಲೆ' ಮುಂತಾದ ನಾಟಕಗಳನ್ನು ಕನ್ನಡಕ್ಕೆ ತಂದಿದ್ದಾರೆ. 'ಜ್ವಾಲೆ'ಯನ್ನು ಕ.ವೆಂ. ರಾಜಗೋಪಾಲ್ ನಿರ್ದೇಶಿಸಿದ್ದರು. ಭಾರ್ಗವಿಯವರ ಪತಿ ನಾರಾಯಣ್ ಇವರ ನಾಟಕಗಳನ್ನು ಕಲಾಕ್ಷೇತ್ರದಲ್ಲಿ ಆಡಿಸಿದ್ದರು.


ನಾರಾಯಣಸ್ವಾಮಿಯವರಿಗಿಂತಲೂ ಮೊದಲು ಬಂಗಾಳಿ ಕಾದಂಬರಿಗಳನ್ನು ಕನ್ನಡಕ್ಕೆ ತಂದ ಬಿ. ವೆಂಕಟಾಚಾರ್ಯರು ಅಂಚೆ ತೆರಪಿನ ಶಿಕ್ಷಣದ ಮೂಲಕ ಬಂಗಾಳಿ ಕಲಿತು, ಬಂಕಿಮ ಚಂದ್ರರ ಕೃತಿಗಳನ್ನು ಕನ್ನಡಕ್ಕೆ ತಂದಿದ್ದರು. ಇವರ ಸಾಹಸವನ್ನು ಮೆಚ್ಚಿದ ಬಂಕಿಮಚಂದ್ರರು ತಮ್ಮ ಕಾದಂಬರಿ ರಚನೆ ವೇಳೆ ಅದನ್ನು ಕಾರ್ಬನ್ ಕಾಪಿಯಲ್ಲಿ ರಚಿಸಿ, ಆ ಕಾರ್ಬನ್ ಕಾಪಿಯನ್ನು ವೆಂಕಟಾಚಾರ್ಯರಿಗೆ ಕಳುಹಿಸುತ್ತಿದ್ದರು. ಇಲ್ಲಿ ಆದರ ತರ್ಜುಮೆ ಕಾರ್ಯ



ನಡೆದು ಏಕಕಾಲಕ್ಕೆ ಬಂಗಾಳಿ ಮತ್ತು ಕನ್ನಡದಲ್ಲಿ ಕೃತಿಗಳು ಪ್ರಕಟವಾಗುತ್ತಿದ್ದವಂತೆ. ಹೀಗೆ ಎಂಭತ್ತು ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ.

ನಾರಾಯಣಸ್ವಾಮಿ ಅಷ್ಟೊಂದು ತರ್ಜುಮೆ ಮಾಡದಿದ್ದರೂ ಅರ್ಥಪೂರ್ಣ ಕೃತಿಗಳನ್ನು ತಂದಿದ್ದಾರೆ. ಇನ್ನುಳಿದಂತೆ ಅವರು ಸಂಸ್ಕೃತ, ಇಂಗ್ಲಿಷ್ ಮತ್ತು ತಮಿಳಿನಿಂದ ಕನ್ನಡಕ್ಕೆ ತಂದಿದ್ದಾರೆ. ಆ ಪೈಕಿ ಇಂಗ್ಲಿಷ್‌ನಿಂದ ಸರೋಜಿನಿ ನಾಯ್ಡು, ಸಂಸ್ಕೃತದಿಂದ ನಾರಾಯಣಿ, ತಮಿಳಿನ ಆಳ್ವರರ **4000** ವಚನ ಹಾಗು ಶೈವರ ತೇವಾರಂರ **1495** ಪದ್ಯಗಳನ್ನು ಕನ್ನಡಕ್ಕೆ ತಂದಿದ್ದಾರೆ. ಅಲ್ಲದೆ ತಮಿಳಿನಲ್ಲಿದ್ದ ಕವಿ ಚಕ್ರವರ್ತಿ ಕಂಬರ್‌ರವರ ರಾಮಾಯಣವನ್ನೂ ಕನ್ನಡಿಸಿದ್ದಾರೆ. ಇದು ಮೂಲ ಜನಪದರ ರಾಮಾಯಣವಂತೆ.


ವೆಂಕಟಾಚಾರ್


ಬಂಕಿಮ ಚಂದ್ರ



ಇಷ್ಟೆಲ್ಲ ಸಾಧನೆ ಮಾಡಿರುವ ನಾರಾಯಣಸ್ವಾಮಿಯವರು ಆರ್‌ಟಿಓ ಇಲಾಖೆಯಲ್ಲಿ ಅಧಿಕಾರಿಯಾಗಿದ್ದರು. ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಇವರು ತಂದ ಕ್ರಾಂತಿಕಾರಿ ಬದಲಾವಣೆ ಅಂದರೆ ಪರ್ಸೆಂಟೇಜ್ ಟ್ಯಾಕ್ಸ್ ಫಿಕ್ಸೇಷನ್ ಮತ್ತು ಇಡೀ ಇಲಾಖೆಯನ್ನು ಕಂಪ್ಯೂಟರೀಕರಣಗೊಳಿಸಿದ್ದು. ಇನ್ನಿತರ ತಾಂತ್ರಿಕ ಬದಲಾವಣೆಗಳೆಲ್ಲಾ ಯಥಾವತ್ ಮುಂದುವರಿದಿವೆ. ಆದಕ್ಕಾಗಿಯೇ ಇವರನ್ನು ಆರ್‌ಟಿಓ ಆಫೀಸಿನಲ್ಲಿ ಬ್ರಹ್ಮ ಎಂದು ಕರೆಯುತ್ತಿದ್ದರು. ಇಷ್ಟಾದರೂ ನಾರಾಯಣಸ್ವಾಮಿ ತನ್ನ ಸಾಧನೆಯನ್ನು ಎಲ್ಲೂ ಹೇಳಿಕೊಂಡವರಲ್ಲ. ಬಹುಭಾಷಾ ವಿದ್ವಾಂಸರಾದ ಇವರು ನಮ್ಮ ಮಂಡ್ಯ ಜಿಲ್ಲೆಗೆ ಅಪರಿಚಿತರಾಗಿ ಉಳಿದಿದ್ದರು. ಒಂದು ಪುಸ್ತಕ ಬರೆದು, ಅದನ್ನೇ ಎಲ್ಲಾ ಕಡೆ ಹೇಳಿಕೊಂಡು, ಸಂಜೆ ಎಣ್ಣೆ ಪಾರ್ಟಿಗೊಂದು ವ್ಯವಸ್ಥೆ ಮಾಡಿಕೊಳ್ಳುವುದರಲ್ಲೇ ಕಾಲ ಹಾಕುವ ನಮ್ಮ ತಲೆಮಾರಿನ ಲೇಖಕರು ನಾರಾಯಣಸ್ವಾಮಿಯವರಿಂದ ಕಲಿಯುವುದು ಬೆಟ್ಟದಷ್ಟಿದೆ.

ಈಗ ನಾರಾಯಣಸ್ವಾಮಿಯವರು ತಾವು ಹುಟ್ಟಿದೂರಿನ ಋಣ ತೀರಿಸಲೆಂಬಂತೆ ಇಲ್ಲಿ ಕಾಣಿಸಿಕೊಂಡಿದ್ದಾರೆ. ಜಲಕ್ಷಾಮ ಎರಡನೇ ವರ್ಷಕ್ಕೆ ಕಾಲಿಟ್ಟದೆ. ಆದ್ದರಿಂದ ಮುಂದೆ ಓದಲಿರುವ ಮಕ್ಕಳು, ಅದರಲ್ಲೂ ಹಳ್ಳಿಮಕ್ಕಳು, ಕರೆಂಟಿನ ಖೋತಾದಿಂದ ರಾತ್ರಿ ಓದಲಾಗದೆ ಪರಿತಪಿಸುವುದು ಗ್ಯಾರಂಟಿ. ಆದ್ದರಿಂದ ಹಳ್ಳಿ ಶಾಲೆ ಮಕ್ಕಳಿಗೆ ಸೋಲಾರ್ ಲ್ಯಾಂಪ್ ಕೊಡುವ ಕಾರ್ಯಕ್ರಮ ಹಾಕಿಕೊಂಡು ಅದನ್ನು ಕಾರ್ಯರೂಪಕ್ಕಿಳಿಸಿದ್ದಾರೆ.

ಇದೊಂದು ಕರ್ನಾಟಕದಲ್ಲೇ ವಿಶಿಷ್ಟ ಕಾರ್ಯಕ್ರಮ. ಹಲವಾರು ಭಾಗ್ಯ ಕರುಣಿಸಿರುವ ಸರ್ಕಾರ ಹಳ್ಳಿ ಮಕ್ಕಳಿಗೆ ರಾತ್ರಿ ಬೆಳಕು ಕೊಡುವ ಬಗ್ಗೆ ಈವರೆಗೂ ಯೋಚಿಸಿಲ್ಲ. ನಾರಾಯಣಸ್ವಾಮಿಯವರು ಈಗಾಗಲೇ ಬಿಂಡಿಗನವಿಲೆಯ ಎಲ್ಲಾ ಸ್ಕೂಲು ಮಕ್ಕಳಿಗೂ **1700** ಸೋಲಾರ್ ಲ್ಯಾಂಪ್ ಕೊಟ್ಟಿದ್ದಾರೆ. ಕೇವಲ ಎರಡು ಗಂಟೆ ಚಾರ್ಜು ಮಾಡಿದರೆ ಸಾಕು, ರಾತ್ರಿಯೆಲ್ಲಾ ಓದಬಹುದಾದ ಈ ಸೋಲಾರ್ ಲ್ಯಾಂಪ್ ಹತ್ತು ವರ್ಷ ಬಾಳಿಕೆ ಬರುತ್ತದೆ. ಅಲ್ಲಿಗೆ ಮಕ್ಕಳ ಓದಿನ ಅವಧಿಯೂ ಪೂರ್ಣಗೊಳ್ಳಬಹುದು. ಈ ದಿಸೆಯಲ್ಲಿ ನಮ್ಮ ರಾಜಕಾರಣಿಗಳು ಯೋಚಿಸುವುದು ಒಳ್ಳೆಯದು.

ಎಂ.ಪಿ. ಫಂಡೆಂದು ಬರುವ ಹಣದಲ್ಲೇ ಇಡಿ ಜಿಲ್ಲೆ ಮಕ್ಕಳಿಗೆ ಸೋಲಾರ್ ಲ್ಯಾಂಪ್ ಕೊಡಬಹು ಇನ್ನು ಎಂಎಲ್‌ಎಗಳ ಆದಾಯ ನೋಡಿದರೆ ಅವ ತನ್ನ ತಾಲೂಕಿಗೇ ಬೆಳಕು ಹರಿಸಬಹುದು. ಇದು ಮತ್ತೊಮ್ಮೆ ಗೆಲ್ಲಲು ಸುಲಭ ಮಾರ್ಗವಾಗಬಹುದ ಆದರೆ ಅವರಂತಹ ಕೆಲಸ ಮಾಡಲಾರರು. ಅವರ ತಲೆಯಲ್ಲಿ ಬೆಳಕಿಗೆ ಜಾಗವಿಲ್ಲ; ಅಲ್ಲೇನಿದ್ದರೂ ಬರಿ ಕತ್ತಲೆ ಕೆಲಸಗಳು ನಡೆಯುತ್ತವೆ.

ಮಕ್ಕಳಿಗೆ ಸೋಲಾರ್ ಲ್ಯಾಂಪ್ ನೀಡುವ ಕಾರ್ಯಕ್ರಮಕ್ಕೆ ನಾರಾಯಣಸ್ವಾಮಿ ನನ್ನನ್ನು ಕರೆದಿ ಪಿಯುಸಿವರೆಗೂ ಸೀಮೆಎಣ್ಣೆ ಬುಡ್ಡಿಯಲ್ಲೇ ಓದಿದ್ದ ನಾನು ಸೋಲಾರ್ ಲ್ಯಾಂಪ್ ವಿತರಿಸಲು ಸೂಕ್ತ ವ್ಯಕ್ತಿಯಾಗಿದ್ದೆ. ಇದೇನು ಹೆಮ್ಮೆಯಿಂದ ಹೇಳಿಕೊಳ ಮಾತಲ್ಲ. ಅಂಥಾ ತೇಜಸ್ವಿಯವರೇ ಸೀಮೆಎಣ್ಣೆ ಬು ಬೆಳಕಲ್ಲಿ 'ಕರ್ವಾಲೊ' ಬರೆದಿದ್ದರಂತೆ.

ಈ ಬಿಂಡಿಗನವಿಲೆ ನೆಲದ ಪ್ರತಿಭೆಗಳ ಬಗ್ಗೆ ಮಾತನಾಡುವಾಗ ನಾರಾಯಣಸ್ವಾಮಿಯವರಿಂದ ವಿಸ್ಮಯಕರ ಸಂಗತಿಗಳು ಹೊರಬಿದ್ದವು. ನನಗೆ ಗೊತ್ತಿದ್ದಂತೆ ಇಲ್ಲಿಂದ ಹೊರಗೋಗಿ ಖ್ಯಾತಿ ಗಳಿಸಿದವರು ನಾಲ್ಕು ಜನ ಎಂದು ತಿಳಿದಿದ್ದೆ. ಆದ ಇಡೀ ಊರೇ ತಮ್ಮ ಪ್ರತಿಭೆ ಹೊತ್ತು ಪ್ರಪಂಚದ ನಾನಾ ಮೂಲೆಗೆ ಪಲಾಯನ ಮಾಡಿದೆ.

ಮೊದಲಿಗೆ ಬಿಂಡಿಗನವಿಲೆ ಕೃಷ್ಣ ಅಯ್ಯಂಗಾರರ ಇಂಗ್ಲಿಷರ ಕಾಲದಲ್ಲಿ ಡಿ.ಸಿ.ಯಾಗಿದ್ದವರು. ಮೈಸೂ ಅರಸೊತ್ತಿಗೆ ದತ್ತುಪುತ್ರನನ್ನು ಪಡೆದು ಮತ್ತೆ ಸಾಮ ಮುಂದುವರೆಸುವ ವಿಷಯ ಬ್ರಿಟಿಷರೊಡನೆ ಸಂಘರ್ಷಕ್ಕಿಳಿದಿತ್ತು. ಆಗ ಬಿಂಡಿಗನವಿಲೆ ಕೃಷ್ಣ ಅಯ್ಯಂಗಾರು ಬ್ರಿಟಿಷರೊಡನೆ ವಾದಿಸಿ, ದತ್ತುಪುತ್ರ ಹಕ್ಕುಗಳನ್ನು ವಿವರಿಸಿ, ಮೈಸೂರು ಸಂಸ್ಥಾನ ಮುಂದುವರಿಯುವಂತೆ ಮಾಡಿದರು. ವಾದದಲ್ಲಿ ಸೋತ ಬ್ರಿಟಿಷರು ಅವರನ್ನು ಕೋಲಾರದಿಂದ ಚಿತ್ರದುರ್ಗಕ್ಕೆ ವರ್ಗಾಯಿಸಿದರು. ಆಗ ಮೈಸೂರು ಸಂಸ್ಥಾನ ಬಂದು ದಿವಾನರಾಗುವಂತೆ ಆಹ್ವಾನವಿತ್ತರ ಕೃಷ್ಣ ಅಯ್ಯಂಗಾರರು ಹೋಗಲಿಲ್ಲ.

ಇನ್ನು ಬೆಂಗಳೂರಿನ ಬಿ.ವಿ.ಕೆ. ಅಯ್ಯಂಗಾರ್ ನಿಮಗೆಲ್ಲಾ ಗೊತ್ತು. ಬಿ. ವೆಂಕಟಕೃಷ್ಣ ಅಯ್ಯಂಗಾರ ಇಂಡಸ್ಟ್ರಿಯಲಿಸ್ಟಾಗಿದ್ದರು. ಈ ಉದ್ಯಮಿಯ ಉದಾರತನ ಮತ್ತು ಬುದ್ಧಿವಂತಿಕೆ ನೆನಪಿಗಾಗಿ ರಸ್ತೆ ಹೆಸರಿಡಲಾಗಿದೆ. ಬಿಂಡಿಗನವಿಲೆ ಆದಿದೇವಾನಂದರು ಸಂಸ್ಕೃತದಿಂದ ಬೇಕಾದಷ್ಟು ಕೃತಿಗಳನ್ನು ಕನ್ನಡಕ್ಕೆ ತಂದಿರುವುದಲ್ಲದೆ ರಾಮಕೃಷ್ಣಾಶ್ರಮದ ಟ್ರಸ್ಟಿಗಳಲ್ಲೊಬ್ಬರು.

ಬಿ.ಎಸ್. ರಾಮನ್ ಆಂಧ್ರಪ್ರದೇಶದ ಸರ್ಕಾರ ಚೀಫ್ ಸೆಕ್ರೆಟರಿಯಾಗಿದ್ದವರು. ಅವರಂತೆಯೇ ಮತ್ತೊಬ್ಬ ಬಿ.ಎಸ್. ಜಯಸಿಂಹ ಆಂಧ್ರ ಪ್ರದೇಶದ ಅಡಿಷನಲ್ ಚೀಫ್ ಸೆಕ್ರೆಟರಿಯಾಗಿದ್ದರು. ಬಿ.ವಿ. ಅಯ್ಯಂಗಾರ್ ಐಎಎಸ್ ವಿಜಿಲೆನ್ಸ್ ಕಮೀಷನರಾಗಿದ್ದರು.

ಬಿ.ಜಿ. ಶ್ರೀನಾಥ್ ಗೌರ್ನಮೆಂಟ್ ಆಫ್ ಇಂಡಿಯಾದ ಡೈರೆಕ್ಟರ್ ಜನರಲ್ಲಾಗಿದ್ದರು. ಭಾರತ ಸರ್ಕಾರದ ಮೊದಲ ಜಡ್ಜು ಬಿ. ಸೀತಾರಾಮಯ್ಯಂಗಾರ್ ಬಿಂಡಿಗನವಿಲೆಯವರು. ರಾ ಬಹದ್ದೂರ್, ಬಿ.ಕೆ. ಗರುಡಾಚಾರ್‌ರವರು ಬೆಂಗಳೂರಿನ ಮುನಿಸಿಪಲ್ ಛೇರ್ಮನ್‌ರಾಗಿದ್ದರು. ಇವರು ಸರ್ ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್, ಡಿವಿಜಿಯವರ ಆತ್ಮೀಯ ಗೆಳೆಯರಾಗಿದ್ದರು. ತಾನು ಹುಟ್ಟಿದ ಬಿಂಡಿಗನವಿಲೆ





ನಾದರೂ ಮಾಡಬೇಕೆಂದು ಯೋಚಿಸಿದ ಅವರು ಗಿನ ಕಾಲಕ್ಕೆ ಸುಸಜ್ಜಿತವಾದ ಆಸ್ಪತ್ರೆ, ಪಶುವೈದ್ಯ ಾಲೆ ಹಾಗು ಒಂದು ಛತ್ರವನ್ನು ಕಟ್ಟಿಸಿದ್ದರು. ನಾವೆಲ್ಲಾ ಆಸ್ಪತ್ರೆಗೆ ಹೋಗಿ ದೊಡ್ಡ ಸೀಸದಲ್ಲಿಟ್ಟಿದ್ದ ಕೆಂಪು ೇವಿ ಬಣ್ಣದ ಔಷಧಿ ಕುಡಿದು ಬರುತ್ತಿದ್ದೆವು. ಆಗ ನಗಳೆಲ್ಲಾ ಆರೋಗ್ಯವಂತರಾಗಿದ್ದರಿಂದ ಆಸ್ಪತ್ರೆ ೋಗಿಗಳಿಲ್ಲದೆ ಬಿಕೋ ಎನ್ನುತ್ತಿತ್ತು. ಈಗ ಕಾಲಿಡಲು ಾಗವಿಲ್ಲ. ಜೊತೆಗೆ ಬಿ.ಕೆ. ಗರುಡಾಚಾರರ ಕರ್ಷಕವಾದ ಭಾವಚಿತ್ರ ಕೂಡ ಅಲ್ಲಿಲ್ಲ.

ಬಿ. ನಾರಾಯಣ ಅಯ್ಯಂಗಾರ್‌ರವರು ಂಡೋಲಜಿಯ ಮೇಲೆ 'ಇಂಡೋ ಆರ್ಯನ್ ಲಾಸಫಿ' ಎಂಬ ಅಪರೂಪದ ಗ್ರಂಥ ಬರೆದ ಾರಣಕ್ಕಾಗಿ ಅದನ್ನು ಅಧ್ಯಯನ ಮಾಡಿದ ಂಗಾಳಿಗಳು ಅಯ್ಯಂಗಾರರನ್ನು ಕರೆದು ನ್ಮಾನಿಸಿದ್ದಾರೆ. ಸ್ವತಃ ಈಶ್ವರ ಚಂದ್ರ ವಿದ್ಯಾಸಾಗರರು ೈಲ್ವೆ ನಿಲ್ದಾಣಕ್ಕೆ ಪಲ್ಲಕ್ಕಿ ತಂದು, ಅದರಲ್ಲಿ ಕೂರಿಸಿ, ಭಾಂಗಣದವರೆಗೆ ಮೆರವಣಿಗೆಯಲ್ಲಿ ಕರೆದೊಯ್ದಿದ್ದಾರೆ. ಮ್ಮ ಕನ್ನಡ ಸಾಹಿತ್ಯದ ವಿದ್ವಾಂಸರ್ಯಾರೂ ನಮಗೆ ಈ ಂಗತಿಯನ್ನು ತಿಳಿಸಿಲ್ಲ.

ಡಾ. ಅಬ್ದುಲ್ ಕಲಾಂ ನನ್ನ ಗುರುಗಳೆಂದು ೌರವಿಸುತ್ತಿದ್ದ ಅಣುವಿಜ್ಞಾನಿ ಡಾ. ರಾಜಾರಾಮಣ್ಣ ಬಿಂಡಿಗನವಿಲೆಯವರು. ಅವರೊಂದು ಉಪನ್ಯಾಸಕ್ಕಾಗಿ ಇರಾಕ್‌ಗೆ ಹೋದಾಗ ಸದ್ದಾಂ ಹುಸೇನ್ ಕೈಗೆ ಸಿಕ್ಕಿಬಿದ್ದರು. "ನನಗೆ ಅಣುಬಾಂಬಿನ ಅಗತ್ಯವಿದೆ. ನೀವು ಮಾಡಿಕೊಡಬೇಕು" ಎಂದು ರಾಜಾರಾಮಣ್ಣನವರಿಗೆ ಗಂಟುಬಿದ್ದಿದ್ದನಂತೆ. ರಾಮಣ್ಣನವರು ಅತ್ಯಂತ ನಯಗಾರಿಕೆಯಿಂದ ತಪ್ಪಿಸಿಕೊಂಡು ಭಾರತಕ್ಕೆ ಬಂದಿದ್ದರು. ಆಗಿನಿಂದ ಅವರಿಗೆ ವಿಪರೀತ ಸೆಕ್ಯುರಿಟಿ ಒದಗಿಸಲಾಗಿತ್ತು. ಆದರೂ ಯಾರಿಗೂ ಕಾಣದಂತೆ ಬಿಂಡಿಗನವಿಲೆಗೆ ಬಂದುಹೋಗುತ್ತಿದ್ದರು. ಮಲ್ಲೇನಹಳ್ಳಿ ರೈತ ಮ.ಕೆ. ದೊರೆಸ್ವಾಮಿ ಡಾ. ರಾಜಾರಾಮಣ್ಣನ ಬಗ್ಗೆ ಕುತೂಹಲಗೊಂಡು ತನಗೆ ತಿಳಿದ ಮಾಹಿತಿಯನ್ನು ಸಂಗ್ರಹಿಸಿ ಪುಸ್ತಕ ಬರೆದ. ಆದರೆ ಅದನ್ನು ಪ್ರಕಟಿಸಲಾಗದೆ ತೀರಿಕೊಂಡ. ನಾಗತಿಹಳ್ಳಿ ಚಂದ್ರಶೇಖರ ಆ ಪುಸ್ತಕವನ್ನು ಪ್ರಕಟಿಸಿದ್ದಾನೆ.

ಬಿ.ಎಸ್. ಗರುಡಾಚಾರ್ ಎಂಬುವರು ಸಿಬಿಐನಲ್ಲಿ ದಕ್ಷತೆಯಿಂದ ಕೆಲಸ ಮಾಡಿದ್ದರೂ ಯಾರಿಗೂ ಕಾಣಿಸಿಕೊಳ್ಳದಂತೆ ಬದುಕುತ್ತಿದ್ದಾರೆ. ಕಾರಣ ಅವರಿಗಿರುವ ಸಂಕೋಚದ ಪ್ರವೃತ್ತಿ. ಪೊಲೀಸ್ ಕಮೀಷನರಾಗಿದ್ದ ಬಿ.ಎನ್. ಗರುಡಾಚಾರ್ ಅರಸು ಮತ್ತು ಹೆಗಡೆಯವರಿಗೆ ಬಹಳ ಪ್ರಿಯವಾದ ಅಧಿಕಾರಿ. ಸದ್ಯ ಬೆಂಗಳೂರಿನ ಗರುಡಮಹಲಿನ ಅಂತರಿಕ್ಷದಲ್ಲಿರುವ ಅವರು ಹುಟ್ಟಿದೂರಾದ ಬಿಂಡಿಗನವಿಲೆಗೆ ಅವರು ಪೊಲೀಸ್ ಕಮೀಷನರಾಗಿದ್ದಾಗ 15 ಜನ ಸಿಬ್ಬಂದಿಯ ಪೊಲೀಸ್ ಠಾಣೆ ಮಂಜೂರು ಮಾಡಿದ್ದರು.

ಇನ್ನು ಸಂಗೀತ ಕ್ಷೇತ್ರದಲ್ಲಿ ವೀಣೆ ಚೊಕ್ಕಮ್ಮ, ವಸುಂಧರಾ ದಾಸ್ ಪ್ರಮುಖರು. ಹಿಂದೂಸ್ತಾನಿ ಸಂಗೀತದಲ್ಲಿ ಲಲಿತನವಿಲೆ ಬಹಳ ಹೆಸರು ಮಾಡಿದ ಕಲಾವಿದೆ.

ಕನ್ನಡದಲ್ಲಿ ಮೊಟ್ಟಮೊದಲ ಈಸ್ಟಮನ್ ಕಲರ್ ಚಿತ್ರ ತೆಗೆದ ಬಿ.ಎಸ್. ರಂಗ ಅವರು ಮದರಾಸಿನಿಂದ ಇಡೀ ಚಿತ್ರ ತಂಡವನ್ನು ಬಸ್ಸಿನಲ್ಲಿ ಕರೆತಂದು, ಗರುಡದೇವರ ದೇವಸ್ಥಾನದಲ್ಲಿ ಪೂಜೆ ಮಾಡಿಸಿಕೊಂಡು ಹೋಗಿದ್ದರು. ಆ ಕಲಾವಿದರ ನಡುವೆ ಜಯಲಲಿತನೂ ಇದ್ದಳು. ಆಗ ಊರಜನ ಯಾರೋ ಪ್ರವಾಸಿಗರೆಂದು ತಿಳಿದು ತಾತ್ಸಾರದ ಪ್ರತಿಕ್ರಿಯೆ ನೀಡಿದ್ದರಂತೆ.

ಈಗ ಬಿಂಡಿಗನವಿಲೆ ಪ್ರತಿಭೆಗಳು ಇಲ್ಲಿಲ್ಲ. ಎಲ್ಲಿ ಹೋದರೆಂದು ಹುಡುಕಿದರೆ ಅಮೆರಿಕದ ನ್ಯೂಜೆರ್ಸಿ, ಚಿಕಾಗೋ, ಸ್ಯಾನ್‌ಫ್ರಾಂಸಿಸ್ಕೊ, ಕ್ಯಾಲಿಫೋರ್ನಿಯಾ, ದೆಹಲಿ, ಆಂಧ್ರ, ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಆದರೂ ತಾವು ಬಿಟ್ಟುಬಂದ ಊರಿನ ಪ್ರಸದುತ್ಥಾನಕ್ಕೆ ಸಹಾಯ ಮಾಡುವ ಮನಸ್ಥಿತಿಯುವರಾಗಿದ್ದಾರೆ. ಅವರಿಗೆ ತಕ್ಕ ವ್ಯಕ್ತಿ ನಾರಾಯಣಸ್ವಾಮಿಯವರು. ತಮ್ಮವರ ಉನ್ನತಿಯ ಪಟ್ಟಿ ಕೊಡುತ್ತ ಹೋದ ನಾರಾಯಣಸ್ವಾಮಿಯವರ ಮಾಹಿತಿ ಗ್ರಹಿಸಿದಂತೆ ನನಗೆ ಲಂಕೇಶರು "ತೆರೆಗಳು" ನಾಟಕದಲ್ಲಿ ದಾಖಲಿಸಿದ್ದ ಒಂದು ಸಾಲು ಜ್ಞಾಪಕಕ್ಕೆ ಬಂತು.

"ಜ್ಞಾನ, ನೀನು ಕೇಳಿದ ಕೂಡಲೇ ಸಿಗುವಂತದ್ದಲ್ಲ, ಅದೊಂದು ಜನಾಂಗದ, ಪರಂಪರಾಗತ, ಕೃಷಿಯಿಂದ ಬರುವಂತದ್ದು."

ಬಿಂಡಿಗನವಿಲೆ ಅಂಥದ್ದೊಂದು ಕೃಷಿ ಕ್ಷೇತ್ರವಾಗಿತ್ತು.

■ ಬಿ. ಚಂದ್ರೇಗೌಡ

ಟಿಪ್ಪು ಮಹಾತ್ಮನಿಗೆ ನೀಲ್ ಸಲಾಂ

ಹೈದರಾಲಿ 18ನೇ ಶತಮಾನದ ದ್ವಿತೀಯಾರ್ಧದಲ್ಲಿ ಮೈಸೂರು ರಾಜ್ಯವನ್ನು ಇಡೀ ದಕ್ಷಿಣ ಭಾರತಕ್ಕೆ ವಿಸ್ತರಿಸಿದ ಧೀರ ಪುರುಷ. ಆತನು ಕಟ್ಟಿದ ಮಹಾಸಂಸ್ಥಾನವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ ಭಾರತದ ಚರಿತ್ರೆಯಲ್ಲಿ ಮಹಾನ್ ದೇಶಭಕ್ತ ಮತ್ತು ಅಭಿವೃದ್ಧಿಯ ಹರಿಕಾರನಾಗಿ ಟಿಪ್ಪು ಸುಲ್ತಾನ್ ವಿಶೇಷ ಮಹತ್ವ ಹೊಂದಿದ್ದಾರೆ. ಇವರಿಬ್ಬರೂ ಕೂಡಿ ಅಂದು ಪರ್ಶಿಯನ್ ಸಾಮ್ರಾಜ್ಯದ ದೊರೆ ಜಮಾನ್ ಷಾ ಅವರೊಂದಿಗೆ ಅರ್ಥಪೂರ್ಣ ರಾಜತಾಂತ್ರಿಕ ಸಂಬಂಧ ಬೆಳೆಸಿ ಮೈಸೂರು ರಾಜ್ಯವನ್ನು ಮಾದರಿ ರಾಜ್ಯವನ್ನಾಗಿ ರೂಪಿಸಿದ್ದಾರೆ. ಹಿಂದೂ ಮೂಲಭೂತವಾದಿಗಳು ಅಂದು ಯೂರೋಪಿನ ವಸಾಹತುವಾದಿಗಳಿಗೆ ರತ್ನಗಂಬಳಿಯನ್ನು ಹಾಸಿ ಭಾರತವನ್ನು ಗುಲಾಮರ ರಾಷ್ಟ್ರವನ್ನಾಗಿ ಪರಿವರ್ತಿಸಿ ಇಂದು ದೇಶಾಭಿಮಾನದ ಬಗ್ಗೆ ಬೊಗಳೆ ಹೊಡೆಯುತ್ತಿದ್ದಾರೆ. ಹೈದರಾಲಿ ಮತ್ತು ಟಿಪ್ಪು ಫ್ರೆಂಚರ ಸಹಕಾರದಿಂದ ಬ್ರಿಟಿಷರನ್ನು ಮಣಿಸುವ ಯೋಜನೆಯನ್ನು ಮರಾಠರು ಬ್ರಿಟಿಷರೊಂದಿಗೆ ಕೈಜೋಡಿಸಿ ವಿಫಲಗೊಳಿಸಿದ ಬಗೆಯನ್ನು ಇತಿಹಾಸಕಾರರಾದ ಎನ್.ಕೆ.ಸಿನ್ಹ ಸಿ.ಹಯವದನರಾವ್ ಮೊದಲಾದವರು ಅಧಿಕೃತ ಮಾಹಿತಿಯೊಡನೆ ದಾಖಲಿಸಿದ್ದಾರೆ. ಆದರೆ ಇಂದು ಮರಾಠರು ತಾವು ಛತ್ರಪತಿ ಶಿವಾಜಿಯ ವಂಶಸ್ಥರು ಮತ್ತು ಮಹಾನ್ ರಾಷ್ಟ್ರೀಯವಾದಿಗಳೆಂದು ಅನವಶ್ಯಕವಾಗಿ ಬೀಗುತ್ತಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರ ನವೆಂಬರ್ 10ರಂದು ಮಹಾನ್ ದೇಶಭಕ್ತ ಟಿಪ್ಪು ಸುಲ್ತಾನರ ವಾರ್ಷಿಕ ಜಯಂತಿಯನ್ನು ಆಚರಿಸುತ್ತಿರುವುದು ಶ್ಲಾಘನೀಯ. ಮಹಾಪುರುಷರನ್ನು ಧರ್ಮ, ದೇಶ, ಜಾತಿ ಮೊದಲಾದ ಕಾರಣಗಳಿಗಾಗಿ ಪ್ರೀತಿಸುವುದು ಅಥವಾ ದ್ವೇಷಿಸುವುದು ತರವಲ್ಲ. ಮಹಾಪುರುಷರು ಮನುಕುಲದ ಒಳಿತಿಗಾಗಿ ವಿವಿಧ ಕಾಲಘಟ್ಟಗಳಲ್ಲಿ ದುಡಿದವರು. ಅವರನ್ನು ಸ್ಮರಿಸುವುದು ಮತ್ತು ಅನುಸರಿಸುವುದು ಮನುಕುಲದ ಒಳಿತಿಗೆ ಪೂರಕವಾಗಿದೆ. 'ಭಾರತವು ಭಾರತೀಯರಿಗಾಗಿ' ಎಂಬ ಘೋಷವಾಕ್ಯವನ್ನು ನೀಡಿ ಸಾಮ್ರಾಜ್ಯಶಾಹಿಗಳಿಗೆ ಸೆಡ್ಡು ಹೊಡೆದ ನಿಜವಾದ ಗಂಡುಗಲಿಯೆಂದರೆ ಟಿಪ್ಪು ಸುಲ್ತಾನ್. ಆದರೆ, ಇಂದು ಚಿದಾನಂದಮೂರ್ತಿ, ಪ್ರಮೋದ್ ಮುತಾಲಿಕ್, ಪೇಜಾವರ ಶ್ರೀ, ಚಕ್ರವರ್ತಿ ಸೂಲಿಬೆಲೆ, ಪ್ರತಾಪಸಿಂಹ ಮೊದಲಾದ ಹಿಂದೂ ಮೂಲಭೂತವಾದಿಗಳು ಟಿಪ್ಪುವಿನ ಕೊಡುಗೆ ಮತ್ತು ತ್ಯಾಗಗಳನ್ನು ಲಘುವಾಗಿ ಪರಿಗಣಿಸಿ ಆತನ ಜನ್ಮದಿನವನ್ನು ಆಚರಿಸಿದರೆ ಕರ್ನಾಟಕದಲ್ಲಿ ರಕ್ತಪಾತವಾಗುತ್ತದೆಯೆಂದು ಬೊಬ್ಬೆ ಹೊಡೆಯುತ್ತಿರುವುದು ಭಾರತದ ಚರಿತ್ರೆ ಮತ್ತು ಶ್ರೇಷ್ಠ ದೇಶಭಕ್ತ ಟಿಪ್ಪುವಿಗೆ ಬಗೆಯುತ್ತಿರುವ ಬಹುದೊಡ್ಡ ದ್ರೋಹವಾಗಿದೆ. ಭಾರತದ ಬಹುಜನರು ಇಂತಹ ಅಲ್ಪಸಂಖ್ಯಾತ ಹಿಂದೂ ಮೂಲಭೂತವಾದಿಗಳ ಬೆದರಿಕೆಗೆ ಯಾವುದೇ ಮಹತ್ವ ನೀಡುವುದಿಲ್ಲ.

ಹಿರಿಯ ರಾಜತಂತ್ರಜ್ಞ ಮಣಿಶಂಕರ್ ಅಯ್ಯರ್ "ಮುಸ್ಲಿಮರಿಲ್ಲದ ಭಾರತ ಮತ್ತು ಭಾರತವಿಲ್ಲದೆ ಮುಸ್ಲಿಮರು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ" ಎಂದು ಹೇಳಿರುವ ಮಾತುಗಳು ಅರ್ಥಪೂರ್ಣವಾಗಿವೆ. ಮುಸ್ಲಿಮರು ಆರ್ಯರಂತೆ ಹೊರಗಿನಿಂದ ಬಂದು ಮೂಲನಿವಾಸಿಗಳನ್ನು ತುಳಿದವರಲ್ಲ, ಅವರು ಈ ದೇಶದ ನಿಜವಾದ ಮಣ್ಣಿನ ಮಕ್ಕಳು. ಅಸ್ಪೃಶ್ಯತೆಯ ಕಾಟವನ್ನು ತಡೆಯಲಾರದೆ ಬಂಡಾಯದ ಸಂಕೇತವಾಗಿ ಅಂದಿನ ದಲಿತರು ಅನಿವಾರ್ಯವಾಗಿ ಮಧ್ಯಯುಗದಲ್ಲಿ ರಾಜ್ಯಧರ್ಮವಾಗಿದ್ದ ಇಸ್ಲಾಂ ಧರ್ಮವನ್ನು ಪ್ರೀತಿಯಿಂದ ಅಪ್ಪಿಕೊಂಡರು. ಇಂದಿನ ಸಿದ್ದಯ್ಯ ಸಿರಾಜುದ್ದೀನ್, ಮಾದಯ್ಯ ಮುನಾವರ್, ರಾಚಯ್ಯ ರಜಾಕ್, ಅಣ್ಣಯ್ಯ ಅಹಮದ್, ಕಾಳಯ್ಯ ಕಲೀಂ ಹೀಗೆ ಹೊಸ ಹೆಸರುಗಳನ್ನು ಪಡೆದು ನೆಮ್ಮದಿಯಿಂದ ಬದುಕಿದರು. ದಲಿತರು ಮತ್ತು ಮುಸಲ್ಮಾನರು ಒಂದೇ ನಾಣ್ಯದ ಎರಡು ಮುಖಗಳು ಎಂಬುದನ್ನು ಹಿಂದೂ ಮೂಲಭೂತವಾದಿಗಳು ಅರಿಯಬೇಕು. ಮುಸಲ್ಮಾನರ ನಾಯಕ ಟಿಪ್ಪು ಮತ್ತು ದಲಿತರ ನಾಯಕ ಬಾಬಾ ಸಾಹೇಬ್ ಇಬ್ಬರೂ ಕೂಡ ನೂತನ ಸಹಸ್ರಮಾನದಲ್ಲಿ ಭಾರತವನ್ನು ಮುನ್ನಡೆಸಲಿದ್ದಾರೆ ಎಂಬ ಕನಿಷ್ಠ ಪ್ರಜ್ಞೆ ಮಾಜಿ ಆರ್ಯರು ಮತ್ತು ಹಾಲಿ ಹಿಂದೂ ಮೂಲಭೂತವಾದಿಗಳಿಗೆ ಇತಿಹಾಸದ ಪ್ರಜ್ಞೆ ಇಲ್ಲದಿರುವುದರಿಂದ ದಲಿತರು, ಮುಸಲ್ಮಾನರು ಮತ್ತು ಮೂಲನಿವಾಸಿಗಳನ್ನು ಕಡೆಗಣಿಸಿ ತಮ್ಮ ಗೋರಿಯನ್ನು ತಾವೇ ತೋಡಿಕೊಳ್ಳುತ್ತಿರುವುದು ವಿಪರ್ಯಾಸ.

ಟಿಪ್ಪು ಸುಲ್ತಾನ್ ಎಂದಿಗೂ ಹಿಂದೂ ಧರ್ಮೀಯರ ವಿರೋಧಿಯಲ್ಲ. ಹಿಂದೂ-ಮುಸಲ್ಮಾನರ ನಡುವೆ ಸ್ನೇಹ ಸೌಹಾರ್ದತೆಗಳನ್ನು ಟಿಪ್ಪು ಬೆಳೆಸಿದ್ದಕ್ಕೆ ಅನೇಕ ಐತಿಹಾಸಿಕ ನಿದರ್ಶನಗಳಿವೆ. ಟಿಪ್ಪು ಹಿಂದೂಗಳ ವಿರೋಧಿಯಾಗಿದ್ದರೆ ಶೃಂಗೇರಿಯ ಶಂಕರಮಠ, ಮೇಲುಕೋಟೆಯ ಚಲುವನಾರಾಯಣ ದೇಗುಲ, ನಂಜನಗೂಡಿನ ಶ್ರೀಕಂಠೇಶ್ವರ ದೇಗುಲ, ಶ್ರೀರಂಗಪಟ್ಟಣದ ರಂಗನಾಥ ದೇಗುಲ ಮೊದಲಾದವುಗಳನ್ನು ಅಭಿವೃದ್ಧಿಪಡಿಸಲು ನೈತಿಕ ಬಲ ಮತ್ತು ಆರ್ಥಿಕ ನೆರವುಗಳನ್ನು ಉದಾರವಾಗಿ ನೀಡುತ್ತಿರಲಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿಯೇ 'ಉಳುವವನೇ ಭೂಮಿಯ ಒಡೆಯ' ಎಂಬ



ನೀತಿಯನ್ನು ಜಾರಿಗೆ ತಂದು ಬಹುಸಂಖ್ಯಾತ ಹಿಂದೂ ಕೃಷಿಕರಿಗೆ ಬದುಕನ್ನು ಕಟ್ಟಿಕೊಡುತ್ತಿರಲಿಲ್ಲ. ಕನ್ನಂಬಾಡಿ ಅಣೆಕಟ್ಟೆ ನಿರ್ಮಾಣ ಟಿಪ್ಪುವಿನ ಕನಸಿನ ಕೂಸಾಗಿತ್ತು, ಕೃಷಿ ಆಧುನಿಕರಣಕ್ಕೆ ಟಿಪ್ಪು ನೀಡಿದ ಕೊಡುಗೆ ಅನನ್ಯವಾದುದು. ರೇಷ್ಮೆ ಕೃಷಿಯನ್ನು ಭರತ ಖಂಡದಲ್ಲಿ ಮೊದಲು ಪರಿಚಯಿಸಿದವರು ಟಿಪ್ಪು. ಯೂರೋಪಿನ ವಸಾಹತುಶಾಹಿಯನ್ನು ಮಣಿಸಲು ರಾಕೆಟ್ ತಂತ್ರಜ್ಞಾನವನ್ನು ಮೈಸೂರು ರಾಜ್ಯದಲ್ಲಿ ಅಭಿವೃದ್ಧಿಪಡಿಸಿದವರು ಟಿಪ್ಪು. ಕೇರಳದ ದಲಿತ ಹೆಣ್ಣುಮಕ್ಕಳು ಮೇಲ್ಜಾತಿ ಪ್ರಭುತ್ವದ ಫರ್ಮಾನಿನಿಂದಾಗಿ ತೆರೆದ ಎದೆಯಲ್ಲಿ ಸಾರ್ವಜನಿಕವಾಗಿ ತಿರುಗಾಡುವ ಅಮಾನವೀಯ ಪದ್ಧತಿಯನ್ನು ನಿಲ್ಲಿಸಿದವರು ಟಿಪ್ಪು. ಹಿಂದೂ ಧಾರ್ಮಿಕ ವ್ಯವಸ್ಥೆಯಿಂದ ನಲುಗಿದ ದಲಿತರಿಗೆ ಸ್ವಇಚ್ಛೆಯಿಂದ ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಲು ಅವಕಾಶ ನೀಡಿದವರು ಟಿಪ್ಪು. ಮತಾಂತರದ ಹಿಂದೆ ಇರುವ ಅಸ್ಪೃಶ್ಯತೆ, ತಾರತಮ್ಯ ಮತ್ತು ಶೋಷಣೆಗಳ ಅರಿವಿರುವ ಹಿಂದೂ ಮೂಲಭೂತವಾದಿಗಳು ಟಿಪ್ಪುವನ್ನು ಬಲಾತ್ಕಾರವಾಗಿ ಇಸ್ಲಾಂ ಧರ್ಮಕ್ಕೆ ಹಿಂದೂಗಳನ್ನು ಕರೆತಂದನೆಂದು ಜರಿಯುವುದು ಅಸಮರ್ಥನೀಯ. ಕನ್ನಡ ಭಾಷೆಯನ್ನು ವ್ಯಾವಹಾರಿಕ ಮತ್ತು ಆಡಳಿತ ಭಾಷೆಯನ್ನಾಗಿ ಬೆಳೆಸಿದ ಟಿಪ್ಪು ಯಾವುದೇ ಕಾರಣಕ್ಕೂ ಕನ್ನಡಿಗರ ವಿರೋಧಿಯಲ್ಲ.

ಕನ್ನಡದ ಇತಿಹಾಸ ವಿದ್ವಾಂಸ ಬಿ.ಮುದ್ದಾಚಾರಿ "ದಕ್ಷಿಣ ಭಾರತದ ಅತ್ಯಂತ ಪ್ರಮುಖ ವ್ಯಕ್ತಿಗಳಲ್ಲಿ ಟಿಪ್ಪು ಸುಲ್ತಾನ್ ಒಬ್ಬರಾಗಿದ್ದರು. ಮೈಸೂರು ಸಂಸ್ಥಾನ ಮತ್ತು ಪರ್ಶಿಯಾ ಸಂಸ್ಥಾನಗಳೊಂದಿಗೆ ರಾಜತಾಂತ್ರಿಕ ಸಂಬಂಧ ಏರ್ಪಡಿಸಿ ರಾಜ್ಯದ ಅಭಿವೃದ್ಧಿಗೆ ಟಿಪ್ಪು ನೀಡಿದ ಕೊಡುಗೆಗಳಿಂದಾಗಿ ಅವರು ಭಾರತದ ಶ್ರೇಷ್ಠ ರಾಜತಾಂತ್ರಿಕರಲ್ಲಿ ಒಬ್ಬರಾಗಿದ್ದಾರೆ" ಎಂದು ಪ್ರಶಂಶಿಸಿದ್ದಾರೆ. ಟಿಪ್ಪು ಮಧ್ಯಪ್ರಾಚ್ಯ ದೇಶಗಳ ರಾಜರಿಗೆ ಭಾರತದಲ್ಲಿ ಕೈಗಾರಿಕೆಗಳ ಸ್ಥಾಪನೆ, ವಾಣಿಜ್ಯ ಸಂಪರ್ಕ, ಮಿಲಿಟರಿ ಬಲವರ್ಧನೆ, ಸಾಮಾಜಿಕ ಪರಿವರ್ತನೆ ಮೊದಲಾದ ಕ್ರಮಗಳನ್ನು ಕೈಗೊಂಡು ರಾಜ್ಯದ ಆರ್ಥಿಕ ಪ್ರಗತಿಗೆ ಬುನಾದಿ ಹಾಕಿದರೆಂದು ಮತ್ತೊರ್ವ ಇತಿಹಾಸಕಾರ ಎ.ಕೆ.ಶಾಸ್ತ್ರಿ ದಾಖಲಿಸಿದ್ದಾರೆ. ಸಮಕಾಲೀನ ಶ್ರೇಷ್ಠ ಇತಿಹಾಸಕಾರ ಬಿ.ಶೇಕ್ ಅಲಿ "ಟಿಪ್ಪು ನೆರೆಹೊರೆಯ ರಾಜರುಗಳ ದೇಶವಿರೋಧಿ ಕೃತ್ಯಗಳನ್ನು ಉಗ್ರವಾಗಿ ಖಂಡಿಸಿ ಯೂರೋಪಿನ ಸಾಮ್ರಾಜ್ಯಶಾಹಿಗಳ ಹುನ್ನಾರಗಳನ್ನು ವಿಫಲಗೊಳಿಸಿ ಮೈಸೂರು ರಾಜ್ಯವನ್ನು ಒಂದು ಮಾದರಿ ರಾಜ್ಯವನ್ನಾಗಿ ಆಡಳಿಸಿ ದುಡಿದು ಕಟ್ಟಿದ ಅಪ್ಪಟ ದೇಶಪ್ರೇಮಿ" ಎಂದು ಬಣ್ಣಿಸಿದ್ದಾರೆ.

ಮಹಾನ್ ಹಿಂದೂವೆಂದು ಕೊಚ್ಚಿಕೊಳ್ಳುವ ದೇಶದ್ರೋಹಿ ಮತ್ತು ಬ್ರಿಟಿಷರ ಅಪ್ಪಟ ಗುಲಾಮ ದಿವಾನ್ ಪೂರ್ಣಯ್ಯನ ಪಳೆಯುಳಿಕೆಗಳು ಇಂದು ಟಿಪ್ಪುವನ್ನು ಖಂಡಿಸುತ್ತಿರುವುದಕ್ಕೆ ಯಾವುದೇ ಆಧಾರಗಳಿಲ್ಲ. ಮೈಸೂರಿನ ಯದುವಂಶದ ರಾಜರು ಬ್ರಿಟಿಷರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಅರಮನೆಯಲ್ಲಿ ಸುಖವಾಗಿ ಬದುಕಿದರು. ಇವರಲ್ಲಿ ಸರ್ವಜನಾಂಗದ ಅಭ್ಯುದಯಕ್ಕೆ ಶ್ರೇಷ್ಠ ಕೊಡುಗೆಗಳನ್ನು ನೀಡಿದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಾತಃ ಸ್ಮರಣೀಯರು. ಆದರೆ ಟಿಪ್ಪು ಅಧಿಕಾರಕ್ಕೋಸ್ಕರ ಬ್ರಿಟಿಷರೊಡನೆ ಯಾವುದೇ ರೀತಿಯ ಅನೈತಿಕ ಹೊಂದಾಣಿಕೆ ಮಾಡಿಕೊಳ್ಳದೇ ತನ್ನ ಸಂಸ್ಥಾನ, ಮಕ್ಕಳು ಮತ್ತು ಜೀವವನ್ನು ರಣಧೀರನಂತೆ ಹೋರಾಡಿ ತ್ಯಾಗ ಮಾಡಿದರು. ಭಾರತದ ಇತಿಹಾಸದಲ್ಲಿ ಸಾಮ್ರಾಜ್ಯಶಾಹಿಯನ್ನು ಧಿಕ್ಕರಿಸಿ ಅಪ್ಪಟ ದೇಶಪ್ರೇಮಿಯಾಗಿ ವೀರಮರಣವನ್ನು ಅಪ್ಪಿದ ಟಿಪ್ಪುವನ್ನು ಟೀಕಿಸುವ ಅಲ್ಪಸಂಖ್ಯಾತ ಹಿಂದೂ ಮೂಲಭೂತವಾದಿಗಳು ಅಸಲಿ ದೇಶದ್ರೋಹಿಗಳು.

ದಕ್ಷಿಣ ಭಾರತ ಮತ್ತು ಮಧ್ಯಪ್ರಾಚ್ಯ ದೇಶಗಳ ನಡುವೆ ಟಿಪ್ಪುವಿನ ಕಾಲದಲ್ಲಿ ಗಣನೀಯ ವ್ಯಾಪಾರ ಸಂಬಂಧ ಉಂಟಾಗಿ ದೇಶೀಯ ಆರ್ಥಿಕತೆ ಅಭಿವೃದ್ಧಿಗೆ ಸಹಕಾರಿಯಾಯಿತು. ಫ್ರಾನ್ಸ್, ಟರ್ಕಿ, ಇರಾನ್, ಅಫ್ಘಾನಿಸ್ತಾನ ಮೊದಲಾದ ದೇಶಗಳೊಂದಿಗೆ ಸೇರಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಪರ್ಯಾಯ ರಾಜಕೀಯ ಪಡೆಯೊಂದನ್ನು ನಿರ್ಮಿಸಿದ ಟಿಪ್ಪು ಬ್ರಿಟಿಷರ ಪಾಲಿಗೆ ನುಂಗಲಾರದ ತುತ್ತಾಗಿದ್ದರು. ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡಿ ಭಾರತದ ಸಾರ್ವಭೌಮತ್ವ ರಕ್ಷಣೆಗೆ ಟಿಪ್ಪು ತನ್ನ ಪ್ರಾಣವನ್ನೆ ತ್ಯಾಗ ಮಾಡಿದರು ಎಂಬುದಕ್ಕೆ ಭಾರತದ ವಿವಿಧೆಡೆ ಇರುವ ಪುರಾತತ್ವ ದಾಖಲಾತಿಗಳು ಅಮೂಲ್ಯ ಸಾಕ್ಷಿಗಳಾಗಿದೆ. ಸ್ವತಃ ಟಿಪ್ಪು ವಿವಿಧ ದೇಶಗಳ ನಾಯಕರು ಮತ್ತು ಭಾರತೀಯ ರಾಜರುಗಳೊಂದಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಮಣಿಸುವ ಕಾರ್ಯತಂತ್ರಗಳನ್ನು ಚರ್ಚಿಸಿದ್ದರ ಬಗ್ಗೆ ಅನೇಕ ಪತ್ರ ವ್ಯವಹಾರಗಳು ಪುರಾತತ್ವ ಇಲಾಖೆಗಳಲ್ಲಿ ಇಂದಿಗೂ ಲಭ್ಯವಿವೆ.

ಭಾರತದ ಪ್ರಜ್ಞಾವಂತರು, ಇತಿಹಾಸಕಾರರು, ಸಾಹಿತಿಗಳು ಮತ್ತು ಪ್ರಗತಿಶೀಲರು ಇಂದು ಟಿಪ್ಪುವಿನ ಆದರ್ಶವನ್ನು ಹೃದಯಪೂರ್ವಕವಾಗಿ ಗೌರವಿಸುತ್ತಾರೆ. ಯಾರೋ ಕೆಲವು ಕಿಡಿಗೇಡಿಗಳು ಟಿಪ್ಪುವನ್ನು ನಿಂದಿಸಿದರೆ ಬಹುಜನರು ಸುಮ್ಮನಿರುವುದಿಲ್ಲ. ನೂತನ ಸಹಸ್ರಮಾನದಲ್ಲಿ ಬಹುಸಂಖ್ಯಾತ ದಲಿತರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದವರು ಬುದ್ಧ ಮಹಾವೀರ, ಬಸವ, ಕಬೀರ, ಟಿಪ್ಪು, ಫುಲೆ, ಅಂಬೇಡ್ಕರ್, ಪೆರಿಯಾರ್, ನಾರಾಯಣ ಗುರು, ಲೋಹಿಯಾ, ಕುವೆಂಪು ಮೊದಲಾದ ಮಹಾನ್ ದೇಶಭಕ್ತರು ಮತ್ತು ಸಾಮಾಜಿಕ ನ್ಯಾಯಪರ ಚಿಂತಕರ ಆದರ್ಶಗಳಿಂದ ಪ್ರೇರೇಪಿತರಾಗಿ 'ಮಾನವ ಮಂಟಪ' ನಿರ್ಮಿಸಿ ಭಾರತವನ್ನು ಪ್ರಬುದ್ಧ ಭಾರತವನ್ನಾಗಿ ಜಾಗತೀಕರಣ ಯುಗದಲ್ಲಿ ಬೆಳೆಸುವುದು ಅತ್ಯವಶ್ಯಕ. ಮಾಧ್ಯಮಗಳೂ ಸಹ ಅಗ್ರಹಾರಗಳಾಗಿ ಉಳಿಯದೇ ಅನುಭವಮಂಟಪಗಳಾಗಿ ಸಕ್ರಿಯವಾಗಿ ಕಾರ್ಯನಿರ್ವಹಿಸಿ ಮೂಲಭೂತವಾದದೆಡೆಯಿಂದ ಮಾನವತಾವಾದದೆಡೆಗೆ ಭಾರತವನ್ನು ಮುನ್ನಡೆಸುವುದು ಇಂದು ಔಚಿತ್ಯಪೂರ್ಣವಾಗಿದೆ. ಮಹಾನ್ ಮಾನವತಾವಾದಿ, ಧರ್ಮನಿರಪೇಕ್ಷತೆಯ ಪ್ರತಿಪಾದಕ, ಅಭಿವೃದ್ಧಿಯ ಹರಿಕಾರ, ಶ್ರೇಷ್ಠ ದೇಶಭಕ್ತ ಟಿಪ್ಪು ಅವರು ನಿಜಕ್ಕೂ ಮಹಾತ್ಮರು. ಅವರ ಜಯಂತಿಯನ್ನು ಇಡೀ ದೇಶದಲ್ಲಿ ಆಚರಿಸಿ ಅವರ ಬದುಕು, ಹೋರಾಟ ಮತ್ತು ಸಂದೇಶಗಳನ್ನು ಇಂದಿನ ಪೀಳಿಗೆಗೆ ತಲುಪಿಸುವುದು ಅತ್ಯಂತ ಆರೋಗ್ಯಕರ ಕೆಲಸವಾಗಿದೆ. ಈ ಹಿನ್ನೆಲೆಯಲ್ಲಿ ಮಹಾತ್ಮ ಟಿಪ್ಪುವಿಗೆ ನೀಲ್ ಸಲಾಂ (ದಲಿತರ ಸಬಲೀಕರಣದ ಸಂಕೇತ) ಎನ್ನಲು ನನಗೆ ಬಹಳ ಹೆಮ್ಮೆ ಎನಿಸುತ್ತದೆ.

■ ಪ್ರೊ.ಬಿ.ಪಿ.ಮಹೇಶಚಂದ್ರ ಗುರು

ಕಂದಕಕ್ಕೆ ಬಿದ್ದ ಚೆಡ್ಡಿಗಳ ಕನಕ ನಡ

ಇದು ನಿರೀಕ್ಷಿತ. ಆದರೆ ಈ ಮಟ್ಟದ ಉರಿ ತರಿಸುತ್ತದೆಂದು ಮಾತ್ರ ಯಾರೂ ನಿರೀಕ್ಷಿಸಿದ್ದಿರಲಿಲ್ಲ. ಉಡುಪಿ ಚಲೋ ಜಾಥಾ ಆರಂಭವಾಗೋ ಮುನ್ನವೇ ಪುರೋಹಿತಶಾಹಿ ಮನಸ್ಸುಗಳ ಕುತಂತ್ರಿ ಬುದ್ಧಿ ಜಾಥಾವನ್ನು ಹಾಳುಗೆಡವಲು ದೊಡ್ಡ ಸಂಚನ್ನೇ ರೂಪಿಸಿದ್ದವು. ಚಳವಳಿಯಲ್ಲಿ ಭಾಗವಹಿಸುವ ಮುಸಲ್ಮಾನರನ್ನು ಭಯೋತ್ಪಾದಕರೆಂದು, ಕಮ್ಯುನಿಸ್ಟ್ ಪರ ಸಿದ್ಧಾಂತಿಗಳನ್ನು ನಕ್ಸಲೈಟ್ ಅಥವ ಚೀನಾದ ಚೇಲಾಗಳೆಂದು ಬೊಬ್ಬೆ ಹೊಡೆದು ಇವರೊಂದಿಗಿನ ಸ್ನೇಹ ದಲಿತರ ಅಧಃಪತನಕ್ಕೆ ಸಾಕ್ಷಿಯೆಂದು ಬಿಂಬಿಸಿದವು. ಆದರೆ ಅವ್ಯಾವ ತಂತ್ರವೂ ಫಲಿಸದೇ ಚಳವಳಿ ಯಶಸ್ವಿಯಾದಾಗ ಈ ಮೊದಲೇ ಜಾಥಾವನ್ನು

Chakravarthy Mithun

Let us join in big numbers to clean Udupi.
#ChinaChelas break us in the name of caste, creed and gender. But we unite everyone just with one mantra #NationFirst
#ಕನಕ_ನಡೆ

ಅವರು ನೂರು ಜಾತಿ ಒಡೆಯಲಿ,
ನಾವು ಸಾವಿರ ಜಾತಿ ಕಟ್ಟೋಣ!
ಜಾತಿ, ಮತ, ಪಂಥಗಳ ಹೆಸರಲ್ಲಿ ಮತ್ತೆ ಮತ್ತೆ
ದೇಶವನ್ನು ಒಡೆದು, ಗಡಿ ಕಾಯುವ ಸೈನಿಕರನ್ನು
ಸದಾ ಅವಮಾನಿಸುವ ಎಡಪಂಥೀಯರು
ಉಡುಪಿಗೆ ಹೊರಟಿದ್ದಾರೆ.
ಭಾರತವನ್ನು ಚೂರು ಚೂರು ಮಾಡುವ ಚೀನಾದ
ತಾಳಕ್ಕೆ ಕುಣಿದು ಉಡುಪಿಯ ಸ್ವಾಸ್ಥ್ಯ ಕೆಡಿಸು-
ತ್ತಿರುವ ಈ ಎಡಪಡೆಯ ವಿರುದ್ಧ
ನಮ್ಮದೊಂದು ಆರೋಗ್ಯಪೂರ್ಣ ಕೂಗು..
ಸ್ವಚ್ಛ ಉಡುಪಿ!
23 ಭಾನುವಾರ ಬೆಳಗ್ಗೆ 9 ರಿಂದ.

ಹಳಿಯುವ ಉದ್ದೇಶದಿಂದ ಆಯೋಜಿಸಲು ಯೋಜಿಸಿದ ಕನಕ ನಡೆಯೆಂಬ ಚೆಡ್ಡಿ ಕಾರ್ಯಕ್ರಮದಲ್ಲಿ "ಸೈನಿಕರನ್ನು ಸದಾ ಅವಮಾನಿಸುವ (?) ಎಡ ಪಂಥೀಯರು ಉಡುಪಿಗೆ ಹೊರಟಿದ್ದಾರೆ. ಚೀನಾದ ತಾಳಕ್ಕೆ ಕುಣಿಯುವ ಈ ಎಡಪಡೆಯ ವಿರುದ್ಧ ನಮ್ಮ ಕೂಗಿದು" ಎಂದು ದಲಿತರ ಸ್ವಾಭಿಮಾನವನ್ನೇ ಅವಮಾನಿಸಿದರು.

ಈ ವೈದಿಕ ಚೆಡ್ಡಿಗಳ ಮಸಲತ್ತು ಹೇಗಿರುತ್ತವೆ ನೋಡಿ. ಅವರ ಕಾರ್ಯಕ್ರಮ ನಿಗದಿಪಡಿಸಿದ 23ರ ತಾರೀಖಿನವರೆಗೆ ಟಿವಿಯೊಂದರಲ್ಲಿ (ನೂರ್ ಶ್ರೀಧರ್ ಹಾಗು ಚೇತನಾ ತೀರ್ಥಹಳ್ಳಿಯವರನ್ನು ಖಿಡ್ವಾಕ್ಕೆ ಕೆಡವಿ ಬೇಳೆ ಬೇಯಿಸಿಕೊಂಡ ಕುಖ್ಯಾತಿಯ ಚಾನೆಲ್) ಪ್ರೈಮ್ ಟೈಮ್‌ನಲ್ಲಿ ಪ್ರಸಾರವಾಗುವಂತೆ 'ಕಮ್ಯುನಿಸ್ಟ್ ಕಗ್ಗೊಲೆಗಳು' ಎಂಬ ಕಾರ್ಯಕ್ರಮ ಪ್ರಸಾರ ಪ್ರತಿದಿನ ಮಾಡಲಾಯಿತು. ಈ "ಕಗ್ಗೊಲೆ" ಕಾರ್ಯಕ್ರಮದ ಮುಖ್ಯ ಸಂಪನ್ಮೂಲ ವ್ಯಕ್ತಿ ವೃದ್ಧ ತಂದೆ ತಾಯಿ ಹಾಗು ಅವಿವಾಹಿತ ಸೋದರಿಯರಿಗೆ ಏಕೈಕ ಆಸರೆಯಾಗಿದ್ದ ಸ್ವಜಾತಿಯ ವಿನಾಯಕ ಬಾಳಿಗಾರನ್ನು ಕ್ರೂರವಾಗಿ ಕೊಲೆಗೈದು ತಿಂಗಳುಗಟ್ಟಲೆ ತಪ್ಪಿಸಿಕೊಂಡು ಕೊನೆಗೆ ಜೈಲುಪಾಲಾದ ಆ ವ್ಯಕ್ತಿಯನ್ನು ಸ್ವಾತಂತ್ರ್ಯ ಹೋರಾಟಗಾರನಂತೆ ಸ್ವಾಗತಿಸಿ ಕರೆತಂದಂತಹ ಮಹಾನುಭಾವ. ಅಷ್ಟೇ ಯಾಕೆ, ಈತ ಹಲವಾರು ಹೆಣ್ಣುಗಳ ಸೆರಗಿಗೆ ಕೈಹಾಕಿ ಕೇಸ್ ಎದುರಿಸಿ ನೈತಿಕತೆ ಕಳಕೊಂಡಿರುವ ಸ್ವಾಮಿಯೊಬ್ಬನ ವಕಾಲತ್ತುಗಾರನೂ ಹೌದು.

ಅಂತೂ ಜಿಲ್ಲಾಧಿಕಾರಿಗಳ ಆದೇಶ ಉಲ್ಲಂಘಿಸಿ ಉಡುಪಿಯ ರಥಬೀದಿಯಲ್ಲಿ ಕನಕ ನಡೆಯೆಂಬ ಪ್ರಹಸನವನ್ನಂತೂ ಚೆಡ್ಡಿಗಳು ಮುಖವುಳಿಸಿಕೊಳ್ಳುವ ಸಲುವಾಗಿ ನಡೆಸೇಬಿಟ್ಟರು. ಉಡುಪಿಯನ್ನು ನೀಲಿಮಯವನ್ನಾಗಿಸಿದ ದಲಿತ ಕೇಂದ್ರಿತ ಉಡುಪಿ ಚಲೋಗೆ ಟಾಂಗ್ ನೀಡಲು ತಾವೇನೂ ಕಮ್ಮಿಯಿಲ್ಲ ಎಂಬ ಸೋಗಿಗಾಗಿ ಕಾರ್ಯಕ್ರಮದಲ್ಲಿ ದಲಿತ ಪೌರ ಕಾರ್ಮಿಕರನ್ನು ನಾಟಕೀಯವಾಗಿ ಸನ್ಮಾನಿಸಲಾಯಿತು. ಆದರೆ ಮಠಕ್ಕೆ ಕಾರ್ಯಕ್ರಮಕ್ಕೋಸ್ಕರ ದುಡ್ಡುಕೊಟ್ಟು ಕರೆತಂದ ಬೆರಳೆಣಿಕೆ ದಲಿತರನ್ನು ಮಧ್ವ ಸರೋವರವೇ ಮೊದಲಾದ "ಪವಿತ್ರ" ಸ್ಥಳಗಳಿಗೆ ಹೋಗಲು ಬಿಡದೇ ಹಾದಿಯ ಸ್ವಚ್ಛತೆಗಷ್ಟೇ ಅವರನ್ನು ಬಿಡಲಾಯಿತು. ತಿಂಗಳ ಮೊದಲೇ ದಲಿತರ ಉಡುಪಿ ಚಲೋ ಜಾಥಾ ನಡೆದ ಬೀದಿ ಸ್ವಚ್ಛದ ಪತ್ರಿಕಾ ಫೋಟೊ ಪೋಸುಗಳಿಗೆಂದು ಮುಂಗಡ ನೀಡಲಾಗಿದ್ದ ಕೆಲ ತಿರಬೋಕಿ ಸಾಬರು ಹಾಗು ಕ್ರಿಶ್ಚಿಯನ್ನರುಗಳಿಗೆ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವಿರುವ ಕಾರಣ (ಕಳೆದ ಬಾರಿ ಬಿಜೆಪಿ ಸರಕಾರವಿದ್ದಾಗ ನಿರಾಯುಧರಾಗಿ ಚಳವಳಿ ನಡೆಸುತಿದ್ದ ಕಮ್ಯುನಿಸ್ಟ್‌ರ ಮೇಲೆ ಪೊಲೀಸರು ದಾಳಿ ಮಾಡಿ ತಲೆ ಒಡೆದಿದ್ದರು) ರಿಸ್ಕ್ ಬೇಡವೆಂದು ರಥ ಬೀದಿಗೆ ನೋ ಎಂಟ್ರಿ ಎಂದು ಹೇಳಿ ನೂರು ನೂರೈವತ್ತು ಮತಾವಲಂಬಿ ಜನರೊಂದಿಗೆ ಕನಕನಡೆ ಅಂಥಾ ಭಾಷಣ ಪಾಷಾಣಗಳಿಲ್ಲದೇ ಪರಿಸಮಾಪ್ತಿಗೊಂಡಿತು. ಇಷ್ಟೆಲ್ಲ ಹೈಡ್ರಾಮಾ ನಿಜಕ್ಕೂ ನಿಮಗೆ ಬೇಕಿತ್ತೇ? ಎಂದು ಚೆಡ್ಡಿಗಳ ಕುರಿತಾಗಿ ಜನರೇ ಈಗ ಉಗಿಯುವಂತಾಗಿದೆ.

- ಪ್ರಸಾದ್, ಮಂಗಳೂರು

ಮಧ್ವ ನಡೆಯ ಹಿಂದೆ ವಿಚಿತ್ರ ಸಿದ್ಧಾಂತಿಗಳು

ಬೌದ್ಧ ಮತ ತನ್ನ ಜನಾನುರಾಗಿ ಸಂದೇಶಗಳಿಂದ ರಾಜಾಶ್ರಯ ಪಡೆದು ಜನಮನವನ್ನು ವ್ಯಾಪಿಸುತ್ತಿದ್ದಾಗ ಬ್ರಾಹ್ಮಣ ಕೇಂದ್ರಿತ ವೈದಿಕ ಧರ್ಮ ಇಡೀ ಭಾರತದಲ್ಲಿ ದಿನೇದಿನೇ ಅವನತಿಯ ಕಡೆಗೆ ಮುಖ ಮಾಡಿ ಕುಸಿಯುತಿತ್ತು. ಅಂತಹ ಸಂದರ್ಭದಲ್ಲಿ ಅದನ್ನು ಮರಳಿ ಪ್ರತಿಷ್ಠಾಪಿಸಿ ಬ್ರಾಹ್ಮಣೋದ್ಧಾರಕ್ಕಾಗಿ ಜೀವನಪರ್ಯಂತ ಒದ್ದಾಡಿ ಅದಕ್ಕಾಗಿ ಪಣ ತೊಟ್ಟವ ಮಧ್ಯ ಏಶಿಯಾದ ಆರ್ಯ ಮೂಲ ಚಹರೆಯನ್ನು ತಕ್ಕಮಟ್ಟಿಗೆ ಉಳಿಸಿಕೊಂಡ ಉತ್ತರ ಭಾರತೀಯ ಬ್ರಾಹ್ಮಣನಲ್ಲ, ಬದಲಿಗೆ, ದಕ್ಷಿಣದ ತುತ್ತತುದಿಯ ಕಾಲಟಿ ಎಂಬಲ್ಲಿ ಹುಟ್ಟಿದ ಶಂಕರಾಚಾರ್ಯನೆಂಬ ಬೆರಕೆ ಕರಿ ಬ್ರಾಹ್ಮಣ. ಬಾಂಬೆಯಲ್ಲಿ ಹೊರಗಿನ (ನಮ್ಮ ದೇಶದವರೇ ಆದರೂ) ಜನ ಜಾಸ್ತಿಯಾಗಿದ್ದಾರೆ; ಬಾಂಬೆಯಲ್ಲಿ ಬರುವವರು ಇಲ್ಲೇ ಸೆಟಲ್ ಆಗದಂತೆ ಬರುವವರಿಗೆ ನಿಗದಿತ ಅವಧಿಯ ವೀಸಾ (ಅವದಿ ಮುಗಿದಾಕ್ಷಣ ಜಾಗ ಖಾಲಿ ಮಾಡುವಂತಿರುವ) ಪದ್ಧತಿ ಜಾರಿ ಮಾಡಬೇಕು; ಈ ಉತ್ತರ ಪ್ರದೇಶಿಗರು ಕಳ್ಳರು, ಬಿಹಾರಿಗಳು ಕೊಳಕರು (ಏಕ್ ಬಿಹಾರಿ ಸೌ ಬಿಮಾರಿ) ಎಂದು ನಮ್ಮದೇ ನಾಡಿನ ಜನಗಳ ಬಗ್ಗೆ ವಿಷ ಕಾರುತ್ತಾ ಮದ್ರಾಸಿಗಳನ್ನೋಡಿಸಲು ಶಿವಸೇನೆ ಎಂಬ ಪುಂಡರ ಪಡೆ ಕಟ್ಟಿದ ಮರಾಠರ ಕಣ್ಮಣಿ ಬಾಳಾಠಾಕ್ರೆಯ ಅಪ್ಪಅಜ್ಜಂದಿರೇ ಬಿಹಾರದಿಂದ ಬಾಂಬೆಗೆ ವಲಸೆ ಬಂದಂತವರು. ಇದೆಲ್ಲ ನೋಡಿದಾಗ ಕೆಲವರು ಪಾಲಿಸುವ ಸಿದ್ಧಾಂತಕ್ಕೂ ಅವರ ಮೂಲಕ್ಕೂ ಲಿಂಕೇ ಇದ್ದಂತೆ ತೋರುವುದಿಲ್ಲ. ಇದು ಮೊನ್ನೆಯ ಮಾಧ್ವ ನಡೆಗೂ ಅನ್ವಯಿಸುತ್ತದೆ.

ಐದು ವರ್ಷಗಳ ಹಿಂದಿನ ಮಾತು. ಮಧ್ವಾಚಾರ್ಯ ಹುಟ್ಟಿದ ಪಾಜಕದ ಬಳಿಯಿರುವ ಮಾಧ್ವರಿಗೆ ಸೇರಿದ ಕುಂಜಾರುಗಿರಿ ಎಂಬಲ್ಲಿ ಓರ್ವ ಗೌಡ ಸಾರಸ್ವತ ಮಹಿಳೆಯನ್ನು ಅವರ ವೃದ್ಧ ತಂದೆತಾಯಿಗಳ ಸಮೇತ ಇನ್ನೇನು ಬಡಿಸಿದ್ದ ಊಟ ಬಾಯಿಗೆ ಹಾಕುವಷ್ಟರಲ್ಲಿ ಊಟದಿಂದ ಅವರನ್ನು ನಿರ್ದಾಕ್ಷಿಣ್ಯವಾಗಿ ಎಬ್ಬಿಸಿ "ನೀವು ಬ್ರಾಹ್ಮಣರಲ್ಲ, ಇದು ಬ್ರಾಹ್ಮಣ ಪಂಕ್ತಿ" ಎಂದು ಆಚೆಗೆ ಕಳುಹಿಸಲಾಗಿತ್ತು. ಬಳಿಕ ಹಲವೆಡೆ ಈ ಅನಾಗರಿಕ ವರ್ತನೆಯ ಬಗ್ಗೆ ಚರ್ಚೆಗಳು ನಡೆದವಾದರೂ ಹಸ್ತ ತೋರಿಸಿ ಅವಲಕ್ಷಣ ಹೇಳಿಸಿಕೊಳ್ಳೋದ್ಯಾಕೆ ಎಂಬ ಗಾದೆಮಾತಿನಂತೆ (ಬ್ರಾಹ್ಮಣರು ರಚಿಸಿದ ಸ್ಕಂದಪುರಾಣದಲ್ಲೂ ಗೌಡ ಸಾರಸ್ವತರನ್ನು ಕೆಟ್ಟದಾಗಿ ಇವರು ಮೂಲತಃ ಶೂದ್ರರು ಎಂದು ವರ್ಣಿಸಲಾಗಿದೆ) ಈ ಅವಮಾನಿತ ಮಹಿಳೆಗೆ ಸಂಬಂಧಿಸಿದ ಸಮುದಾಯ ಇದರ ಬಗ್ಗೆ ಯಾವ ಆಸಕ್ತಿಯನ್ನೂ ತೋರಲಿಲ್ಲ. ಆದರೂ ಈ ವಿಚಾರ ಸುಪ್ತವಾಗಿ ಅವರೊಳಗೆ ಒಂದು ಸಂಚಲನವನ್ನೇ ಹುಟ್ಟುಹಾಕಿ ನೇರವಾಗಿ ಈ ಅವಮಾನಿತ ವಿಚಾರವನ್ನು ಪ್ರಸ್ತಾಪಿಸಹೋಗದೇ ಎಲ್ಲೋ ವರ್ಷಗಳ ಹಿಂದೆ ನಡೆದ ಕೊಲೆಗಳ ನೆಪದಲ್ಲಿ "ಜಿಎಸ್‌ಬಿ (ಗೌಡ ಸಾರಸ್ವತ ಬ್ರಾಹ್ಮಣ) ಹಿತ ರಕ್ಷಣಾ ವೇದಿಕೆ"ಯ ಹುಟ್ಟಿಗೂ ಇದು ಕಾರಣವಾಗಿತ್ತು.



ಬಳಿಕ ನಮ್ಮನ್ನು ಕೆಣಕಲು ಬರಬೇಡಿ ಎಂದು ತೋರಿಸಲು ಕೋಟೇಶ್ವರ ಎಂಬಲ್ಲಿ ಈ ವೇದಿಕೆಯಿಂದ ದೊಡ್ಡ ಮಟ್ಟದ ಶಕ್ತಿ ಪ್ರದರ್ಶನದ ಆಯೋಜನೆಯೂ ನಡೆದಿತ್ತು. ಮಾಧ್ವ ಬ್ರಾಹ್ಮಣರು ಪಂಕ್ತಿ ಭೇದದ ಹೆಸರಲ್ಲಿ ಸಮುದಾಯದ ಮಹಿಳೆಗೆ ಅವಮಾನಿಸಿದ್ದನ್ನೇ ಈ ರೀತಿ ಚಾಲೆಂಜ್ ಆಗಿ ತೆಗೆದುಕೊಂಡು ಎದುರೇಟು ನೀಡಿದ ಸಮುದಾಯವೊಂದು ಯುವ ಬ್ರಿಗೇಡ್ ಹೆಸರಿನಲ್ಲಿ ಇದೇ ಮಾಧ್ವ ಪೇಜಾವರರನ್ನು ಮುಂದಿಟ್ಟುಕೊಂಡು ದಲಿತ ಹಾಗು ದಮನಿತರನ್ನು ಈಗ ಕೆಣಕ ಹೊರಟಿರುವುದನ್ನು ನೋಡಿದರೆ ಇದು ಎಂಥಾ ವಿಚಿತ್ರ ಅಕ್ರಮ ಕೂಡಿಕೆ ಎಂದನ್ನಿಸದೇ ಇರದಲ್ಲವೇ?

ಹಿಂದೊಬ್ಬ ಎಮ್.ವಿ.ಕಾಮತ್ ಎನ್ನುವವನಿದ್ದ. ಆತ ಹಿರಿಯ ಪತ್ರಕರ್ತನಾದರೂ ಹಿಂದುತ್ವದ ಪ್ರಖರ ಪ್ರಚಾರಕನಾಗಿದ್ದ. ಹೋಮ್ ಸ್ಟೇ ಮೊದಲಾದ ದಾಳಿಗಳಲ್ಲಿ ಭಜರಂಗಿ ಗೂಂಡಾಗಳ ಮೇಲೆ ಕೇಸ್ ದಾಖಲಾದರೆ ಬಹಿರಂಗವಾಗಿ ಅದನ್ನು ಖಂಡಿಸಿ ಬರೆಯುತ್ತಿದ್ದ. ಒಂದೇ ದಿಕ್ಕಿನೆಡೆಗೆ ವಾಲಿಕೊಂಡಿರುವ ಆತನ ಲೇಖನಗಳೋ ಭಯಂಕರ ಕೋಮು ವಿಷ ಪ್ರಚೋದಿಸುವಂತಿರುತ್ತಿದ್ದವು. ಇಂದು ಆತ ಇದ್ದಿದ್ದರೆ ಉಡುಪಿ ಚಲೋದ ಬಗ್ಗೆ ಎಷ್ಟು ಉರಿದುಕೊಳ್ಳುತ್ತಿದ್ದನೋ ದೇವರೇ ಬಲ್ಲ.


ಕಳೆದ ಸಂಚಿಕೆಯಲ್ಲಿ ಹರೀಶ್ ರೈಯವರು ಬರೆದ ಉಡುಪಿ ಚಲೋ ಕುರಿತಾಗಿ ಕರಾವಳಿ ಪತ್ರಿಕೆಯೊಂದರ ವಿಕೃತ ವರದಿಗಳಾಗಲೀ, ಉಡುಪಿ ಚಲೋ ಸಮಿತಿ ದಲಿತ ದೌರ್ಜನ್ಯ ಕೇಸು ದಾಖಲಿಸಲ್ಪಟ್ಟ ಹಿಂದೂ ಸಂಘಟನೆಯ ವಿಲಾಸ ನಾಯಕನಂತವರಾಗಲಿ ಉಡುಪಿ ಚಲೋ ಚಳವಳಿಯನ್ನು ಕೀಳಾಗಿ ಬಿಂಬಿಸಿ ದಲಿತರನ್ನು ಅವಮಾನಿಸಿ ಪೇಜಾವರರೊಂದಿಗೆ ಕೂಡಿಕೊಂಡು ಕನಕ ನಡೆ ಆಯೋಜಿಸಲು ಹೊರಟ ಯುವ ಬ್ರಿಗೇಡಿನ ಸ್ಥಾಪಕರಿಂದ ಹಿಡಿದು ಬಹುತೇಕ ಸದಸ್ಯರುಗಳಾಗಲೀ ಇಲ್ಲ, ಇದ್ದಿರುವುದೆಲ್ಲ ಬಹುತೇಕ ಇದೇ ಸಮುದಾಯದ ಮಂದಿ. ಮೇಲ್ನೋಟಕ್ಕಿದು ಪೇಜಾವರ ಪ್ರಣೀತ ಮಾಧ್ವನಡೆಯಾಗಿ ತೋರಿ ಬಂದರೂ ಇದರ ಹಿಂದಿರುವ ಕಾಣದ ಕೈಗಳು ಬೇರೆಯೇ ಇವೆ.

- ಓದುಗ, ಬೆಂಗಳೂರು

ಸುಳ್ಳುಬೆಲೆಯ 'ಕನಕ-ನಡೆ'

ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗರ ಕೊಲೆ ಆರೋಪಿ ನರೇಶ್ ಶೆಣೈ ಮೂರು ತಿಂಗಳು ತಲೆ ತಪ್ಪಿಸಿಕೊಂಡಿದ್ದ. ಈಗ ಅವನು ಸಿಕ್ಕಿಬಿದ್ದು ನಾಲ್ಕು ತಿಂಗಳೇ ಕಳೆದಿವೆ. ಆದರೆ ಅವನ ವಿಚಾರಣೆಯಲ್ಲಿ ಆದ ಬೆಳವಣಿಗೆಗಳನ್ನು ಪೊಲೀಸರು ಸಾರ್ವಜನಿಕರಿಗೆ ತಿಳಿಸುತ್ತಿಲ್ಲ. ಕೊಲೆಯಾದ ವಿನಾಯಕ ಬಾಳಿಗ ಒಬ್ಬ ಆರ್‌ಟಿಐ ಕಾರ್ಯಕರ್ತರಾಗಿದ್ದು ಅವರು ಸಾರ್ವಜನಿಕ ಹಿತಾಸಕ್ತಿಯ ಕೆಲಸ ಮಾಡುತ್ತಿದ್ದುದರಿಂದ ಸಾರ್ವಜನಿಕರಿಗೆ ಅವರ ಕೊಲೆಗಾರರ ವಿಚಾರಣೆ ಎಲ್ಲಿಯವರೆಗೆ ಬಂದಿದೆ ಎಂದು ತಿಳಿಯುವ ಹಕ್ಕಿದೆ.

ಎಲ್ಲಕ್ಕಿಂತ ಮುಖ್ಯವಾಗಿ ನರೇಶ ಶೆಣೈ ಮೂರು ತಿಂಗಳು ಯಾರ ಯಾರ ಮನೆಯಲ್ಲಿ ಅಡಗಿ ಕುಳಿತಿದ್ದ ಎಂಬುದು ಜನರಿಗೆ ತಿಳಿಯುವ ಹಕ್ಕಿದೆ. ಕಾರಣ ಒಬ್ಬ ಅಪರಾಧಿಗೆ ರಕ್ಷಣೆ ಕೊಟ್ಟು ಅವನು ಕಾನೂನಿನ ಕೈಯಿಂದ ತಪ್ಪಿಸಿಕೊಳ್ಳುವುದಕ್ಕೆ ಹಾಗೂ ಸಾಕ್ಷಿಗಳನ್ನು ನಾಶ ಮಾಡುವುದಕ್ಕೆ ನೆರವಾಗುವುದು ಸಹ ಘೋರ ಅಪರಾಧ ಎಂದು ಪರಿಗಣಿಸಲಾಗಿದೆ. ಹಾಗಾಗಿ ನರೇಶನಿಗೆ ಅಡಗಿಕೊಳ್ಳಲು ಸಹಾಯ ಮಾಡಿದವರೆಲ್ಲಾ ಕಾನೂನುಪ್ರಕಾರ ಶಿಕ್ಷೆಗೆ ಒಳಗಾಗಲೇಬೇಕು. ನರೇಶ್ ಶೆಣೈಯ ಆತ್ಮೀಯ ಮಿತ್ರನಾದ ಸಂಘ ಪರಿವಾರದ ವಾಗ್ಮಿಯೆಂಬ



ಜಗಳಗಂಟನೊಬ್ಬ ನರೇಶನಿಗೆ ಬೇಲ್ ಸಿಕ್ಕಿದ ತಕ್ಷಣ ಅವನು ಜೈ
ಹೊರಬರುವಾಗ ಸ್ವಾಗತಿಸಲು ಜೈಲಿನ ಬಾಗಿಲಲ್ಲೇ ಸಿದ್ಧನಾಗಿದ್ದ. ಪ್ರಳ
ವಿಷ ಬುದ್ಧಿಯ ಈ ವಾಗ್ಮಿ ಸುಳ್ಳುಬೆಲೆ ಈಗ ದಲಿತರ ಚಲೋ
ಸ್ವಾಭಿಮಾನಿ ನಡಿಗೆಯಿಂದ ಅಸ್ಪೃಶ್ಯವಾದ ಉಡುಪಿ ನಗರದ ರಸ್ತೆಗಳ
ಆದಿತ್ಯವಾರ 'ಕನಕ-ನಡೆ' ಮೂಲಕ ಶುಚಿಗೊಳಿಸಿ ಅಸ್ಪೃಶ್ಯತಾ ಆ
ಘೋರ ಅಪರಾಧ ಎಸಗಿದ್ದಾನೆ. ಆದರೂ ಪೊಲೀಸರು ಅಸ್ಪೃಶ್ಯತಾ
ಪ್ರಕಾರ ಆತನ ಮೇಲೆ ಕ್ರಮ ಕೈಗೊಂಡಿಲ್ಲ.

ಈ ಚಕ್ರಮ್ ಸುಳ್ಳುಬೆಲೆಯು ಕೊಲೆ ಆರೋಪಿ ನರೇಶ
ಅಡಗಿಕೊಳ್ಳಲು ಒಂದು ತಿಂಗಳು ಕಾಲ ಗುಟ್ಟಾಗಿ ಆಶ್ರಯ ಕೊ
ಆರೋಪವಿದೆ. ಜತೆಗೆ ಈ ವಾಗ್ಮಿಯ ಮನೆಯಲ್ಲಿಯೇ ಮಂ
ವೆಂಕಟರಮಣ ದೇವಸ್ಥಾನದಿಂದ ನರೇಶ್ ಶೆಣೈ ಕದ್ದಿರುವ ಎಂಟು
ರೂಪಾಯಿಯನ್ನು ಅಡಗಿಸಿಡಲಾಗಿದೆ ಎಂಬ ಸುದ್ದಿ ಕರಾವಳಿ
ಕೊಂಕಣಿಗಳಲ್ಲಿ ಹರಡಿದೆ. ಹಾಗಾಗಿ ಪೊಲೀಸರು ನರೇಶ್ ಶೆ
"ಸುಳ್ಳುಪತ್ತೆ ಮಂಪರು ಪರೀಕ್ಷೆಗೆ" ಒಳಪಡಿಸಿ ಅವನು ಮೂರು ತಿ
ಕಾಲ ಎಲ್ಲೆಲ್ಲಿ ಅಡಗಿ ಕೂತಿದ್ದ ಹಾಗೂ ಎಂಟು ಕೋಟಿ ರೂ
ವಾಗ್ಮಿಯ ಮನೆಯಲ್ಲಿ ಎಲ್ಲಿ ಅಡಗಿಸಿಡಲಾಗಿದೆ ಎಂದು ಶೆಣೈಯ ಬಾ
ಸತ್ಯ ಹೊರಡಿಸಬೇಕು. ಇದರಿಂದ ಉಡುಪಿಯಲ್ಲಿ ಪೇಜಾವರ
ಶಿರೂರುಶ್ರೀಗಳ ಆಶೀರ್ವಾದದೊಂದಿಗೆ ಈಗ ಕನಕ-ನಡೆ ಆಯೆ
ಚಕ್ರಮ್ ಸುಳ್ಳುಬೆಲೆಯ ಕ್ರಿಮಿನಲ್ ನಿಜರೂಪ ಜನತೆಯ ಮುಂದೆ
ಮಂಗಳೂರು ಪೊಲೀಸರು ತಕ್ಷಣ ಈ ಕೆಲಸ ಮಾಡದಿದ್ದರೆ ಚಲೋ
ಸ್ವಾಭಿಮಾನಿ ಹೋರಾಟದ ಆಯೋಜಕರು ನರೇಶ್ ಶೆಣೈಯನ್ನು
ಮಂಪರು ಪರೀಕ್ಷೆಗೆ ಒಳಪಡಿಸಿ ಅವನು ಯಾರ ಮನೆಯಲ್ಲಿ ಅಡಗಿ
ಎಂಬುದನ್ನು ಅವನ ಬಾಯಿಂದಲೇ ಹೊರಡಿಸಬೇಕೆಂದು ಒತ್ತಾ
ಮನವಿ ನೇರವಾಗಿ ಗೃಹಮಂತ್ರಿಗಳಿಗೆ ಕೊಡಲೇಬೇಕು.

ಉಡುಪಿಯ ಹೋಮಕುಂಡ ಕೊಲೆ ಆರೋಪಿ ಭಾಸ್ಕರ್
ಹೆಂಡತಿಯ ಹಣದ ವ್ಯವಹಾರ ಉಡುಪಿ ಮಠದ 'ಡ್ರಮ್
ಖ್ಯಾತಿಯ ಸ್ವಾಮೀಜಿಯೊಂದಿಗೆ ಇತ್ತು ಎಂದು ಪತ್ರಿಕೆಗಳಲ್ಲಿ ವರದಿ
ಆದರೆ ನಂತರ ಈ ದಿಕ್ಕಿಗೆ ಸಾಗುತ್ತಿದ್ದ ಸಿಐಡಿ ತನಿಖೆಯನ್ನು ಸ್ಥಗಿತಗೊಳ
ಯಾರು? ಉಡುಪಿ ದೇವಸ್ಥಾನದಲ್ಲಿ ಶೂದ್ರ ಬಂಟ ಜಾತಿಯ
ಬ್ರಾಹ್ಮಣರ ಪಂಕ್ತಿಯಿಂದ ಎಬ್ಬಿಸಿ ಹೊರದೂಡಿ ಅವಮಾನಿಸಿದ್ದರು
ಅದೇ ಉಡುಪಿ ಸ್ವಾಮೀಜಿ ತನ್ನ ವೈಯಕ್ತಿಕ ಲಾಭದ ವಿಷಯದಲ
ಒಬ್ಬ ಕೊಲೆ ಆರೋಪಿ ಬಂಟ ಹೆಂಗಸೊಂದಿಗೆ ಗುಟ್ಟಾಗಿ ವ್ಯವಹರ
ಇತರ ಏಳು ಉಡುಪಿ ಸ್ವಾಮೀಜಿಗಳಿಗೆ ಮತ್ತು ಮಾಧ್ವ ಸಮು
ಒಪ್ಪಿಗೆಯಾಗಿದ್ದು ಹೇಗೆ? ಈ ಬಗ್ಗೆ ಸಿಐಡಿ ತನಿಖೆಯಲ್ಲಿ ಏನು
ಬಂದಿದೆ ಎಂಬುದನ್ನೂ ನಮ್ಮ ಗೃಹಮಂತ್ರಿಗಳೇ ಸ್ಪಷ್ಟಪಡಿಸಬೇಕು


- ಕ್ಷಿತಿಜ್ ಕೆ ಹೆಗಡೆ, ಮಂ

ಸೂಲಿಬೆಲೆಯಂತಹ ನೀಚರ ಕ
ಕರುಳು ಕಿತ್ತು ಬರ್ತಿದೆ ಕಣ್ರಿ

ಚಕ್ರವರ್ತಿ ಸೂಲಿಬೆಲೆ ಕರುಳು ಕಿತ್ತು ಬರ್ತಿದೆ ಕಣ್ರಿ. ಶೇಕ
ಶೂದ್ರರೇ ಇಂಡಿಯನ್ ಆರ್ಮಿಯಲ್ಲಿ ತಮ್ಮ ಜೀವ ಪಣಕ್ಕಿಟ್ಟು
ನಮನ್ನ ಕಾಯ್ತಿರೋವಾಗ, ಒಬ್ಬ ಸೈನಿಕನೂ ನಿಮ್ಮ ಇಡೀ ಪೀಳಿಗೆ
ನೀವು ಮಾತ್ರ ದೇಶಭಕ್ತಿಯ ಬಗ್ಗೆ ಭಾಷಣ ಹೊಡೆಯೋವಾಗ ಕರು
ಬರ್ತೀರಿ...

ಇತಿಹಾಸದುದ್ದಕ್ಕೂ ನಿಮ್ಮ ಪೀಳಿಗೆ ದಲಿತರನ್ನು ನಿಕೃಷ್ಟರನ್ನಾಗಿ
ಬಂದು ಅವರನ್ನು ತುಂಬಾ ಹೀನಾಯವಾಗಿ ಕಂಡು ಈಗ ಕಾನೂನಿ
ದಲಿತರ ಬಗ್ಗೆ ಚೆನ್ನಾಗಿ ಮಾತಾಡೋದನ್ನು ಕಂಡ್ರೆ ಕರುಳು ಕಿತ್ತು ಬ

ಬ್ರಾಹ್ಮಣರು ಉಂಡು ಉಗುಳು ಜೊಲ್ಲು ಬಿಟ್ಟ ಎಲೆ ಮೇ
ಶೂದ್ರ ಜಾತಿಯ ನೂರಾರು ಜಾತಿಯ ಜನ ನೀವು ರೆಡಿ ಮಾಡಿದ
ನಂಬಿ ಮುಗ್ಧತೆಯಿಂದ ಎಂಜಲ ಮೇಲೆ ಉರುಳಾಡುವಾಗ ಕರು
ಬರ್ತೆ ಕಣ್ರಿ.



ದಲಿತರು ನಮ್ಮ ಹಿಂದೂಗಳು ಅಂತ ಅವರಿಗೆ ಸವರುತ್ತಾ ಅವರ ಸಾವಿರಾರು ವರ್ಷದ ಆಹಾರ ತಿಂದ್ರೆ ಚಿತ್ತಲೆ ಮಾಡಿ ಕೊಲ್ಲೊ ಹಲ್ಲೆ ಮಾಡೋದು ಕರುಳು ಕಿತ್ತು ಬರ್ತೆ ಕಣ್ರಿ...

ಪುರೋಹಿತಶಾಹಿ ಖಂಡಿಸಿ ಬಂಡಾಯವೆದ್ದ ಕನಕರನ್ನು ರಗೆ ನಿಲ್ಲಿಸಿ ಅವಮಾನ ಮಾಡಿ ಈಗ ಅವರ ಹೆಸರು ತೀಟೆಗೆ ಬಳಸಿಕೊಳ್ತಾ ಇರೋದು ಕಂಡ್ರೆ ಕರುಳು ಬರ್ತೆರಿ.

ವರ್ಣಾಶ್ರಮ, ಜಾತಿಪದ್ಧತಿಯಿಂದ ಮಾರ್ಪಾಡಾದ ನಿಕ ಪ್ರಬುದ್ಧ ಬ್ರಾಹ್ಮಣರು, ವೈಶ್ಯರು, ಕ್ಷತ್ರಿಯರೇ ಕವಾಗಿ ನಾಯಕತ್ವ ವಹಿಸಿದ ಕಮ್ಯೂನಿಸ್ಟ್‌ರಿಗೆ ಚೈನಾ ಟಾಗಳು ಎಂದು ನೀವೇಳುವಾಗ ಕರುಳು ಕಿತ್ತು ಕಣ್ರಿ...

ಆರೆಸ್ಸೆಸ್‌ನಲ್ಲಿ ಬ್ರಾಹ್ಮಣರಲ್ಲದ 98 % ಜನ ಇದ್ರು ಲ 2 % ಆ ಅಬ್ರಾಹ್ಮಣ ಜನಕ್ಕೆ ಆರೆಸ್ಸೆಸ್‌ನಲ್ಲಿ ದ್ವೆ ಕೊಟ್ಟ ನಿಮ್ಮ ಕಂತ್ರಿ ಬುದ್ಧಿ ಕಂಡು ಕರುಳು ಕಿತ್ತು ಕಣ್ರಿ...

ದನಗಳನ್ನು ಸಾಕದೆ ದನದ ಬಗ್ಗೆ ಮಾತಾಡೋ ನಿಮ್ಮ ತನ ಕಂಡು ಕರುಳು ಕಿತ್ತು ಬಂದಿದೆ ರೀ.

ಗೋ ತಾಯಿ, ಗೋನಿಷೇಧ ಎಂದ ನಿಮ್ಮ ಮೋದಿ ಕಾರ ಬಂದ ಮೇಲೆ, ಗೋ ರಫ್ತಿನಲ್ಲಿ ನಂಬರ್ ಒನ್ ಕ್ಕೆ ಭಾರತ ಬಂದಿರುವಾಗ ಕರುಳು ಕಿತ್ತು ಬರ್ತೆರಿ.

ಜೈ ಶ್ರೀರಾಮ್ ಎನ್ನುವ ನೀವು ವಾಲ್ಮೀಕಿ ಜನರನ್ನು ಮಮಂದಿರಕ್ಕೆ ಆಡಳಿತಾಧಿಕಾರಿಯಾಗಿ ನೇಮಿಸದೆ ರೋದು ಕಂಡು ಕರುಳು ಕಿತ್ತು ಬರ್ತಿದೆರಿ.

ಗೊಲ್ಲ ಕೃಷ್ಣರನ್ನು ಪೂಜಿಸೋ ನೀವು ಗೊಲ್ಲ ಜನರನ್ನು ಮ್ಮ ಉಡುಪಿಯಲ್ಲಿ ಅರ್ಚಕರನ್ನಾಗಿಸದೆ ಮೋಸ ಮಾಡಿದ್ದು ಡ್ರೆ ಕರುಳು ಕಿತ್ತು ಬರ್ತೆ ರೀ....

ಉಡುಪಿ ಸ್ವಚ್ಛ ಮಾಡೋವಾಗ ಶೂದ್ರ ಯುವಕರನ್ನು ಮಠದ ಶೌಚಾಲಯ ತೊಳೆಯಲು ಬಿಟ್ಟು ಮಡಿತೊಟ್ಟ ಹ್ಮಣರನ್ನ ಮಠದ ಮುಖ್ಯ ಸ್ಥಳ ಬಳಿಯಲು ಬಿಟ್ಟ ಮ್ಮ ನೀಚತನ ಆ ಯುವಕರ ಮುಗ್ಧತನ ಕಂಡ್ರೆ ಕರುಳು ತ್ತು ಬರ್ತೆರಿ.

ಇನ್ನು ತುಂಬಾ ಇವೆ ರೀ ಆದ್ರೆ ತುಂಬಾ ಬರೆದು ಮ್ಮ ನೀಚತನವನ್ನು ಹೊರಹಾಕಲು ನನಗೆ ಟೈಮಿಲ್ಲ.. ದಲಾಗ್ರಿ ಓ ಸೂಲಿಬೆಲೆ.. ನಿಮ್ಮಂಥ ಕೋಟಿ ಕೋಟಿ ಶವಿರೋಧಿಗಳು ರಾಷ್ಟ್ರವಾದ, ದೇಶಪ್ರೇಮ, ಧರ್ಮದ ಸರಲ್ಲಿ ಹುಟ್ಟಿ ಬಂದರೂ ಸತ್ಯ ಸತ್ಯನೆ..... ಸತ್ಯಮೇವಜಯತೆ. ಜೈ ಬಸವ, ಜೈ ಭೀಮ್.


- ಪ್ರಶಾಂತ್ ದಾನಪ್ಪ, ಈ ಮೇಲ್ ಮೂಲಕ

...ನಡೆ' ಮಠಕ್ಕೆ ಮುತ್ತಿಗೆ ಅಲ್ಲ

ಸೂಲಿಬೆಲೆಯ ಕನಕ-ನಡೆಗೆ ಅನುಮತಿ ನಿರಾಕರಿಸುತ್ತಾ ಉಡುಪಿ ಜಿಲ್ಲಾಧಿಕಾರಿಗಳು ಬರೆದ ಹಿಂಬರಹಗಳು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಅದರಲ್ಲಿ ಉದ್ದೇಶಪೂರ್ವಕ ಮಾಡಿರುವ ಮೂರು ತಪ್ಪುಗಳಿವೆ. ದಲಿತರ ಎಲ್ಲಾ ಸಂಘಟನೆಗಳನ್ನು ಎಡಪಂಥೀಯ ಸಂಘಟನೆ ಎಂದು ಬ್ರಾಂಡ್ ಮಾಡುವ ಹುನ್ನಾರಿನಲ್ಲಿ ಕೇವಲ ಕೇಸರಿ ಮಾಧ್ಯಮಗಳು ಮಾತ್ರವಲ್ಲ ಸರಕಾರಿ ಇಲಾಖೆಗಳೂ ಸೇರಿವೆ ಎಂಬುದಕ್ಕೆ ಲಿಖಿತ ಸಾಕ್ಷಿ ಜಿಲ್ಲಾಧಿಕಾರಿಗಳ ಈ ಹಿಂಬರಹದಲ್ಲಿ ಲಭ್ಯವಿದೆ.

ಮೊದಲನೆಯದಾಗಿ, ದಲಿತ ದಮನಿತ ಸಂಘಟನೆಗಳ ಸ್ವಾಭಿಮಾನಿ ನಡೆಗೆ 'ಎಡಪಂಥೀಯ' ಸಂಘಟನೆಗಳ ನಡೆ ಎಂದು ಜಿಲ್ಲಾಧಿಕಾರಿಯವರು ಅಧಿಕೃತವಾಗಿ ಬರೆದಿರುವುದು ದೊಡ್ಡ ತಪ್ಪು. ಯಾಕೆಂದರೆ ಚಲೋ ಉಡುಪಿ ಜಾಥಾಕ್ಕೆ ಒಟ್ಟು ಸೇರಿದ ಏಳು ಸಾವಿರ ಜನರಲ್ಲಿ ಎಡಪಂಥೀಯರಿದ್ದದ್ದು ಕೇವಲ ನೂರು ಜನ ಮಾತ್ರ. ಹಾಗಿರುವಾಗ ಯಾವ ಆಧಾರದಲ್ಲಿ ಎಲ್ಲಾ ದಲಿತ-ದಮನಿತರನ್ನು ಜಿಲ್ಲಾಧಿಕಾರಿಯವರು ಲಿಖಿತವಾಗಿ ಎಡಪಂಥೀಯರು ಎಂದು ವರ್ಗೀಕರಿಸಿರುವುದು? ಈ ನಮ್ಮ ಸ್ವಾಭಿಮಾನಿ ನಡೆಯಲ್ಲಿ ಎಲ್ಲಾ ತರಹದ ಸಮಾನ ಮನಸ್ಕ ಸಂಘಟನೆಗಳು ಪಾಲ್ಗೊಂಡಿವೆ. ಅದರಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಿಗೆ ಸೇರಿದವರು ಮಾತ್ರವಲ್ಲ ಬಿಜೆಪಿಗೆ ಸೇರಿದವರೂ ಸಮಾನ ಮನಸ್ಕರ ನೆಲೆಯಲ್ಲಿ ಭಾಗವಹಿಸಿದ್ದರು.

ಜಿಲ್ಲಾಧಿಕಾರಿಯವರ ಹಿಂಬರಹದಲ್ಲಿಯ ಎರಡನೆಯ ದೊಡ್ಡ ತಪ್ಪು ಎಂದರೆ ನಮ್ಮ ದಲಿತ-ದಮನಿತರ 'ಸ್ವಾಭಿಮಾನಿ ನಡೆ' ಯನ್ನು 'ಉಡುಪಿ ಮಠಕ್ಕೆ ಮುತ್ತಿಗೆ' ಎಂದು ಜಿಲ್ಲಾಧಿಕಾರಿ ತಮ್ಮ ಹಿಂಬರಹದಲ್ಲಿ ಅಧಿಕೃತವಾಗಿ ಬರೆದಿರುವುದು. ನಮ್ಮ ಸ್ವಾಭಿಮಾನಿ ನಡೆ ಸೂಲಿಬೆಲೆ ಮತ್ತು ಉಡುಪಿ ಮಠಾಧೀಶರು ಆಚರಿಸುವ ಅಸ್ಪೃಶ್ಯತೆಯ ವಿರುದ್ಧ ಆಗಿತ್ತು, ಅಂದರೆ ಅ.9 ಕ್ಕೆ ದಲಿತರು ನಡೆದ ರಥ ಬೀದಿಯನ್ನು ಮಡಿ ಮಾಡುವ ಅಸ್ಪೃಶ್ಯತೆ ಆಚರಣೆಯ ನಡೆ ಸೂಲಿಬೆಲೆದಾಗಿತ್ತು, ಅದರ ವಿರುದ್ಧದ ದಲಿತರ ಸ್ವಾಭಿಮಾನಿ ನಡೆಗೆ ಜಿಲ್ಲಾಧಿಕಾರಿಗಳು 'ಉಡುಪಿ ಮಠಕ್ಕೆ ಮುತ್ತಿಗೆ' ಎಂದು ಕರೆದಿದ್ದು ಸಹ ಯಾವುದೋ ಷಡ್ಯಂತ್ರದ ವಾಸನೆ ಆಡುತ್ತದೆ. ಜಿಲ್ಲಾಧಿಕಾರಿಯವರ ಮೂರನೆಯ ತಪ್ಪು ಎಂದರೆ ಸೂಲಿಬೆಲೆಯು 'ಕನಕ ನಡೆ'




ಆಯೋಜಿಸಿದವರು ಬಲಪಂಥೀಯರಾಗಿದ್ದರೂ ಅವರನ್ನು ಹಾಗೆ ಕರೆಯದೇ ಕೇವಲ 'ಯುವ ಬ್ರಿಗೇಡ್' ಎಂದು ಮಾತ್ರ ಜಿಲ್ಲಾಧಿಕಾರಿ ಕರೆದಿರುವುದು. ಇದರಿಂದ ಅವರು ಈ ಸೂಲಿಬೆಲೆಯ ಅಸ್ಪೃಶ್ಯತಾ ನಡೆಗೆ ಸಹಾನುಭೂತಿ ಹೊಂದಿದ್ದರೇ? ಎಂಬ ಸಂದೇಹ ಮೂಡಿಸುತ್ತದೆ.

ಅ.9 ರ ಉಡುಪಿ ಚಲೋ ಜಾಥಾದ ವೇಳೆ ಸರಿಯಾಗಿ ಮಧ್ಯಾಹ್ನ ಒಂದು ಗಂಟೆಗೆ ಪೊಲೀಸರ ಸಹಿತ ಎಲ್ಲರಿಗೂ ಬೇಕಾದಷ್ಟು ಊಟ ಪೂರೈಸಿದ್ದರೂ ಕೆಲವು ವಿಕೃತ ಸಂತೋಷಿ ಬೆಳಗಿನ ಕೊಕ್ಕೆ ಪತ್ರಿಕೆಗಳು ಉಡುಪಿ ಚಲೋ ಜಾಥಾದಲ್ಲಿ ಪೊಲೀಸರನ್ನು ಉಪವಾಸ ಕೆಡವಲಾಯಿತು ಎಂದು ಸುಳ್ಳು ಸುದ್ದಿ ಪ್ರಕಟಿಸಿದ್ದವು. ಆದರೆ ನಿನ್ನೆ ಸೂಲಿಬೆಲೆಯ ಕನಕ ನಡೆಯ ಬಂದೋಬಸ್ತಿಗೆ ಸುಮಾರು 300 ಮೀಸಲು ಪೊಲೀಸ್ ಪಡೆ ನೇಮಿಸಲಾಗಿತ್ತು. ಇವರಿಗೆ ಸೂಲಿಬೆಲೆ ಅಥವಾ ಮಠದ ಕಡೆಯವರು ಊಟ ಕೊಡುವುದು ಬಿಡಿ ನೀರನ್ನೂ ಒದಗಿಸಲಿಲ್ಲ. ಆದರೆ ಇದರ ಬಗ್ಗೆ ಮಣಿಪಾಲದ ಕೊಕ್ಕೆವಾಣಿ ಒಂದಕ್ಷರ ಬರೆದಿಲ್ಲ. ಏನೇ ಆಗಲಿ ಈ ಕೊಕ್ಕೆವಾಣಿಯನ್ನು ದಲಿತರು ಮತ್ತು ಮುಸ್ಲಿಮರು ಮಾತ್ರವಲ್ಲ ಹೆಚ್ಚಿನ ಕ್ರೈಸ್ತರೂ ಈಗ ಓದುವುದನ್ನು ನಿಲ್ಲಿಸಿರುವುದರಿಂದ ಈ ಪತ್ರಿಕೆಯವರು ಎಲ್ಲಿ ಕೊಕ್ಕೆ ಹಾಕಿದರೂ, ಏನೇ ಬರೆದರೂ ಅಥವಾ ಬರೆಯದಿದ್ದರೂ ಕರಾವಳಿಯ ಪ್ರಜ್ಞಾವಂತ ಓದುಗರ ಮೇಲೆ ಈಗ ಏನೂ ಪರಿಣಾಮ ಆಗುವುದಿಲ್ಲ ಬಿಡಿ.

- ರಾಮಕೃಷ್ಣ ಕುಲಾಲ್, ಮುಲ್ಕಿ

ಸ್ವಚ್ಛತೆಯಲ್ಲೂ ಜಾತಿ ಎಂಬ ಗೊಬ್ಬು

ಮೊನ್ನೆ ಆದಿತ್ಯವಾರ ಚಕ್ರವರ್ತಿ ಸೂಲಿಬೆಲೆ ಮತ್ತು ಪೇಜಾವರರ ನೇತೃತ್ವದಲ್ಲಿ ಸುಮಾರು ಇನ್ನೂರು ಯುವಕರು ಜಿಲ್ಲಾಧಿಕಾರಿಗಳ ನಿಷೇಧಾಜ್ಞೆ ಉಲ್ಲಂಘಿಸಿ ಉಡುಪಿ ಮಠದ ಆವರಣದಲ್ಲಿ ಕನಕ ನಡೆ ಮಾಡಿ ಆವರಣ ಸ್ವಚ್ಛಗೊಳಿಸಿದರು. ಅದರಲ್ಲಿ ಭಾಗವಹಿಸಿದ ಕೆಲವು ಹಿಂದುಳಿದ ಜಾತಿಯ ಮೊಗವೀರ ಮತ್ತು ಬಿಲ್ಲವ ಯುವಕರು ಹೇಳುವಂತೆ ಈ ಸ್ವಚ್ಛತಾ ಕಾರ್ಯಕ್ರಮದಲ್ಲೂ ಜಾತಿ ಭೇದ ಮಾಡಲಾಯಿತಂತೆ. ಬಿಳಿ ಮತ್ತು ಕೇಸರಿ ಪಂಚೆ ಉಟ್ಟು ಮೇಲೆ ಶರ್ಟು ಹಾಕದೇ ತಮ್ಮ ಹೆಗಲಲ್ಲಿ ಮತ್ತು ಹಣೆಯಲ್ಲಿ ಜಾತಿಯ ಸಂಕೇತ ಪ್ರದರ್ಶಿಸುತ್ತಾ ಬಂದ ಸವರ್ಣೀಯ ಯುವಕರಿಗೆ ಕೇವಲ ಪುಷ್ಕರಣಿ ಸ್ವಚ್ಛ ಮಾಡುವ ಕೆಲಸ





ಕೊಡಲಾಯಿತಂತೆ ಹಾಗೂ ಪ್ಯಾಂಟು ಶರ್ಟು ಧರಿಸಿ ಬಂದಿದ್ದ ಶೂದ್ರ ಯುವಕರನ್ನು ಹೆಕ್ಕಿ ಅವರಿಗೆ ಮಠದ ಶೌಚಾಲಯ, ಸ್ನಾನಗೃಹ, ಕಾರ್ ಪಾರ್ಕಿಂಗ್ ಸ್ವಚ್ಛ ಮಾಡುವ ಕೆಲಸ ವಹಿಸಲಾಯಿತಂತೆ. ಇದರ ಫೋಟೋಗಳೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿವೆ. ಜಾತಿವಾದಿಗಳ ಮೂಲಗುಣ ಸುಟ್ಟರೂ ಹೋಗದು ಎನ್ನುವುದು ಸತ್ಯ.

ಅಂದು ಸ್ವಚ್ಛತೆಯ ನಂತರ ಸೂಲಿಬೆಲೆಯ 150 ಪಡ್ಡೆಗಳಿಗೆ ದೇವಸ್ಥಾನದ ಪ್ರಸಾದ ಊಟ ಬಡಿಸುವಾಗಲೂ ಜಾತಿ ಆಧಾರಿತ ಬೇರೆ ಬೇರೆ ಪಂಕ್ತಿ ಮಾಡಲಾಯಿತಂತೆ. ಬ್ರಾಹ್ಮಣರಿಗೆ ಒಳಗಿನ ಕೋಣೆ ಮತ್ತು ಶೂದ್ರರಿಗೆ ಹೊರಗಿನ ಕಾಮನ್‌ಹಾಲ್. ಸ್ವಚ್ಛತೆಯ ಕೆಲಸ ಕೊಡುವಲ್ಲಿಯೂ ಜಾತಿಭೇದ ಹಾಗೂ ನಂತರ ಊಟ ಹಾಕುವಲ್ಲಿಯೂ ಪಂಕ್ತಿಭೇದ ಉಡುಪಿ ಸ್ವಾಮೀಜಿ ಮತ್ತು ಸೂಲಿಬೆಲೆಯ ನಿಗರಾಣಿಯಲ್ಲಿಯೇ! ಇನ್ನಾದರೂ ಶೂದ್ರರು ಕಣ್ಣು ತೆರೆಯುವರೆ?

- ಹರೀಶ್ ಎಂ.ಆರ್, ಉಡುಪಿ

ಕರ್ಕಶ, ಸುಶ್ರಾವ್ಯಕುಮಾರರ ಕಥೆ

ದೊಡ್ಡವರಿಗಾಗಿ ಮಕ್ಕಳ ಕಥೆ

ಒಂದಾನೊಂದು ಕಾಡಿನಲ್ಲಿ ಅನೇಕ ಕೋಗಿಲೆಗಳು, ಕಾಗೆಗಳು ಮತ್ತು ಪ್ರಾಣಿಗಳು ಇದ್ದವು. ಕಾಡಿನ ಪ್ರಾಣಿಗಳು ಕೋಗಿಲೆಯ ಸುಶ್ರಾವ್ಯ ಸಂಗೀತಕ್ಕೆ ಮಾರುಹೋಗಿದ್ದವು. ಕಾಗೆಗಳ ಕಂಠ ಕರ್ಕಶವೆಂದು, ಅವು ಹೊಲಸು ತಿನ್ನುತ್ತವೆಂದು ಕಾಡಿನ ಪ್ರಾಣಿಗಳು ಅವುಗಳನ್ನು ಹತ್ತಿರ ಬಿಟ್ಟುಕೊಳ್ಳುತ್ತಿರಲಿಲ್ಲ. ಪರಿಸ್ಥಿತಿ ಹೀಗಿರಬೇಕಾದರೆ ಕರ್ಕಶಕುಮಾರ ಎಂಬ ಕಾಗೆಗೆ ತಾನು ಕೂಡ ಕೋಗಿಲೆಯ ಹಾಗೆ ಹಾಡಬೇಕೆಂದು ಮನಸ್ಸಾಯಿತು. ಕೋಗಿಲೆಯ ಹಾಗೆ ಹಾಡಿದರೆ ತಾನು ಕೂಡ ಇತರ ಪ್ರಾಣಿಗಳ ಪ್ರೀತಿ, ಗೌರವಕ್ಕೆ ಪಾತ್ರನಾಗಬಹುದೆಂದು ಭಾವಿಸಿತು. ತನ್ನ ಬಳಗದ ಕಾಗೆಗಳು ಬೇಡವೆಂದರೂ ಕರ್ಕಶಕುಮಾರ ಹಠ ಹಿಡಿದು ಒಮ್ಮೆ ಕೋಗಿಲೆಗಳು ಇರುವ ಜಾಗಕ್ಕೆ ಹೋಯಿತು. ಕಾಗೆ ತಮ್ಮ ಬಳಗದ ಹತ್ತಿರ ಬರುತ್ತಿರುವುದನ್ನು ನೋಡಿದ ಕೋಗಿಲೆಗಳ ನಾಯಕ ಕಾಗೆಯನ್ನು ದೂರದಲ್ಲಿ ನಿಲ್ಲಿಸಿ,

"ಏನು ಬೇಕು ನಿನಗೆ? ಯಾಕಿಲ್ಲಿ ಬಂದೆ?" ಎಂದು ಗದರಿಸಿ ಕೇಳಿತು. ಅದಕ್ಕೆ ಕರ್ಕಶಕುಮಾರ ವಿನಮ್ರತೆಯಿಂದ,

"ಗೆಳೆಯ, ನಾನು ನಿಮ್ಮ ಹಾಗೆ ಹಾಡಲು ಕಲಿಯಬೇಕೆಂದಿದ್ದೇನೆ. ಕಲಿಸಿ ಕೊಡುವೆಯಾ? ದಯವಿಟ್ಟು" ಎಂದು ಬೇಡಿಕೊಂಡಿತು. ಅಲ್ಲಿದ್ದ ಎಲ್ಲಾ ಕೋಗಿಲೆಗಳು ಆ ಕಾಗೆಯ ಬೇಡಿಕೆಯನ್ನು ಕೇಳಿ ಗೊಳ್ಳೆಂದು ನಕ್ಕವು.

ಅದರಲ್ಲೊಂದು ಕೋಗಿಲೆ ಕಾಗೆಗೆ ಹೀಗೆ ಹೇಳಿತು, "ಎಲೈ ಕರಿ ಬಣ್ಣದ ಕಾಗೆಯೆ, ಹೊಲಸಿನಲ್ಲಿ ಕೂತು ತಿನ್ನುವ ತಿರುಪೋಕಿಯೆ, ನಿನಗ್ಯಾಕೆ ನಮ್ಮ ಸಂಗೀತದ ಹುಚ್ಚು? ನಿನಗೇನು ಅರ್ಹತೆ ಇದೆ ಎಂದು ಇಲ್ಲಿ ಬಂದಿದ್ದೀಯ? ನಮ್ಮದು ಕೇವಲ



ಹಾಡುಗಾರಿಕೆಯಲ್ಲ, ಅದು ಶಾಸ್ತ್ರೀಯ ಸಂಗೀತ. ಶಾಸ್ತ್ರೀಯ ಸಂಗೀತವೇನೆಂದು ತಿಳಿದಿದ್ದಿಯೋ?" ಆದಕ್ಕೆ ಕಾಗೆ "ಇಲ್ಲ, ನನಗೆ ಅದೇನೆಂದು ಗೊತ್ತಿಲ್ಲ. ತಿಳಿದುಕೊಳ್ಳಬೇಕೆಂದು ಇಲ್ಲಿಗೆ ಬಂದೆ" ಎಂದು ಮರು ಉತ್ತರ ಹೇಳಿತು. ಇದಕ್ಕೆ ಅಲ್ಲಿದ್ದ ಎಲ್ಲಾ ಕೋಗಿಲೆಗಳು ಮತ್ತೊಮ್ಮೆ ಗೊಳ್ಳೆಂದು ನಕ್ಕವು. ಕೋಗಿಲೆಗಳ ನಾಯಕ ಆ ಕಾಗೆಯನ್ನು ಮತ್ತೊಮ್ಮೆ ಗದರಿಸಿ, ಹೆದರಿಸಿ ವಾಪಸು ಕಳುಹಿಸಿತು. ಕರ್ಕಶಕುಮಾರ ಬಂದ ದಾರಿಗೆ ಸುಂಕವಿಲ್ಲವೆಂದು ಬಹಳ ನಿರಾಸೆಯಿಂದ ಮನೆಗೆ ಹಿಂದಿರುಗಿತು. ತನ್ನ ಬಳಗದ ಕಾಗೆಗಳಿಂದಲೂ ಕೂಡ ಚೆನ್ನಾಗಿ ತೆಗಳಿಸಿಕೊಂಡಿತು. ಅದರಲ್ಲೊಂದು ಕಾಗೆ, "ಅಲ್ರೊ, ನಾನು ಮೊದಲೇ ಹೇಳಿದ್ದೆ ಈ ಸಂಗೀತ-ಪಂಗೀತ ನಮಗೆ ಆಗಿ ಬರೊಲ್ಲ ಅಂತ. ನಮ್ಮ ಮಾತನ್ನು ಮೀರಿ ನೀನು ಆ ಕೋಗಿಲೆಗಳ ಬಳಿ ಹೋಗಿ, ನಮ್ಮ ಬಳಗದ ಮಾನ, ಮರ್ಯಾದೆಯನ್ನು ಹರಾಜು ಹಾಕಿ ಬಂದೆಯಲ್ಲ!" ಎಂದು ಮೂದಲಿಸಿತು.

******

ಅನೇಕ ವರ್ಷಗಳು ಆದವು. ಕರ್ಕಶಕುಮಾರನಿಗೆ ವಯಸ್ಸಾಯಿತು. ಸಂಗೀತ ಕಲಿಯುವ ಶಕ್ತಿ ಇಲ್ಲದಿದ್ದರೂ ಆಸೆಯಂತೂ ಇನ್ನೂ ಜೀವಂತ ಇತ್ತು, ಆದರೆ ಆ ಆಸೆಯನ್ನು ತಾನು ಈ ಜೀವಿತಾವಧಿಯಲ್ಲಿ ಈಡೇರಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಸತ್ಯದ ಅರಿವು ಕೂಡ ಆಯಿತು. ಹಾಗಾಗಿ ಒಂದು ದಿನ ಆ ಮುದಿ ಕಾಗೆ ತನ್ನ ಮಗನನ್ನು ಕರೆದು "ಮರಿ, ನೀನು ಎಲ್ಲಾ ಕಾಗೆಗಳ ಹಾಗೆ ಆಗಬಾರದು. ಭಿನ್ನವಾಗಿರಬೇಕು. ಆದ್ದರಿಂದ ಈ ದಿನವೇ ನೀನು ಕೋಗಿಲೆಗಳ ಬಳಿ ಹೋಗಿ ಶಾಸ್ತ್ರೀಯ ಸಂಗೀತ ಕಲಿತು, ಹಾಡಲು ಶುರು ಮಾಡು. ಆಗ ನಮಗೆ ಕಾಡಿನ ಇತರ ಪ್ರಾಣಿಗಳು ಮರ್ಯಾದೆ ಕೊಟ್ಟು, ಗೌರವಿಸುತ್ತಾರೆ" ಎಂದು ಹೇಳಿತು. ಇದಕ್ಕೆ ಮರಿ ಕಾಗೆ, "ಅಪ್ಪ, ನಮಗೆ ಸಂಗೀತ-ಪಂಗೀತ ಯಾಕೆ? ನಿನಗೆ ಹಿಂದೆ ಆದ ಅನುಭವ ಮರೆತುಹೋಯಿತೆ? ಮತ್ತೆ ಮತ್ತೆ ಯಾಕೆ ನಾವು ನಮ್ಮ [illegible] ಕಳೆದುಕೊಳ್ಳುವುದು?" ಎಂದು ಹೇಳಿತು.

"ಅಯ್ಯೋ, ಹುಚ್ಚಪ್ಪ, ಕೋಗಿಲೆಗಳ ಬಳಗ ಈಗ ಮೊದಲಿನಂತೆ ಇಲ್ಲ. ಅವು ಬಹಳ ಬದಲಾಗಿವೆ. ಅವರಲ್ಲಿ ಸುಶ್ರಾವ್ಯಕುಮಾರನೆಂಬ ಕೋಗಿಲೆ ಇದೆ. ಅದರ ಬಳಿ ಹೋಗು. ಅದು ವಿಚಾರವಂತ. ಉದಾರಿ ಮತ್ತು ಬುದ್ಧಿವಂತ. ಇತರ ಕೋಗಿಲೆಗಳ ಹಾಗೆ ಗೊಡ್ಡು ಸಂಪ್ರದಾಯದ ಕೋಗಿಲೆ ಅಲ್ಲ ಅದು. ಅದು ನಿನಗೆ ಸಂಗೀತ ಕಲಿಸಿಕೊಡುತ್ತದೆ ಎಂಬ ನಂಬಿಕೆ ನನಗೆ ಇದೆ. ಹೋಗಿ ಬಾ" ಎಂದು ಆಶೀರ್ವದಿಸಿ ಮರಿ ಕಾಗೆಯನ್ನು ಆ ಮುದಿ ಕಾಗೆ ಬಿಳ್ಕೊಟ್ಟಿತು.

******

ಮರಿ ಕಾಗೆ ಸುಶ್ರಾವ್ಯಕುಮಾರನ ಬಳಿ ಹೋಗಿ ತನ್ನ ಮನದ ಇಂಗಿತವನ್ನು ಹೇಳಿಕೊಂಡಿತು. ಸುಶ್ರಾವ್ಯಕುಮಾರ ಮರಿ ಕಾಗೆಗೆ ಶಾಸ್ತ್ರೀಯ ಸಂಗೀತವನ್ನು ಕಲಿಸಲು ಸಂತೋಷದಿಂದ ಒಪ್ಪಿಕೊಂಡಿತು. ಆದರೆ ಬಳಗದ ಇತರ ಕೋಗಿಲೆಗಳು ಸುಶ್ರಾವ್ಯಕುಮಾರನ ನಿರ್ಧಾರವನ್ನು ಬಲವಾಗಿ ವಿರೋಧಿಸಿದವು. 'ನಮ್ಮ ಶಾಸ್ತ್ರದ ವಿರುದ್ಧ ಹೋಗಬೇಡ. ದೇವರು ಶಾಸ್ತ್ರೀಯ ಸಂಗೀತವನ್ನು ನಮಗೆ ಮಾತ್ರ ನೀಡಿದ್ದು. ನಾವು ಮಾತ್ರ ಅದಕ್ಕೆ ವಾರಸುದಾರರು. ಹೊಲಸಿನಲ್ಲಿ ಇರುವ ಕಾಗೆಗಳಿಗೆ ಅಲ್ಲ. ನಮ್ಮ ಬಳಗದ ವಿರೋಧಿ ಆಗಬೇಡ" ಎಂದು ಅನೇಕ ಕೋಗಿಲೆಗಳು ಸುಶ್ರಾವ್ಯಕುಮಾರನನ್ನು ಎಚ್ಚರಿಸಿದವು. ಆದರೆ ಸುಶ್ರಾವ್ಯಕುಮಾರ ಇವರ ಮಾತಿಗೆ ಬೆಲೆ ಕೊಡದೆ 'ಸಂಗೀತ ಎಲ್ಲರಿಗೂ ಸೇರಿದ್ದು. ಅದರಲ್ಲಿ ಭೇದ-ಭಾವ ಇರಕೂಡದು. ಸಂಗೀತ ಎಲ್ಲವನ್ನು ಮೀರಿದ್ದು" ಎಂದು ಉತ್ತರ ನೀಡಿ ಮರಿ ಕಾಗೆಗೆ ಶಾಸ್ತ್ರೀಯ ಸಂಗೀತ ಹೇಳಿಕೊಡಲು ಶುರು ಮಾಡಿತು.

ಅತಿ ಶೀಘ್ರದಲ್ಲಿ ಮರಿ ಕಾಗೆ ಶಾಸ್ತ್ರೀಯ ಸಂಗೀತದ ಎಲ್ಲಾ ಮಗ್ಗಲುಗಳನ್ನು, ವಿಷಯಗಳನ್ನು ಅರಿಯಿತು. ಸೊಗಸಾಗಿ ಹಾಡಲು ಕಲಿಯಿತು. ಶಾಸ್ತ್ರೀಯ ಸಂಗೀತದಲ್ಲಿದ್ದ ಕೋಗಿಲೆ ಬಳಗದ ಅನೇಕ ದೇವರನಾಮ, ಶ್ಲೋಕ, ಪದಗಳನ್ನು ಕಂಠಪಾಠ ಮಾಡಿ ಹಾಡಲು ಶುರು ಮಾಡಿತು. ಗುರು ಸುಶ್ರಾವ್ಯಕುಮಾರನ ಜೊತೆಗೆ ಅನೇಕ ಕಡೆ ಸಂಗೀತ ಕಚೇರಿಗಳನ್ನು ನೀಡಿತು. ಗುರುವಿನ ಜೊತೆಗೆ ಶಿಷ್ಯನು ಹಾಡುತ್ತಿರುವುದನ್ನು ಕಂಡ ಕಾಡಿನ ಪ್ರಾಣಿಗಳೆಲ್ಲವೂ, "ಹೊಲಸು ತಿನ್ನುವ ಜಾತಿಗೆ ಸೇರಿರುವ ಆ ಕಾಗೆ ಎಷ್ಟು ಚೆನ್ನಾಗಿ ಹಾಡುತ್ತಿದೆ" ಎಂದು ಒಪ್ಪಿಕೊಂಡವು. ಕ್ರಮೇಣ ಇತರ ಕಾಗೆಗಳು ಕೂಡ ಮರಿ ಕಾಗೆಯ ಹಾದಿ ಹಿಡಿದವು. ಸುಶ್ರಾವ್ಯಕುಮಾರ ತನ್ನ ಉದಾರತನದಿಂದ ಅವುಗಳಿಗೆಲ್ಲಾ ಉಚಿತವಾಗಿ ಸಂಗೀತ ಕಲಿಸಿತು. ಎಲ್ಲಾ ಪ್ರಾಣಿಗಳ ಪ್ರಶಂಸೆಗೆ ಒಳಗಾಯಿತು. ಮೊದಮೊದಲು ವಿರೋಧಿಸಿದ್ದ ಕೋಗಿಲೆಗಳು ಈಗ ಸುಶ್ರಾವ್ಯಕುಮಾರನ ಪ್ರಸಿದ್ಧಿಯನ್ನು ಒಪ್ಪಿಕೊಳ್ಳದೆ ವಿಧಿಯಿರಲಿಲ್ಲ. ಅವುಗಳು ಈಗ ಸುಶ್ರಾವ್ಯಕುಮಾರ "ನಮ್ಮವನೆ" ಎಂದು ಸಂತೋಷದಿಂದ ಒಪ್ಪಿಕೊಂಡು ಅದು ಮತ್ತಷ್ಟು ಪ್ರಸಿದ್ಧಿಯನ್ನು ಪಡೆಯಲು ಕಾರಣಕರ್ತರಾದರು; ಅವು ಎಲ್ಲಾ ಕಡೆ ಸುಶ್ರಾವ್ಯಕುಮಾರನ ಗುಣಗಾನವನ್ನು ಹಾಡಿ, ಹೊಗಳಿದವು. ಶಾಸ್ತ್ರೀಯ ಸಂಗೀತ ಸಂಪ್ರದಾಯದ ವಿರುದ್ಧ ಸಿಡಿದು, ಕಾಗೆಗೆ ಸೊಗಸಾಗಿ ಹಾಡಲು ಕಲಿಸಿದ್ದಕ್ಕೆ ಕಾಡಿನ ಇತರ ಪ್ರಾಣಿಗಳು ಸುಶ್ರಾವ್ಯಕುಮಾರನಿಗೆ ಪ್ರಶಸ್ತಿ ನೀಡಿ ಗೌರವಿಸಿದವು.

******

ಇದುವರೆಗೂ ದೇವರ ನಾಮ, ಶ್ಲೋಕಗಳನ್ನು ಹಾಡುತ್ತಿದ್ದ ಕಾಗೆಗಳು ಕ್ರಮೇಣ ತಮ್ಮ ಬಳಗದ ಹಾಡನ್ನು ಶಾಸ್ತ್ರೀಯ ಸಂಗೀತಕ್ಕೆ ಅಳವಡಿಸಿ ಹಾಡಲು ಶುರು ಮಾಡಿದವು. ಸುಶ್ರಾವ್ಯಕುಮಾರನಿಂದ ಕಲಿತಿದ್ದ ದೇವರ ನಾಮ, ಪದ ಮತ್ತು ಶ್ಲೋಕಗಳು ಪಕ್ಕಕ್ಕೆ ಸರಿಸಲ್ಪಟ್ಟವು.

******

ಸುಶ್ರಾವ್ಯಕುಮಾರ ಕೋಗಿಲೆ ಈಗ ತನ್ನ ಗೂಡಿನ ಮುಂದೆ "ಶಾಸ್ತ್ರೀಯ ಸಂಗೀತ ಪಾಠ ಕೇವಲ ಕೋಗಿಲೆಗಳಿಗೆ ಮಾತ್ರ" ಎಂಬ ನಾಮಫಲಕವನ್ನು ನೇತುಹಾಕಿದೆ.

■ ಡಾ.ವಿಜಯಕುಮಾರ ಎಂ.ಬೋರಟ್ಟಿ

ವಾಕ್ ಸ್ವಾತಂತ್ರ್ಯ, ಸೇನೆಯ ಅತಿ ವೈಭವೀಕರಣ, ಮಾಧ್ಯಮಗಳು ಮತ್ತು ಮೋದಿ ಸರ್ಕಾರ

ಕರ್ನಾಟಕವೂ ಸೇರಿದಂತೆ ದೇಶದುದ್ದಗಲಕ್ಕೂ ಸಂಘ ಪರಿವಾರದ ಕಾಲಾಳು ಪಡೆಗಳ ಅಟ್ಟಹಾಸ ಮೇರೆ ಮೀರುತ್ತಿರುವುದಕ್ಕೆ ಮೋದಿ ಸರ್ಕಾರದ ಪ್ರೋತ್ಸಾಹ, ಬೆಂಬಲ ಮತ್ತು ಕೃಪಾದೃಷ್ಟಿಗಳೇ ಕಾರಣವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಭಾರತದಲ್ಲಿ ಇಂದು ಇರುವಂಥಾ ಇಷ್ಟೊಂಥು ದೊಡ್ಡ ಪ್ರಮಾಣದ ಅಸಹಿಷ್ಣುತೆಯ ವಾತಾವರಣ ಹಿಂದೆಂದೂ ಇರಲಿಲ್ಲ. 75ರ ತುರ್ತು ಪರಿಸ್ಥಿತಿ ಇದರ ಮುಂದೆ ನಿಸ್ತೇಜವಾಗಿಬಿಡುತ್ತದೆ. ಇವತ್ತಿನ ಅಘೋಷಿತ ತುರ್ತು ಪರಿಸ್ಥಿತಿ ಹೇಗಿದೆ ಎಂದರೆ ಸಂಘಿ ಗೂಂಡಾ ಪಡೆಗಳ ಒತ್ತಡಕ್ಕೆ ಮಣಿದರೆ ಸರಿ, ಇಲ್ಲವಾದರೆ ಮೂಗೊತ್ತಿ ಬಾಯ್ಬಿಡಿಸಲಾಗುತ್ತದೆ. ಇತ್ತೀಚೆಗೆ ಇಂತಹ ಒಂದು ತುಂಡು ಸಂಘಟನೆಯ ಪೋಕರಿಗಳು ಸೇರಿ ಮುಂಬಯಿನಲ್ಲಿ ನಡೆಯುತ್ತಿದ್ದ 'ರಿಲಾಯನ್ಸ್ ಜಿಯೊ' ಪ್ರಾಯೋಜಿತ, 'ಮಾಮಿ' ಸಿನಿಮಾ ಮೇಳದಲ್ಲಿ "ಜಾಗೊ ಹುವಾ ಸವೇರಾ" ಎಂಬ ಪಾಕಿಸ್ತಾನಿ ಸಿನಿಮಾವನ್ನು ಪ್ರದರ್ಶಿಸಕೂಡದೆಂದು ಪ್ರತಿಭಟನೆ ನಡೆಸಿದರು. 'ರಿಲಾಯನ್ಸ್ ಜಿಯೊ' ಮಾಲಿಕನಾದ ಮುಕೇಶ್ ಅಂಬಾನಿ ಮೋದಿಯ ನಿಕಟವರ್ತಿ ಎಂದಮೇಲೆ ಕೇಳಬೇಕೆ. ಮೇಳದ ಸಂಘಟಕರು ಯಾವುದೇ ದೂರು ನೀಡಲು ಹೋಗದೆ ಅಥವಾ ಮಾತುಕತೆಗೆ ಮುಂದಾಗದೆ ಪ್ರದರ್ಶನವನ್ನು ಒಡನೆಯೆ ರದ್ದುಗೊಳಿಸಿದರು!


ಸದ್ಯ ವಿವಾದದ ಸುಳಿಯಲ್ಲಿರುವ ಇನ್ನೊಂದು ಸಿನಿಮಾ "ಐ ದಿಲ್ ಹೈ ಮುಷ್ಕಿಲ್"ನಲ್ಲಿ ಪಾಕಿಸ್ತಾನಿ ನಟ ಫವಾದ್ ಖಾನ್‌ನನ್ನು ಬಳಸಿಕೊಳ್ಳಲು ಕರಣ್ ಜೋಹರ್ ನಿರ್ಧರಿಸಿದುದು ಎರಡು ವರ್ಷಗಳ ಹಿಂದೆ ಇದೇ ಮೋದಿ ಪಾಕಿಸ್ತಾನದೊಂದಿಗೆ ಸಂಬಂಧಗಳನ್ನು ವೃದ್ಧಿಸಬೇಕೆಂದು ಹೇಳುತ್ತಿದ್ದ ಕಾಲದಲ್ಲಿ. ಆದರೆ ಮೊನ್ನೆ ಇದ್ದಕ್ಕಿದ್ದಂತೆ ಮಹಾರಾಷ್ಟ್ರ ನವನಿರ್ಮಾಣ ಸೇನೆ ಎಂಬ ಮತ್ತೊಂದು ತುಂಡು ಪಡೆ ಸಿನಿಮಾ ಪ್ರದರ್ಶನವನ್ನು ಬಲಪ್ರಯೋಗದ ಮೂಲಕ ನಿಲ್ಲಿಸುವೆವು ಎಂದು ಬೆದರಿಕೆ ಹಾಕತೊಡಗಿತು. ಇತ್ತೀಚಿನ ವರ್ತಮಾನಗಳ ಪ್ರಕಾರ ನವನಿರ್ಮಾಣ ಸೇನೆ, ಮಹಾರಾಷ್ಟ್ರ ಮುಖ್ಯಮಂತ್ರಿ ಫಡ್ನವೀಸ್ ಮತ್ತು ತಯಾರಕರ ನಡುವೆ "ಸಂಧಾನ ಮಾತುಕತೆ"ಗಳಾದ ಬಳಿಕ ಕೈಗೊಂಡ ತೀರ್ಮಾನ ಏನೆಂದರೆ ಪಾಕಿಸ್ತಾನಿ ನಟರನ್ನು ಬಳಸಿಕೊಂಡಿರುವ ತಯಾರಕರು ಸೇನಾ ಕಲ್ಯಾಣ ನಿಧಿಗೆ ಐದು ಕೋಟಿ ರೂಪಾಯಿಗಳನ್ನು ನೀಡಲೊಪ್ಪಿದರೆ ಸಿನಿಮಾ ಪ್ರದರ್ಶಿಸಬಹುದಂತೆ! ಈ "ಡೀಲ್"ನಲ್ಲಿ ಇನ್ನೂ ಯಾರ್ಯಾರಿಗೆ ಪಾಲಿದೆಯೊ ಗೊತ್ತಿಲ್ಲ! ಚಿತ್ರಪ್ರದರ್ಶನಕ್ಕೆ ಸೆನ್ಸಾರ್ ಮಂಡಳಿಯಿಂದ ಅನುಮತಿ, ಕೇಂದ್ರ ಗೃಹಸಚಿವರಿಂದ ಭರವಸೆ ದೊರೆತ ಬಳಿಕವೂ ಮುಖ್ಯಮಂತ್ರಿಯೊಬ್ಬ ಈ ಸಂವಿಧಾನ ವಿರೋಧಿ ಗೂಂಡಾಪಡೆ ಪರವಾಗಿ ಇಂತಹ ನೀಚಮಟ್ಟದ ವ್ಯವಹಾರಕ್ಕಿಳಿದಿರುವುದನ್ನು ಏನೆನ್ನಬೇಕು? ಇದಕ್ಕೆ ಈಗಾಗಲೆ ಸೇನಾವಲಯಗಳಿಂದ ತೀವ್ರ ವಿರೋಧ ವ್ಯಕ್ತವಾಗಿರುವುದು ಸಹಜವೆ ಆಗಿದೆ. ಏಕೆಂದರೆ ಖಂಡಿತಾ ಈ ರೀತಿ ಸುಲಿಗೆ ಮಾಡಿದ ಹಣವನ್ನು ತೆಗೆದುಕೊಳ್ಳಲು ಸ್ವಾಭಿಮಾನವಿರುವ ಯಾವನೆ ಯೋಧ ಒಪ್ಪಲಾರ. ಪ್ರತಿರೋಧಗಳ ನಡುವೆಯೂ ಸೇನೆ ಸಮ್ಮತಿಸಿತೆಂದಾದರೆ ಕೇಸರೀಕರಣ ಅರ್ಥಾತ್ ಹಿಂದೂ ರಾಷ್ಟ್ರ ಸ್ಥಾಪನೆಯ ಪ್ರಕ್ರಿಯೆ ಮತ್ತೊಂದು ಸೋಪಾನ ಏರಿತೆಂದರ್ಥ.

ಸುಮಾರು ಒಂದೆರಡು ವಾರಗಳ ಹಿಂದೆ ಇನ್ನೊಂದು ವಿಲಕ್ಷಣ ಘಟನೆ ನಡೆಯಿತು. ಯುಪಿಎ ಸರ್ಕಾರದಲ್ಲಿ ಹಲವಾರು ವರ್ಷಗಳ ಕಾಲ ಅರ್ಥ ಹಾಗೂ ಗೃಹಸಚಿವರಾಗಿದ್ದ ಭಾರತದ ಅತ್ಯುತ್ತಮ ಲಾಯರ್‌ಗಳಲ್ಲೊಬ್ಬರೆಂದು ಗುರುತಿಸಲ್ಪಟ್ಟಿರುವ ಪಿ.ಚಿದಂಬರಂ ಜೊತೆ ಸಂದರ್ಶನ ನಡೆಸಿದ ಎನ್‌ಡಿಟಿವಿ, ಬಳಿಕ ಕೊನೆಗಳಿಗೆಯಲ್ಲಿ ಪ್ರಸಾರವನ್ನು ರದ್ದುಗೊಳಿಸಿತು. ರದ್ಧತಿಗೆ ಕಾರಣವನ್ನು ಎನ್‌ಡಿಟಿವಿ ಕೊಟ್ಟಿರುವ ಸಮಜಾಯಿಷಿಯೆ ಪರೋಕ್ಷವಾಗಿ ಸೂಚಿಸುತ್ತದೆ: "ನಮಗೆ ಸಂಪಾದಕೀಯ ಮತ್ತು ಪತ್ರಿಕಾವೃತ್ತಿಯ ನಿಯತ್ತನ್ನು ಉಳಿಸಿಕೊಳ್ಳುವುದು ಮುಖ್ಯ. ನಮ್ಮ ಅಭಿಪ್ರಾಯದಲ್ಲಿ ನಿರ್ದಿಷ್ಟ ದಾಳಿಗಳ ಬಗ್ಗೆ ಪುರಾವೆ ಇಲ್ಲದೆ ರಾಜಕೀಯ ಕೆಸರೆರಚಾಟ ನಡೆಸುವುದು ರಾಷ್ಟ್ರೀಯ ಭದ್ರತೆಗೆ ಧಕ್ಕೆ ಉಂಟುಮಾಡುತ್ತದೆ. ಸಾರ್ವಜನಿಕ ಚರ್ಚೆಯ ಹೆಸರಲ್ಲಿ ಹೊರಬೀಳುತ್ತಿರುವ ಬಾಲಿಶ ಹೇಳಿಕೆಗಳನ್ನೆಲ್ಲಾ ಪ್ರಸಾರ ಮಾಡಬೇಕಾಗಿದೆ ಎಂದು ನಾವು ಭಾವಿಸುವುದಿಲ್ಲ". ಅಂದರೆ ಇಂಗ್ಲಿಷ್ ಟಿವಿ ವಾಹಿನಿಗಳಲ್ಲಿ ಸ್ವಲ್ಪಮಟ್ಟಿಗೆ ನಿಷ್ಪಕ್ಷಪಾತಿ, ಪ್ರಗತಿಪರ ಎಂದೆನಿಸಿದ್ದ ಎನ್‌ಡಿಟಿವಿ ಸಹಿತ ಮೋದಿ ಸರ್ಕಾರಕ್ಕೆ ತಲೆಬಾಗಿ ಮಂಡಿಯೂರಿರುವ ಮಾಧ್ಯಮಗಳ ಸಾಲಿಗೆ ಸೇರಿಬಿಟ್ಟಿದೆ ಎಂದಾಯಿತು. ಇದರ ಹಿಂದ ಕೂಡಾ [illegible] ಮುಕೇಶ್ ಅಂಬಾನಿಯ ಕೈವಾಡ ಇರುವಂತಿದೆ. ಏಕೆಂದರೆ 2008ರಲ್ಲಿ ಎನ್‌ಡಿಟಿವಿ ಆರ್ಥಿಕ ದುಸ್ಥಿತಿಯಲ್ಲಿದ್ದಾಗ ಜೀವಾನಿಲ ನೀಡಿ ಅದನ್ನು ಮೇಲಕ್ಕೆತ್ತಿದ್ದ ಅಂಬಾನಿ ಎನ್ನಲಾಗಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ; ಸೇನೆಯ ಅತಿ ವೈಭವೀಕರಣ


ಫ್ಯಾಸಿಸ್ಟ್ ಪ್ರಭುತ್ವವೊಂದು ಮೊತ್ತಮೊದಲಿಗೆ ಮಾಡುವ ಕೆಲಸವೆಂದರೆ ಕಲೆ, ಸಂಸ್ಕೃತಿ, ಶಿಕ್ಷಣ ಕ್ಷೇತ್ರಗಳ ಜತೆಗೆ ಪ್ರಜಾಸತ್ತೆಯ ನಾನಾ ಅಂಗಗಳಾದ ಕಾರ್ಯಾಂಗ, ನ್ಯಾಯಾಂಗ, ಮಾಧ್ಯಮ, ಪೊಲೀಸ್, ಗುಪ್ತಚರ ವಿಭಾಗ, ಸೇನೆ ಮುಂತಾದವುಗಳನ್ನು ತನ್ನ ನಿಯಂತ್ರಣದಲ್ಲಿರಿಸಿಕೊಳ್ಳುವುದು. ಅದೇ ವೇಳೆ ಪ್ರಗತಿಪರ, ಸಮಾಜಮುಖಿ ಹೋರಾಟಗಾರರನ್ನು ಬಗ್ಗುಬಡಿಯಲು ವಿವಿಧ ಕುತಂತ್ರಗಳನ್ನು ಪ್ರಯೋಗಿಸಲಾಗುತ್ತದೆ. 2014ರ ಮೇ ತಿಂಗಳಿನಿಂದ ಇದನ್ನೆ ಮಾಡುತ್ತಿರುವ ಹಿಂದೂ ರಾಷ್ಟ್ರವಾದಿಗಳು ಈಗಾಗಲೆ ಅನೇಕ ಸಂಘಸಂಸ್ಥೆಗಳನ್ನು ತಮ್ಮ ಕಪಿಮುಷ್ಟಿಯೊಳಗೆ ಇರಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ. ಅಂತಾರಾಷ್ಟ್ರೀಯ ಕಾನೂನು ಆಯೋಗದಂತಹ ಪ್ರಮುಖ ಸಂಸ್ಥೆಗೆ ಭಾರತದ ಪ್ರತಿನಿಧಿಯಾಗಿ ಓರ್ವ ಅನನುಭವಿ ಆರೆಸ್ಸೆಸಿಗನನ್ನು ನೇಮಕ ಮಾಡಲಾಗಿರುವುದು ಇತ್ತೀಚಿನ ಬೆಳವಣಿಗೆ. ಅಭಿವ್ಯಕ್ತಿ ಸ್ವಾತಂತ್ರ್ಯದ ವಿಷಯಕ್ಕೆ ಬಂದರೆ ಮೋದಿ ಸರ್ಕಾರದಡಿ ನಿರ್ಬಂಧಗಳು ದಿನೇದಿನೇ ಹೆಚ್ಚುತ್ತಿರುವುದನ್ನು ಕಾಣಬಹುದು. ಜ್ವಲಂತ ಸಮಸ್ಯೆಗಳ ಕುರಿತ ಸಂವಾದ ಕಾರ್ಯಕ್ರಮಗಳಿಗೆ ಎಬಿವಿಪಿ, ವಿಹಿಂಪ, ಬಜರಂಗ ದಳ ಮೊದಲಾದ ಪದಾತಿದಳಗಳಿಂದ ಬಲಪ್ರಯೋಗದ ಮೂಲಕ ತಡೆಯೊಡ್ಡಲಾಗುತ್ತಿದೆ. ಉರಿ ದಾಳಿಯ ಬಳಿಕವಂತೂ ರಾಷ್ಟ್ರೀಯತೆ, ದೇಶಪ್ರೇಮ, ದೇಶದ್ರೋಹ ಇತ್ಯಾದಿ ಬಗ್ಗೆ ದೃಶ್ಯ ಮಾಧ್ಯಮಗಳಲ್ಲಿ ಅನಗತ್ಯ, ಅನಾರೋಗ್ಯಕರ, ಕೀಳುಮಟ್ಟದ ಚರ್ಚೆಗಳು ಪ್ರಾರಂಭವಾಗಿವೆ. ದೇಶಪ್ರೇಮದ ಬದಲಾದ ವ್ಯಾಖ್ಯಾನಗಳ ವಾತಾವರಣದಲ್ಲಿ ಸೇನೆಯನ್ನು ಕಣ್ಮುಚ್ಚಿಕೊಂಡು ಹೊಗಳದವರು, ವೈಭವೀಕರಿಸದವರೆಲ್ಲ ದೇಶದ್ರೋಹಿಗಳು ಎಂದಾಗಿದೆ. ಸೇನಾಪಡೆಗಳ ವಿಶೇಷಾಧಿಕಾರ ಕಾಯ್ದೆಯ ದುರ್ಬಳಕೆ, ರೇಪ್, ಇನಾಮಿಗಾಗಿ ಎನ್‌ಕೌಂಟರ್ ಮೊದಲಾದ ದುಷ್ಕೃತ್ಯಗಳನ್ನು ಪ್ರಶ್ನಿಸುವುದು ದೇಶದ್ರೋಹವೆಂದು ಬಿಂಬಿಸಲಾಗುತ್ತಿದೆ. ಅಸಲಿಗೆ ವಿಷಯ ಏನೆಂದರೆ ಹಿಂದೂ ರಾಷ್ಟ್ರ ಎಂಬ ಫ್ಯಾಸಿಸ್ಟ್ ಸರ್ವಾಧಿಕಾರಿ ಪ್ರಭುತ್ವದ ಸ್ಥಾಪನೆ ಹಾಗೂ ಮುಂದುವರಿಕೆಗೆ ಸೇನೆಯ ಬೆಂಬಲ ಬೇಕೇಬೇಕು. ಅದಿಲ್ಲವಾದರೆ ಮುಂದೊಂದು ದಿನ ಸರ್ಕಾರದ ವಿರುದ್ಧ ದಂಗೆಯೇಳಲಿರುವ ಜನರನ್ನು ನಿಯಂತ್ರಿಸುವುದು ಅಸಾಧ್ಯ. ಸೇನೆಯನ್ನು ಕೇಸರೀಕರಣಗೊಳಿಸುವ ಯತ್ನದ ಭಾಗವಾಗಿ ತುತ್ತೂರಿ ಮಾಧ್ಯಮಗಳ ಮುಖಾಂತರ ಸೇನೆಯನ್ನು, ಸೈನಿಕರನ್ನು ಅತಿಯಾಗಿ ವೈಭವೀಕರಿಸುವುದರ ಹಿಂದಿನ ಗುಟ್ಟು ಇದೇ ಆಗಿದೆ.

ಆರೆಸ್ಸೆಸ್ ಮುಖ್ಯಸ್ಥರು ಆತ್ಮರತಿ, ಪ್ರಚಾರದ ತೆವಲು ಮತ್ತು ಸರ್ವಾಧಿಕಾರಿ ಪ್ರವೃತ್ತಿಗಳುಳ್ಳ ನರೇಂದ್ರ ಮೋದಿಯನ್ನೆ ಪ್ರಧಾನಿ ಸ್ಥಾನಕ್ಕೆ ಆಯ್ಕೆ ಮಾಡಿರುವುದರ ಹಿಂದೆ ನಿರ್ದಿಷ್ಟ ಲೆಕ್ಕಾಚಾರಗಳಿವೆ. ಇಂತಹ ವ್ಯಕ್ತಿಗೆ ಅತಿಮಾನುಷ ಇಮೇಜು ನೀಡುವ ಮೂಲಕ ಭಾರತದ ಅನಭಿಷಿಕ್ತ ದೊರೆಯಾಗಿ ದೇಶವನ್ನಾಳಲು ಆತನಿಗಿಂತ ಸಮರ್ಥರು ಇನ್ನಾರೂ ಇಲ್ಲವೆಂಬ ಭಾವನೆಯನ್ನು ಬಿತ್ತುವುದು ಆರೆಸ್ಸೆಸ್‌ನ ಹಿಂದೂ ರಾಷ್ಟ್ರ ನಿರ್ಮಾಣದ ಅಜೆಂಡಾದ ಒಂದು ಅತಿಮುಖ್ಯ ಅಂಶವಾಗಿದೆ. ಆದುದರಿಂದಲೆ ಮೋದಿಯ ಸುತ್ತ ನಾನಾ ಕಟ್ಟುಕತೆಗಳನ್ನು ಹೆಣೆಯಲಾಗುತ್ತಿದೆ. ಮೋದಿ ಓರ್ವ ಅತಿಮಾನುಷ, ರಾಕ್ಷಸ (= ಅಲ್ಪಸಂಖ್ಯಾತರು) ಸಂಹಾರಿ ರಾಮ, ಸೋಲರಿಯದ ಅಜೇಯ ನಾಯಕ, ಕಠಿಣ ನಿರ್ಧಾರಗಳಿಗೆ ಇನಿತೂ ಹಿಂಜರಿಯದ ಪ್ರಧಾನಿ ಎಂಬಂತೆ ಬಿಂಬಿಸಲಾಗುತ್ತಿದೆ. ಅಂದು ಉತ್ತರಾಖಂಡದಲ್ಲಾದ ಮಹಾಪೂರದ ಸಂದರ್ಭದಲ್ಲಿ ಸಾವಿರಾರು ಯಾತ್ರಿಕರನ್ನು ಮೋದಿಯೊಬ್ಬನೆ ರಕ್ಷಿಸಿದ್ದನೆಂಬ ಸುಳ್ಳನ್ನು ಹರಿಯಬಿಟ್ಟುದನ್ನು ನೆನಪಿಸಿಕೊಳ್ಳಬಹುದು. ವಿದೇಶೀ ರಾಷ್ಟ್ರಗಳ ನಾಯಕರುಗಳ ಮೇಲೆ, ಶೃಂಗಸಭೆಗಳ ಮೇಲೆ ಪ್ರಭಾವ ಬೀರುವವನಂತೆ ತೋರಿಸಿಕೊಳ್ಳುತ್ತಿರುವುದೂ ಇದೇ ಇಮೇಜು ಬೆಳೆಸುವ ಕಾರ್ಯಕ್ರಮದ ಭಾಗವಾಗಿದೆ. ಇದಕ್ಕೆ ಇತ್ತೀಚಿನ ಸೇರ್ಪಡೆಯೆಂದರೆ ಸೆಪ್ಟಂಬರ್ 29ರಂದು ನಡೆದುದೆನ್ನಲಾದ "ನಿರ್ದಿಷ್ಟ ದಾಳಿ"ಗಳು. ಅದಕ್ಕೂ ಮೊದಲು ಭಾರತೀಯ ಸೇನೆ ಮಯನ್ಮಾರ್ ಗಡಿಯೊಳಗೆ ನುಗ್ಗಿ ನಡೆಸಿದ (ಮತ್ತು ಈಗಲೂ ನಡೆಸುತ್ತಿರುವ) ಇಂತಹುದೆ ದಾಳಿಗಳಿಗೆ ವ್ಯಾಪಕ ಪ್ರಚಾರ ನೀಡಿ ಅದರ ದುರ್ಲಾಭ ಪಡೆಯುವ ಯತ್ನ ಮೋದಿ ಸರ್ಕಾರದಿಂದ ನಡೆದಿತ್ತು. ಆದರೆ ವಾಸ್ತವವಾಗಿ ಉಭಯ ದೇಶಗಳ ನಡುವಿನ ಒಪ್ಪಂದದನ್ವಯ ಇಂತಹ ಕಾರ್ಯಾಚರಣೆಗಳನ್ನು ರಹಸ್ಯವಾಗಿಡಬೇಕಾಗಿತ್ತು. ಮಯನ್ಮಾರ್ ಸರಕಾರದಿಂದ ಭಾರಿ ಆಕ್ಷೇಪ ವ್ಯಕ್ತವಾದ ಬಳಿಕ ಮುಖ ಸಪ್ಪೆ ಮಾಡಿಕೊಂಡ ಮೋದಿ ಸರ್ಕಾರ ಮನಸ್ಸಿಲ್ಲದ ಮನಸ್ಸಿನಿಂದ ಪ್ರಚಾರವನ್ನು ನಿಲ್ಲಿಸಬೇಕಾಗಿ ಬಂದಿದೆ!



"ನಿರ್ದಿಷ್ಟ ದಾಳಿ"ಗಳನ್ನು ರಾಜಕೀಯ ಉದ್ದೇಶಕ್ಕೆ ಬಳಸಲಾಗದೆಂದು ಹೇಳಿದ್ದ ಸಂಘಿಗಳು ನಂತರ ಅದರಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸಲು ಶುರುಮಾಡಿದ್ದಾರೆ. ವರ್ತಮಾನ ಹಾಗೂ ಭವಿಷ್ಯತ್ತಿನಲ್ಲಿ ಗರಿಷ್ಠ ಚುನಾವಣಾ ಲಾಭ ಹಿರಿದುಕೊಳ್ಳುವುದು ಸಂಘಿಗಳ ರಾಜಕೀಯ ಮುಖವಾದ ಬಿಜೆಪಿಯ ಉದ್ದೇಶವಾಗಿದೆ. ಆರಂಭದಲ್ಲಿ "ನಿರ್ದಿಷ್ಟ ದಾಳಿ"ಗಳ ಸಂಪೂರ್ಣ ಶ್ರೇಯಸ್ಸು ಕೇವಲ ಸೇನೆಗಷ್ಟೆ ಸಲ್ಲಬೇಕು ಎಂದ ಬಿಜೆಪಿ ನಾಯಕರು ಹತ್ತೇ ದಿನಗಳಲ್ಲಿ ಪಲ್ಲವಿ ಬದಲಾಯಿಸಿದರು. ವಿಷಯವನ್ನು ಜನತೆಯ ಬಳಿಗೊಯ್ಯಬೇಕೆಂದು ಬಿಜೆಪಿ ಅಧ್ಯಕ್ಷ ಅಮಿತ್ ಶಾ ಹೇಳಿದರೆ ರಕ್ಷಣಾಮಂತ್ರಿ ಪರಿಕ್ಕರ್ ಪ್ರಶಂಸೆಯ ಗರಿಷ್ಠ ಪಾಲು ಮೋದಿಗೆ ಸಿಗಬೇಕು ಎಂದ. ತರುವಾಯ ಇದೇ ಪರಿಕ್ಕರ್ ಅಹಮದಾಬಾದಿನಲ್ಲಿ ಮತ್ತೊಂದು ಹೊಸ ರಾಗ ಹಾಡಿದ್ದಾನೆ. ನಿರ್ಮಾ ವಿಶ್ವವಿದ್ಯಾನಿಲಯದ "ಭಾರತೀಯ ಸೇನೆ ಕುರಿತು ಅರಿವು ಮೂಡಿಸುವಿಕೆ"ಗಾಗಿ ಎನ್ನಲಾದ 'ಟೆಕ್‌ಫೆಸ್ಟ್' ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂದರ್ಭದಲ್ಲಿ "ನಿರ್ದಿಷ್ಟ ದಾಳಿ" ನಡೆಸುವ ತಮ್ಮಿಬ್ಬರ (ತಾನು ಮತ್ತು ಮೋದಿ) ನಿರ್ಧಾರಕ್ಕೆ ಆರೆಸ್ಸೆಸ್ ನೀಡಿರುವ ಶಿಕ್ಷಣವೆ ಕಾರಣವೆಂಬ ರೀತಿ ಮಾತಾಡಿದ್ದಾನೆ. ಹೀಗೆ ರಹಸ್ಯವಾಗಿರಿಸಬೇಕಿದ್ದ ಸೇನಾ ಕಾರ್ಯಾಚರಣೆಗಳಿಗೆ ಇಷ್ಟೊಂದು ಪ್ರಚಾರ ಕೊಡುತ್ತಿರುವುದೆ ದೇಶದ ಗಡಿ ರಕ್ಷಣೆ ಮಾಡಲು ಕೇವಲ ಮೋದಿಯೊಬ್ಬನೆ ಸಮರ್ಥನೆಂದು ಬಿಂಬಿಸಲು. ಮೋದಿಯೂ ಹೆಚ್ಚುಕಮ್ಮಿ ಎಲ್ಲಾ ಭಾಷಣಗಳಲ್ಲಿ

ಬೂಸಿ ಬಸ್ಯ ಮೋದಿ



ಒಂದಲ್ಲ ಒಂದು ವಿಧದಲ್ಲಿ ಸೇನೆಯ ಪ್ರ
ಮಾಡತೊಡಗಿದ್ದಾನೆ. ಈಗಾಗಲೆ ತನ್ನ "ಸಂದೇಶ್
ಸೋಲ್ಜರ್ಸ್" ಎಂಬ ಖಾತೆಯ ಮೂಲಕ
ಯೋಧರಿಗೆ ದೀಪಾವಳಿ ಶುಭಾಶಯಗಳನ್ನು ಕ
ಎನ್ನುತ್ತಿದ್ದಾನೆ. ಮುಂದೆ ದೂರದರ್ಶನ ಅವುಗಳನ್ನು ಆ
ವಿಶೇಷ ಕಾರ್ಯಕ್ರಮಗಳನ್ನು ತಯಾರಿಸಲಿದೆಯ
ಅಕ್ಟೋಬರ್ 18ರಂದು ಹಿಮಾಚಲ ಪ್ರದೇಶದಲ್ಲಿ ನ
ಸಭೆಯೊಂದರ ವೇಳೆ ಮೋದಿ ಭಾರತೀಯ ಸೇನೆ
ಇಸ್ರೇಲಿ ಸೇನೆಗೆ ಹೋಲಿಸಿದ್ದಾನೆ. ಆದರೆ ಇಸ್ರೇಲಿ
ವಿಶ್ವಸಂಸ್ಥೆಯ ನಿಯಮಾವಳಿಗಳನ್ನು ಉಲ್ಲಂಘಿಸುತ್ತಿದೆ.
ಮೇಲೆ ಯುದ್ಧಾಪರಾಧಗಳ ಆರೋಪಗಳಿವೆ. ಪ್ರ
ಮಂತ್ರಿ ಸ್ಥಾನದಲ್ಲಿರುವವರು ಇಸ್ರೇಲಿನ
ಕಾರ್ಯಾಚರಣೆಗಳನ್ನು ಹೊಗಳುವುದೆಂದರೆ ಅಧಿಕೃತ
ಸರಕಾರದ ನಿಲುವುಗಳು ಬದಲಾಗಿರುವುದರ ಸೂ
ಇದು ನಿಜವೂ ಹೌದು. ಇಸ್ರೇಲ್ ಅಂತಾರಾಷ್ಟ್ರ
ಮಾನವೀಯತ ಕಾನೂನನ್ನು ಉಲ್ಲಂಘಿಸುತ್ತಿರುವ
ಖಂಡಿಸುತ್ತಾ ಬಂದಿರುವ ಭಾರತ ಏಪ್ರಿಲ್ 20
ನಂತರದಲ್ಲಿ ತನ್ನ ನಿಲುವನ್ನು ಬದಲಾಯಿಸಿದೆ. ಈ
ವಿಶ್ವಸಂಸ್ಥೆಯಲ್ಲಿ ಈ ಕುರಿತಂತೆ ನಡೆದ ಮತದಾನದ
ಭಾರತ ಗೈರುಹಾಜರಾಗಿದೆ. ವಾಸ್ತವವಾಗಿ ಮ
ದ್ವೇಷಿಯೂ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದ
ದೇಶವೂ ಆದ ಇಸ್ರೇಲ್ ಅಂದರೆ ಸಂಘಿ
ಮೊದಲಿನಿಂದಲೂ ಅಚ್ಚುಮೆಚ್ಚು. ಆರೆಸ್ಸೆಸ್‌ನ ಶಾಖಾಗ
ಇಸ್ರೇಲ್‌ಅನ್ನು ಭರ್ಜರಿಯಾಗಿ ಹೊಗಳಲಾಗು
ಮತ್ತೊಂದು ಮುಖ್ಯ ವಿಷಯವೆಂದರೆ ಇಸ್ರೇಲ್‌ನಲ್ಲಿ
ಸೇನಾಪಡೆಗಳನ್ನು ವೈಭವೀಕರಿಸಲಾಗುತ್ತದೆ. ಹೀಗಾಗಿ
ಸೇನಾಪಡೆ ಕುರಿತ ಬರಹಗಳು ಪ್ರಕಟಣೆಗೆ ಮ
ಸೆನ್ಸಾರ್‌ಶಿಪ್‌ಗೆ ಒಳಪಡುತ್ತವೆ.

ಭಾರತೀಯ ಮಾಧ್ಯಮಗಳು

ಪ್ರಜಾಪ್ರಭುತ್ವವೊಂದರಲ್ಲಿ ಜನ ತಮ್ಮ, ತಮ್ಮ
ತಮಗಾಗಿ ಇರುವ ಸರಕಾರವನ್ನು ಪ್ರಶ್ನಿಸಬಹುದಾ
ಸರಕಾರದ ಅಂಗವಾದ ಸೇನೆಯನ್ನೂ ಖಂ
ಪ್ರಶ್ನಿಸಬಹುದಾಗಿದೆ ಮಾತ್ರವಲ್ಲ ಪ್ರಶ್ನಿಸಲೆಬೇಕಾಗಿದೆ.
ಈ ವಿಷಯದಲ್ಲಿ ಇಂದಿನ ಭಾರತೀಯ ಮಾಧ್ಯಮ
ನಡೆ ಪಾಕಿಸ್ತಾನಕ್ಕಿಂತಲೂ ನಿಕೃಷ್ಟವಾಗಿದೆ ಎಂದು ಬ್ರಿಟ
'ಇಕನಾಮಿಸ್ಟ್' ಪತ್ರಿಕೆ ಹೇಳಿದೆ. ಅದು ಉಭಯ ದೇ
ಮಾಧ್ಯಮಗಳ ವರದಿಗಾರಿಕೆಗಳನ್ನು ಹೋಲಿಸಿದ
ಈ ಅಭಿಪ್ರಾಯಕ್ಕೆ ಬಂದಿದೆ. ಇತ್ತೀಚೆಗೆ ಸರಕಾರ, ಸೇ
ಮಧ್ಯೆ ಜಗಳ ನಡೆದ ಬಗ್ಗೆ ಬರೆದ ಪಾಕಿಸ್ತಾನಿ ಪತ್ರ
ಅಲ್ಮೇಡಾರ ಮೇಲೆ ಪಾಕ್ ಸರ್ಕಾರ ಕೆಂಗಣ್ಣು ಬೀರಿ
ಆತನ ಬೆಂಬಲಕ್ಕೆ ಕೇವಲ ಆತ ಕೆಲಸ ಮಾಡುತ್ತಿ
'ಡಾನ್' ಪತ್ರಿಕೆಯೊಂದೆ ಅಲ್ಲ ಇತರ ಮಾಧ್ಯಮಗ
ನಿಂತವು. ಆದರೆ ಭಾರತದ ಬಹುತೇಕ ಮಾಧ್ಯಮ
"ನಿರ್ದಿಷ್ಟ ದಾಳಿ"ಯನ್ನು ಭಾರಿ ಯಶಸ್ವಿ ಕಾರ್ಯಾಚ
ಎನ್ನುತ್ತಾ ಸರ್ಕಾರವನ್ನು ಅಭಿನಂದಿಸಿದವು ಹೊ
ಪ್ರಶ್ನೆಗಳನ್ನೆತ್ತುವ ಗೋಜಿಗೆ ಹೋಗಲಿಲ್ಲ. ಕೂಗುಮ
ಎಂಬ ಖ್ಯಾತನಾದ ಟಿವಿ ಆಂಕರ್ ಒಬ್ಬ ಸೇನೆಯ
ಪ್ರಶ್ನಿಸುವ ಪತ್ರಕರ್ತರನ್ನು ಬಂಧಿಸಿ ಜೈಲಿಗಟ್ಟಬೇಕ
ಮತ್ತೊಂದು ವಾಹಿನಿ ಸ್ಟೂಡಿಯೋವನ್ನು ಯುದ್ಧ ನಿಯಂ
ಕೊಠಡಿಯಂತೆ ಸಿಂಗರಿಸಿ ತಾವೆಲ್ಲ ಮಹಾ ತಜ್ಞರೆಂಬ
ತೋರಿಸಿಕೊಳ್ಳಲು ಯತ್ನಿಸಿತು. ಮಗದೊಂದು ಟಿವಿ ವಾ
ಮಾಜಿ ಗೃಹಸಚಿವರೊಬ್ಬರ ಸಂದರ್ಶನವನ್ನು ಪ್ರ
ಮಾಡಲು ಹಿಂಜರಿಯಿತು.

ಹಿಂದೆ ಭಾರತದ ಮಾಧ್ಯಮಗಳಲ್ಲಿ ಆಳುವ ಸರಕ
ಸೇನಾ ಕಾರ್ಯಾಚರಣೆಗಳು ಇತ್ಯಾದಿಗಳನ್ನು ಪ್ರಶ್ನಿ

▶▶| 19



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ತಂತ್ರಮೂಲ



ಭಯ ಮತ್ತು ಆಸೆ

ಧರ್ಮ, ದೇವರು, ಮಾಂತ್ರಿಕತೆ, ಆಚರಣೆ, ತಂತ್ರ; ...ವುಗಳ ಯಾವುದರದೇ ಮೂಲವೆಂದರೆ, ಅದು "ಭಯ". ...ಯದಿಂದಾಗಿಯೇ ಎಲ್ಲವೂ ಹುಟ್ಟಿದ್ದು, ಅದರಲ್ಲೂ ...ರಣದ ಭಯ. ಇನ್ನು ಸಾವಿನ ಭಯದ ಜೊತೆಗೆ ...ತ್ತೊಂದು ಆಸೆ ಸೇರ್ಪಡೆಯಾಯಿತು. ಅದು ...ಣಿಸುವುದನ್ನು ತಡೆಗಟ್ಟುವುದು". ಅಂದರೆ, ಶಕ್ತಿ, ಆಯಸ್ಸು, ...ರೋಗ್ಯ, ಸಂಪತ್ತು, ಮೊದಲಾದ ಹಿತ ಮತ್ತು ಸುಖ ...ಡುವ ಯಾವುದೇ ವಿಷಯವು ಕ್ಷೀಣಿಸದಂತೆ ತಡೆಯುವ, ...ಧ್ಯವಾದರೆ ವೃದ್ಧಿಸುವ ಆಸೆಯು ವೈದ್ಯವೇ ಮೊದಲಾದ ...ನೇಕ ತಂತ್ರಗಳ ಆವಿಷ್ಕಾರಗಳಿಗೂ ಕಾರಣವಾಯಿತು.

ಅಂದರೆ ಒಟ್ಟಾರೆ ಭಯ ಮತ್ತು ಆಸೆ; ಈ ಎರಡೇ ...ಲ್ಲಾ ಬಗೆಯ ತಂತ್ರಗಳ ಉಗಮಕ್ಕೆ ಕಾರಣ. ಭಯ ...ತ್ತು ಆಸೆ ಈ ಎರಡೇ ಇಡೀ ಜನಜಗತ್ತನ್ನು ನಾನಾ ...ಗೆಯ ಕಾರ್ಯಕ್ಕೆ ತೊಡಗಿಸಿರುವುದೂ ಹೌದು. ಹಾಗಾಗಿ ...ದನ್ನು ಮೀರಿದ ವಿಷಯನ್ನು ಕಂಡುಕೊಳ್ಳಲು ನಂತರದ ...ತ್ರಸಾಧಕರು ಮತ್ತೊಂದು ಗುರಿಯನ್ನು ಕಂಡುಕೊಂಡರು. ...ದೇ ಮುಕ್ತಿ. ಮುಕ್ತಿ ಎಂದರೆ ಲೌಕಿಕದಲ್ಲಾಗಲಿ ಅಥವಾ ...ರಮಾರ್ಥಿಕದಲ್ಲಾಗಲಿ ಸಾಧಕರ ಅರ್ಥದಲ್ಲಿಯೇ ...ಳುವುದಾದರೆ ಭಯ ಮತ್ತು ಆಸೆಗಳನ್ನು ಮೀರುವುದು. ... ಎರಡೂ ಇಲ್ಲದ ಮನಸ್ಥಿತಿಯು ಯಾವುದೇ ಅಡ್ಡದ ...ರೆಗಳಿಲ್ಲದೇ ಜಗತ್ತಿನ ಯಾವುದೇ ವಿಷಯವನ್ನು ...ಕ್ಷೀಕರಿಸಲಿಕ್ಕೆ ಸಾಧ್ಯ.

ಒಂದು ಸಣ್ಣ ಉದಾಹರಣೆಯನ್ನು ನೀಡುವುದಾದರೆ, ...ವು ಯಾವುದೋ ಬೆಟ್ಟ, ನದಿ, ಕಾಡು- ಹೀಗೆ ನಿಸರ್ಗದ ...ಡಿಲಿಗೆ ಹೋಗುತ್ತೇವೆ. ಆಸೆಯಿಂದ ಕೂಡಿರುವ ವ್ಯಕ್ತಿಯು ...ನ್ನ ಸುಖಕ್ಕೆ ಅಥವಾ ಇಷ್ಟಕ್ಕೆ ದೊರಕುವ ಆಸೆಯಿಂದ ...ಸ್ತುಗಳನ್ನು ಅರಸುತ್ತಾ ಹೋಗುತ್ತಾನೆ. ಆಗ ಅವನ ಇಷ್ಟಕ್ಕೆ ...ಥವಾ ಯಾವುದರಿಂದ ಸುಖ ಸಿಗುವುದೆಂದು ಅವನು ...ವಿಸಿರುತ್ತಾನೋ ಆ ವಸ್ತುವು ದೊರಕುವವರೆಗೆ, ಆ ...ಸ್ತುವಿನ ಹೊರತಾಗಿ, ಅವನಿಗೆ ನಿಸರ್ಗದ ಯಾವುದೇ ...ತರ ವಸ್ತುಗಳು ಗಮನ ಸೆಳೆಯುವುದಿಲ್ಲ. ಮಾನ್ಯತೆ ...ಸುವುದಿಲ್ಲ. ಅದೇ ರೀತಿ ತನಗೆ ಎದುರಾಗಬಹುದಾದ ...ಪಾಯಗಳನ್ನು ನೆನೆದುಕೊಂಡು ಯಾವ ಕಡೆಯಿಂದ ...ನಗೆ ತೊಂದರೆ ಎರಗಬಹುದೆಂದು ಭಯದಿಂದ ಎಲ್ಲ ...ದೆಗಳಲ್ಲೂ ನೋಡಿಕೊಂಡು ಬರುವವನೂ ಕೂಡ ...ರ್ಗವನ್ನು ಆನಂದಿಸುವುದಿಲ್ಲ. ಒಟ್ಟಾರೆ ಎಲ್ಲಿಗೇ ಹೋಗಲಿ, ...ವುದನ್ನೇ, ಯಾರನ್ನೇ ಸಂದಿಸಲಿ ಸುಖದ ನಿರೀಕ್ಷೆಯಿಂದ, ...ಪಾಯದ ನಿರೀಕ್ಷೆಯಿಂದ ಅವನು ವಸ್ತು, ಪರಿಸರ ಅಥವಾ ...ವ ಹೀಗೆ ಯಾವುದನ್ನೇ ಸಹಜವಾಗಿ ಸಾಕ್ಷೀಕರಿಸಲಾರನು. ...ಕ್ಷೀಕರಿಸದೇ ಅದನ್ನು ಆನಂದಿಸನು. ಭಯ ಮತ್ತು ...ಸೆಯಿಂದ ಮುಕ್ತನಾಗಿರುವವನು ಯಾವುದನ್ನಾದರೂ ...ರುಗಣ್ಣುಗಳಿಂದ ಸಾಕ್ಷೀಕರಿಸಬಲ್ಲನು. ಹಾಗೆ ಸಾಕ್ಷೀಕರಿಸು ...ದರಿಂದ ಅವನು ಆನಂದಾನುಭೂತಿಯನ್ನು ಪಡೆಯ ...ಲ್ಲನು. ಆನಂದಾನುಭೂತಿಯೆಂದರೆ ಭಯ ಮತ್ತು ...ಸೆಗಳಿಲ್ಲದಂತಹ ಮುಕ್ತ ಮನಸ್ಥಿತಿಯಷ್ಟೇ.

ಮನುಷ್ಯನ ಆಲೋಚನೆಯು ಕೇಂದ್ರೀಕೃತವಾಗುವ ...ರಂಭದ ಹಂತಗಳಲ್ಲಿ ತಂತ್ರಗಳು ಒಂದೋ ಭಯವನ್ನು ...ವಾರಿಸಿಕೊಳ್ಳಲು ಅಥವಾ ಆಸೆಯನ್ನು ಪೂರೈಸಿಕೊಳ್ಳಲು ...ಮಿತವಾಗಿದ್ದವು. ನಂತರ ಅದೇ ಯಾವ ತಂತ್ರಗಳು ...ಯ ಮತ್ತು ಆಸೆಗಳನ್ನು ಕೇಂದ್ರವಾಗಿರಿಸಿಕೊಂಡಿದ್ದವೋ ...ವುಗಳನ್ನೇ ನಿವಾರಿಸಿಕೊಳ್ಳುವುದಕ್ಕಾಗಿ ಹೊಸ ಗುರಿಯನ್ನು ...ಹೊಂದಿದವು. ಅದೇ ಮುಕ್ತಿ. ಇದೊಂದು ಆಧ್ಯಾತ್ಮದ ಚರಿತ್ರೆಯಲ್ಲಿಯೇ ಒಂದು ಕ್ರಾಂತಿಕಾರಕ ಘಟ್ಟ. ಏಕೆಂದರೆ ಇದು ಬರೀ ತಂತ್ರ ಸಾಧನಕ್ಕೆ ಮಾತ್ರ ಸೀಮಿತವಾಗದೇ ಭಕ್ತಿಚಳವಳಿಗೂ ಹರಡಿಕೊಂಡಿತು.

ಯಾವ ಭಯ ಮತ್ತು ಆಸೆಗಳು ಯಾವುದರ ಸುತ್ತ ತಿರುಗುವುದೋ, ಲೋಕದ ಎಲ್ಲಾ ವಸ್ತುಗಳನ್ನು ತನ್ನನ್ನು ಕೇಂದ್ರವಾಗಿಸಿಕೊಂಡು ನೋಡುತ್ತಾನೋ ಆ ತನ್ನತನವನ್ನು ಅಂದರೆ ನಾನು ಎಂಬ ಭಾವವನ್ನು ಲೌಕಿಕವಾಗಿ ಅಹಂಕಾರ ಎಂದು ಗುರುತಿಸಿದ. ಅದೇ ರೀತಿ ಭಯ ಮತ್ತು ಆಸೆಗಳಿಂದ ಬಿಡುಗಡೆಯಾಗ ಬಯಸುವ ತನ್ನದೇತನವನ್ನು ಆತ್ಮವೆಂದು ಗುರುತಿಸಿದ. ಒಟ್ಟಾರೆ ಅಹಂಕಾರವಾಗಲಿ, ಆತ್ಮ ಎನ್ನುವುದಾಗಲಿ ತನ್ನ ತನ್ನತನದ ಸೂಚಕವಾಗಿ ಗುರುತಿಸಿಕೊಂಡ.

ಮುಗ್ಧತೆ ಮತ್ತು ಮುಕ್ತತೆ

ಯಾವುದೋ ಒಂದು ವಸ್ತುವಿನಿಂದ, ಜೀವಿಯಿಂದ, ಪ್ರಕೃತಿಯ ಸಂಗತಿಗಳಿಂದ ಭಯ ಎದುರಾಗುತ್ತಿದ್ದು ಒಂದೊಂದೇ ವಿಷಯವನ್ನು ಎದುರಾಗುತ್ತಾ ಅದೆಲ್ಲವನ್ನೂ ನಿವಾರಿಸಿಕೊಳ್ಳುತ್ತಾ ತಂತ್ರಗಳು, ಪ್ರತಿತಂತ್ರಗಳನ್ನು ಹೂಡುತ್ತಾ ಹೆಣಗಾಡುತ್ತಾ ಮತ್ತೆ ಮತ್ತೆ ಭಯಗೊಳಿಸುವ ವಿಷಯಗಳು ಹುಟ್ಟುತ್ತಿರುವುದನ್ನು ಕಂಡುಕೊಂಡ. ಎಷ್ಟೊಂದು ವಿಷಯಗಳು ತಮ್ಮನ್ನು ಹೆದರಿಸುತ್ತಿವೆ ಎಂಬುದು ಅವನಿಗೆ ಅರಿವಾಯ್ತು. ಆದರೆ ಅದರ ಜೊತೆಗೆ ಇನ್ನೊಂದು ಮಹತ್ತರವಾದಂತಹ ಜ್ಞಾನ ಲಭಿಸಿತು. ಅರಿವು ಉಂಟಾಯಿತು. ಅದೇನೆಂದರೆ ಭಯ ಹುಟ್ಟಿಸುವ ಯಾವುದೇ ವಿಷಯಗಳು ಎದುರಾದರೂ ಉಂಟಾಗುವ ಭಯವಿರುವುದು ತನ್ನಲ್ಲಿ



ಎಂಬ ಅರಿವು ಉಂಟಾಯಿತು. ತಾನು ಹೆದರುವ ವಿಷಯ ವಸ್ತುಗಳ ವಿರುದ್ಧವಾಗಿ ತಂತ್ರವನ್ನು ಪ್ರಯೋಗಿಸುವುದರ ಬದಲು ತನ್ನಲ್ಲಿರುವ ಭಯವನ್ನು ನಿವಾರಿಸಿಕೊಳ್ಳುವ ಪ್ರಯತ್ನ ಮಾಡಿದ. ತನ್ನಲ್ಲಿಯೇ ಭಯ ಎನ್ನುವುದು ಹೊರಟು ಹೋದರೆ ತಾನು ಯಾವುದಕ್ಕೂ ಭಯಪಡುವ ಅಗತ್ಯವಿಲ್ಲ ಎಂಬ ಅರಿವೇ ಅತ್ಯಂತ ಪ್ರಬುದ್ಧ ಕ್ರಾಂತಿ.

ಅದೇರೀತಿಯಲ್ಲಿ ಆಸೆ. ಎಷ್ಟೊಂದು ವಿಷಯ ವಸ್ತುಗಳ ಮೇಲೆ ಆಸೆಯುಂಟಾಗುತ್ತದೆ. ಪ್ರತಿಯೊಂದು ವಿಷಯ ಅಥವಾ ವಸ್ತುವಿನ ಬಗ್ಗೆ ಅನಾಸಕ್ತಿಯನ್ನು ತಾಳುತ್ತಾ ಅದನ್ನು ನಿರಾಕರಿಸುವ ಬದಲು ತನ್ನಲ್ಲಿಯೇ ಆಸೆ ಎಂಬುದನ್ನು ಇಲ್ಲವಾಗಿಸಿಕೊಳ್ಳುವಂತಹ ತಂತ್ರವನ್ನೂ ಕಂಡುಕೊಳ್ಳಲು ಯತ್ನಿಸಿದರು. ಅದಕ್ಕಾಗಿ ವಸ್ತುಗಳು ಹುಟ್ಟಿಸುವ ಜಿಗುಪ್ಸೆಯ ಉಧಾಹರಣೆಗಳನ್ನು, ವಸ್ತುಗಳ ನಶ್ವರತೆಯನ್ನು, ರೂಪಕಗಳನ್ನು ತಂತ್ರಗಳ ವಸ್ತುಗಳಾಗಿ ಬಳಸಿದರು. ಹೀಗೆ ತನ್ನೊಳಗೆ ಭಯ ಮತ್ತು ಆಸೆಯನ್ನು ಮೀರುವುದರ ಮೂಲಕ ಮುಕ್ತನಾಗುವ ಪ್ರಕ್ರಿಯೆ ಅಥವಾ ಸಾಧನೆಯ ಬಗ್ಗೆ ಸಾಧಕರು ಆಕರ್ಷಿತರಾದರು. ಕೇವಲ ಜ್ಞಾನ, ಕೈವಲ್ಯ, ನಿರ್ವಾಣ, ಮೋಕ್ಷ, ಮುಕ್ತಿ ಹೀಗೆ ತಮ್ಮ ಅಮೂರ್ತ ಗುರಿಯನ್ನು ನಾನಾ ಹೆಸರುಗಳಿಂದ ಕರೆದರು.

ಸದ್ಯಕ್ಕೆ ನಮ್ಮ ಮುಂದಿನ ತಿಳಿವಳಿಕೆಯ ದಾರಿಯಲ್ಲಿ ಮುಕ್ತಿ ಎಂಬ ಪದವನ್ನೇ ಅವನ್ನು ತಿಳಿಯಲು ಕರಣ ಅಥವಾ ಮಾಧ್ಯಮ ಹೆಸರಾಗಿ ಇಟ್ಟುಕೊಳ್ಳೋಣ.

ಅಪೇಕ್ಷೆ ನಿರೀಕ್ಷೆಗಳೇನೂ ಇಲ್ಲದ ಅಂತಹ ಒಂದು ಸ್ಥಿತಿಯು ಉಂಟುಮಾಡುವ ಹಗುರ ಭಾವವು ಆನಂದ ಎಂದು ಕರೆಸಿಕೊಳ್ಳಲ್ಪಟ್ಟಿತು. ಅದೇ ನಿಜವಾದ ಆನಂದ ಎಂದು ಗುರುತಿಸಲು ಸಾಧ್ಯವಾಯಿತು.

ಇಡೀ ಜಗತ್ತಿನಲ್ಲಿ ಮನುಷ್ಯನ ಸಾಧನೆ ಎಂಬುದೇನಾದರೂ ಇದೆ ಎಂದರೆ ಅದು ಅವನ ಗಮನಿಸುವ ಶಕ್ತಿ ಮತ್ತು ಅನುಕರಿಸುವ ಶಕ್ತಿ. ಕಲೆ, ವಿಜ್ಞಾನ, ಅಧ್ಯಾತ್ಮ, ತಂತ್ರ, ತಾಂತ್ರಿಕ ಜ್ಞಾನ; ಈ ಎಲ್ಲವೂ ಕೂಡ ಅವನ ಗಮನಿಸುವಿಕೆ ಮತ್ತು ಅನುಸರಿಸುವಿಕೆಯಿಂದಲೇ ಹುಟ್ಟಿರುವಂತವು. ಪ್ರಕೃತಿಯಲ್ಲಿನ ಸಂಗತಿಗಳನ್ನು ಅಥವಾ ತನ್ನ ಸುತ್ತ ನಡೆಯುವ ವಿದ್ಯಮಾನಗಳನ್ನು ಗಮನಿಸುತ್ತಾನೆ. ತದೇಕವಾಗಿ ಗಮನಿಸುತ್ತಾ ಅದನ್ನು ನಾನಾಕ್ಷೇತ್ರಗಳಲ್ಲಿ, ನಾನಾರೀತಿಗಳಲ್ಲಿ ಅನುಕರಿಸುತ್ತಾನೆ. ವೈಜ್ಞಾನಿಕ ಸಂಶೋಧನೆಗಳಾಗಲಿ, ಲಲಿತ ಕಲೆ ಮತ್ತು ಪ್ರದರ್ಶಕ ಕಲೆಗಳಾಗಲಿ, ಯಾಂತ್ರಿಕ ತಂತ್ರಜ್ಞಾನವಾಗಲಿ; ಎಲ್ಲವೂ. ಹಾಗೆಯೇ ಧರ್ಮ ಮತ್ತು ಅಧ್ಯಾತ್ಮವೂ ಕೂಡ ಇದರಿಂದ ಹೊರತಲ್ಲ.

ಮನುಷ್ಯನ ಮುಕ್ತಿ ಅಥವಾ ಮುಕ್ತತೆ ಎಂಬ ಪರಿಕಲ್ಪನೆಯ ಮೂಲ ಪ್ರೇರಣೆ ಪ್ರಕೃತಿಯ ಮುಗ್ಧತೆ.

ಪ್ರಕೃತಿಯಲ್ಲಿನ ವಸ್ತುಗಳು ಮರಗಿಡಗಳು, ಬೆಟ್ಟ ನದಿಗಳು, ಅರಣ್ಯ ಸಾಗರಗಳು, ಪ್ರಾಣಿಪಕ್ಷಿಗಳು; ಇವೆಲ್ಲವೂ ಕೂಡ ನಿಜಕ್ಕೂ ಪ್ರಕೃತಿಯ ಭಾಗವಾಗಿರುವುದನ್ನು, ಭಯ ಮತ್ತು ಆಸೆಗಳಿಲ್ಲವಾಗಿದ್ದು ಯಾವುದೇ ಅಪೇಕ್ಷೆ ಮತ್ತು ನಿರೀಕ್ಷೆಗಳಿಲ್ಲದೇ ಇರುವಂತಹ ಸ್ಥಿತಿಯನ್ನು ಗಮನಿಸಿದ. ಒಂದು ಮರವು ಮತ್ತೊಂದು ಮರವು ನೀಡುವಂತಹ ಹೂವು ಮತ್ತು ಹಣ್ಣುಗಳನ್ನು ತನ್ನಲ್ಲಿರಬೇಕೆಂಬ ಆಲೋಚನೆ ಮತ್ತು ಅದಕ್ಕಾಗಿ ಹೆಣಗಾಡದೇ ಇರುವಂತಹದ್ದನ್ನು ನೋಡಿದ. ಅದೇ ರೀತಿಯಲ್ಲಿ ಒಂದು ಹೂವು ಮತ್ತೊಂದು ಹೂವಿನ ವಿನ್ಯಾಸ, ಬಣ್ಣಗಳನ್ನು ಬಯಸುವುದಿಲ್ಲ. ಒಂದು ಸಿಂಹವೆಂಬ ಪ್ರಾಣಿ ತನಗೂ ಹುಲಿಗಿರುವಂತಹ ಪಟ್ಟೆಗಳಿರಬೇಕೆಂದು, ಆನೆ ಸಿಂಹಕ್ಕಿರುವ ಕೇಸರಗಳನ್ನು ಹೊಂದಬೇಕೆಂದು ಆಶಿಸಲಿಲ್ಲ. ಪಾರಿವಾಳಕ್ಕೆ ನವಿಲಿನ ಗರಿಗಳ ವ್ಯಾಮೋಹವಿಲ್ಲ. ಅವು ಹಾಗೆ ಪರಸ್ಪರ ಹೊಂದಬೇಕೆಂದು ಚಿಂತಿಸುವುದಿಲ್ಲ ಎಂದು ನಮಗೆ ತಿಳಿಯುವುದಾದರೂ ಹೇಗೆಂದರೆ, ಅವುಗಳು ಮಾಡುವ ಆಲೋಚನೆಗಳು ವರ್ತನೆಗಳಲ್ಲಿ, ಕ್ರಿಯೆಗಳಲ್ಲಿ ವ್ಯಕ್ತವಾಗುತ್ತವೆ. ಆದರೆ ಅವುಗಳಲ್ಲಿ ಎಂದಿಗೂ ಹಾಗಾಗಿಲ್ಲ. ಹಾಗಾದರೆ ಅವು ಮಾಡುತ್ತಿರುವುದಾದರೂ ಏನು?

ಸುಮ್ಮನೆ ಇವೆ. ಒಂದು ಮತ್ತೊಂದರ ಮುಂದೆ ಸುಮ್ಮನೆ ಇವೆ. ನೈಸರ್ಗಿಕವಾಗಿ ತಮ್ಮತಮ್ಮಲ್ಲಿ ನಡೆಯುವ ಸಂಗತಿಗಳನ್ನು ಆಗಗೊಡಬಿಟ್ಟು ಬರಿದೇ ಸುಮ್ಮನೆ ಇವೆ. ಅವುಗಳಲ್ಲಿ ಮೂಡುವ ಬಣ್ಣಗಳ ಬಗ್ಗೆಯಾಗಲಿ, ವಿಶೇಷತೆಗಳ ಬಗ್ಗೆಯಾಗಲಿ ಅವಕ್ಕೆ ಅರಿವೂ ಇಲ್ಲ, ಹೆಮ್ಮೆಯೂ ಇಲ್ಲ. ಯಾವುದೇ ಮರದಿಂದ ಹೂವು ಹಣ್ಣು ಉದುರಿಹೋದರೆ ಅದಕ್ಕೆ ನಷ್ಟದ ಭಾವವೂ ಇಲ್ಲ, ಕಳೆದುಕೊಂಡುದರ ದುಃಖವೂ ಇಲ್ಲ. ಹೀಗೆ ಇರುವಂತಹ ಮುಗ್ಧ ಸ್ಥಿತಿಯನ್ನು ಮನುಷ್ಯ ಗಮನಿಸಿದ. ಅದೊಂದು ಅತ್ಯಪೂರ್ವವಾದಂತಹ ಸ್ಥಿತಿಯೆಂದು ಅವನಿಗೆ ಗೋಚರವಾಯಿತು. ಇರುವಿಕೆ ನಿಷ್ಕ್ರಿಯೆಯಲ್ಲ, ಅದು ಚಟುವಟಿಕೆಯಿಂದ ಕೂಡಿರುವಂತಹದ್ದೇ, ಕ್ರಿಯಾಶೀಲವೇ ಆಗಿದೆ. ಆದರೂ ಅವು ಸುಮ್ಮನೆ ಇರುವಿಕೆಯನ್ನು ಕುರುಡಾಗಿ ಇರುವಿಕೆ ಎಂದೂ ಭಾವಿಸಲಿಲ್ಲ. ಅದು ಪ್ಯಾಸಿವ್ ಅಲ್ಲ, ಆ್ಯಕ್ಟಿವ್. ಹಾಗಿದ್ದರೂ ಅವು ಸುಮ್ಮನಿವೆ. ಹಾಗಾಗಿ ಅವನ ಪರಿಭಾಷೆಯಲ್ಲಿ ಎಲ್ಲವೂ ಸುಮ್ಮನೆ ಒಂದನ್ನೊಂದು ನೋಡುತ್ತಿವೆ. ನೋಡುತ್ತಿದ್ದರೂ ಪ್ರಚೋದಿತಗೊಳ್ಳುವುದಿಲ್ಲ. ಪ್ರತಿಕ್ರಿಯಿಸುವುದಿಲ್ಲ. ಯಾವ ಸಕಾರಾತ್ಮಕ ಮತ್ತು ನಕಾರಾತ್ಮಕ ಭಾವಗಳನ್ನು, ನಿರ್ಣಯಗಳನ್ನು ತೆಗೆದುಕೊಳ್ಳದೆಯೇ ಸುಮ್ಮನೆ ನೋಡುವುದನ್ನು ಸಾಕ್ಷಿ ಎಂದು ಕರೆದ. ಸಾಕ್ಷೀಕರಿಸುವ ಗುಣ ಅಥವಾ ಭಾವ ಆಧ್ಯಾತ್ಮ ಕ್ಷೇತ್ರದಲ್ಲಿ ಮತ್ತೊಂದು ಮಹತ್ತರವಾದ ಗಟ್ಟಿ ನೆಲೆಯನ್ನು ಒದಗಿಸಿತು.


ಪ್ರಕೃತಿಯ ಬಹುದೊಡ್ಡ ಶಕ್ತಿ ಎಂದರೆ ಕಾರಣ ಪರಿಣಾಮಗಳನ್ನು (ಮಾನಸಿಕವಾದಂತಹ) ಅಪೇಕ್ಷೆ ನಿರೀಕ್ಷೆಗಳಿಲ್ಲದೇ ಬರಿದೇ ಸಾಕ್ಷೀಕರಿಸುವುದು. ನಡೆಯುವಂತಹ ಕ್ರಿಯೆಗಳು ನಕಾರಾತ್ಮಕವಾಗಿ ಅಥವಾ ಸಕಾರಾತ್ಮಕವಾಗಿ ಅವುಗಳ ಮೇಲೆ (ಮಾನಸಿಕವಾಗಿ) ಪ್ರಭಾವ ಬೀರದೇ ಇರುವುದು. ಆದರೆ ಮನುಷ್ಯನು ತನ್ನ ಆಲೋಚನೆಯ ಮೂಲಕ ಬರಿದೇ ಸಾಕ್ಷೀಕರಿಸದೇ ಅದರಿಂದ ನಕಾರಾತ್ಮಕವಾಗಿ ಅಥವಾ ಸಕಾರಾತ್ಮಕವಾಗಿ ಪ್ರಭಾವಕ್ಕೆ ಒಳಗಾಗುತ್ತಾನೆ. ಪ್ರತಿಕ್ರಿಯಿಸುತ್ತಾನೆ. ಈ ಆಲೋಚನೆಯ ಕಾರಣದಿಂದ ಅನೇಕಾನೇಕ ಸಿದ್ಧಾಂತಗಳು, ವ್ಯವಸ್ಥೆಗಳು ಉಂಟಾದವು. ಈ ಸಿದ್ಧಾಂತ ಮತ್ತು ವ್ಯವಸ್ಥೆಗಳಿಂದ ತಾನು ಬಂಧಿತನಾದ ಅರಿವೂ ಕೂಡ ಅವನಿಗುಂಟಾಯಿತು. ಆಲೋಚನೆಗಳನ್ನು ಮಾಡುವಂತಹ ಮನಸ್ಸು ಒಂದು ಉಪಕರಣವೇ ಆಗಿದ್ದರೂ ತನ್ನ ಅಸ್ತಿತ್ವವೇ ಅದರ ನಿಯಂತ್ರಣದಲ್ಲಿ ಸಿಕ್ಕಿ ಹಾಕಿಕೊಂಡಿದೆ ಎಂಬ ಬಹುದೊಡ್ಡ ಅರಿವು ಉಂಟಾದಾಗ ಧ್ಯಾನದಂತಹ ತಂತ್ರಗಳನ್ನು ಕಂಡುಕೊಂಡ.


ಮನುಷ್ಯನ ವ್ಯವಸ್ಥೆ ಮತ್ತು ಸಿದ್ಧಾಂತಗಳ ಸೀಮೆಗಳ ಲೌಕಿಕ ಗೆರೆಗಳು ಗಾಢವಾದಂತೆ ತಾನು ಪ್ರಕೃತಿಯ ಮುಗ್ಧತೆ ಅಥವಾ ವ್ಯಕ್ತಿಗತವಾದಂತಹ ಮುಕ್ತತೆಯಿಂದ ಹೊರತಾಗುತ್ತಿದ್ದೇನೆ ಎಂಬ ದಿವ್ಯಜ್ಞಾನ ಉಂಟಾಯಿತು. ಆಗ ಕಂಡುಕೊಂಡ ಹಲವು ತಂತ್ರಗಳಲ್ಲಿ ಸನ್ಯಾಸವೂ ಒಂದು. ಲೋಕದಲ್ಲಿದ್ದೇ ಅಲೌಕಿಕವಾಗಿರುವಂತಹ ಒಂದು ತಂತ್ರವಾದ ಸನ್ಯಾಸವೂ ಕೂಡ ಒಂದು ತಂತ್ರವೇ.

ಅಲೌಕಿಕವೆಂದದರೆ ಇಲ್ಲಿರುವ ಲೋಕವನ್ನು ಬಿಟ್ಟು ಬೇರೊಂದು ಲೋಕಕ್ಕೆ ಸಾಗುವಂತಹ ವಿಚಾರವಲ್ಲ. ಬದಲಾಗಿ ವ್ಯವಸ್ಥೆ ಮತ್ತು ಸಿದ್ಧಾಂತವೇ ಮೊದಲಾದ ಲೌಕಿಕ ಎಲ್ಲೆಗಳನ್ನು ಅಳಿಸುತ್ತಾ ಮನುಷ್ಯನ "ಅವನತನವನ್ನು" ಮುಕ್ತವಾಗಿಸುವುದು. ಪ್ರಕೃತಿಯ ಮುಗ್ಧತೆಯನ್ನು ಪಡೆಯುವುದು.

ಸಮಾಜ, ರಾಜಕೀಯ, ಸಂಸ್ಕೃತಿ, ಧಾರ್ಮಿಕತೆ ಎಂಬ ಎಲ್ಲಾ ಗಾಢ ಲೌಕಿಕತೆಗಳ ಎಲ್ಲೆಗಳನ್ನು ಅವುಗಳಲ್ಲಿದ್ದುಕೊಂಡೇ, ಅವುಗಳ ಗಟ್ಟಿ ಸೀಮೆಗಳನ್ನು ಮೆದುಗೊಳಿಸುತ್ತಾ ಅಳಿಸುತ್ತಾ ಕ್ರಮೇಣ ವ್ಯಕ್ತಿಗತವಾಗಿ ಇಲ್ಲವಾಗಿಸಿಕೊಂಡು ಅಲೌಕಿಕವಾಗಿಸಲು ಸುಧಾರಕರು ಶ್ರಮಿಸಿದರು.

ಸಾಧಕನು ಸನ್ಯಾಸಿಯಾಗಿ ತಾನು ಅದನ್ನು ಪಡೆಯ ಹೋದರೆ, ಸುಧಾರಕನು ಸಮಾಜದ ತನ್ನೆಲ್ಲಾ ಸಹಜೀವಿಗಳಿಗೂ ಅದನ್ನು ಪಡೆಯಲು ಸಹಕರಿಸುವಂತಹ ಪ್ರಯತ್ನ ಮಾಡಿದ. ಬಸವಣ್ಣನಾಗಲಿ, ತುಕಾರಾಮನಾಗಲಿ ಮದುವೆಗಳನ್ನು ಮಾಡಿಕೊಂಡು, ನಿರ್ದಿಷ್ಟ ಕೆಲಸಗಳನ್ನು ಮಾಡಿಕೊಂಡು ಒಂದು ವ್ಯವಸ್ಥೆಯಲ್ಲಿದ್ದರೂ ಇದೇ ಪ್ರಕೃತಿಯ ಅಲೌಕಿಕ ಮುಗ್ಧತೆಯ ಮಾನವ ಪರಿಭಾಷೆಯಾದ ಮುಕ್ತತೆಯನ್ನು ಎಲ್ಲರೂ ಪಡೆಯಲು ಏಕೆ ಸಾಧ್ಯವಾಗುವುದಿಲ್ಲ ಎಂದು ಶ್ರಮಿಸಿದರು. ಆದರೆ ಶ್ರೇಣೀಕೃತ ಸಮಾಜದಲ್ಲಿ ಅದನ್ನು ಸಾಧ್ಯವಾಗಿಸದೇ ಹೋಗಿದ್ದು ಮಾತ್ರ ಆಧ್ಯಾತ್ಮದ ದುರಂತ ಚರಿತೆ.





ಆಡೋದು ಶಾಸ್ತ್ರ ತಿನ್ನೋದು ಬದನೆ



ಪೇಜಾವರ ಶ್ರೀಗಳೇ, ಕಳೆದ ವಾರ ಮೀನುಗಾರಿಕಾ ಸಚಿವ ಪ್ರಮೋದ್ ಮಧ್ವರಾಜರು "ವಾಲ್ಮೀಕಿ ಜಯಂತಿಯಂದು ರಾಮ ಕೃಷ್ಣ ವಾಲ್ಮೀಕಿ ವೇದವ್ಯಾಸ ಇವರೆಲ್ಲಾ ಮಾಂಸಾಹಾರಿಗಳಾಗಿದ್ದರು" ಎಂದು ಹೇಳಿದ್ದಕ್ಕೆ ನೀವು ಪ್ರತಿಕ್ರಿಯಿಸುತ್ತಾ "ಪ್ರಮೋದರು ಹೇಳಿದ್ದು ತಪ್ಪು, ರಾಮ-ಕೃಷ್ಣರು ಸಸ್ಯಾಹಾರಿಗಳಾಗಿದ್ದರು" ಎಂದು ವಾದಿಸಿರುವಿರಿ. ಆದರೆ ರಾಮ-ಕೃಷ್ಣ ಮಾಂಸಾಹಾರಿಗಳಾಗಿದ್ದರು ಎಂದು ನಿಮ್ಮದೇ ಶಿಷ್ಯ ಬನ್ನಂಜೆ ಗೋವಿಂದಾಚಾರ್ಯ ಮೊನ್ನೆ ತಾನೇ ಹೇಳಿದ್ದಾರೆ.


ಬನ್ನಂಜೆಯವರು ನಿಮಗಿಂತ ದೊಡ್ಡ ವಿದ್ವಾಂಸರು ಹಾಗೂ ಹೆಚ್ಚಿನ ಅಧ್ಯಯನ ಮಾಡಿರುವರು ಎಂದು ಎಲ್ಲರಿಗೂ ಗೊತ್ತಿದೆ. ಹಾಗಿರುವಾಗ ನೀವು ರಾಮ-ಕೃಷ್ಣ ಮಾಂಸಾಹಾರಿ ಆಗಿರಲಿಲ್ಲ ಎಂದು ಹೇಳಿದ್ದು ಯಾವ ಆಧಾರದಲ್ಲಿ? ಕೃಷ್ಣನ ಮಾವ ಕಂಸ ಅಸುರನಾಗಿದ್ದ. ಹಾಗಾಗಿ ಅವನ ತಂಗಿ ದೇವಕಿ ಸಹ ಅಸುರಳು. ಅಸುರ ಜಾತಿಯವರು ಮಾಂಸಾಹಾರಿಗಳಾಗಿದ್ದರು. ಹಾಗಾಗಿ ಶ್ರೀಕೃಷ್ಣ ಸಹ ತಾಯಿ ಕಡೆಯಿಂದ ಅಸುರ ಜನಾಂಗದವನಾಗಿದ್ದು ಮಾಂಸಾಹಾರಿ ಆಗಿದ್ದನು. ಮೇಲಾಗಿ ಅವನು ಬೆಳೆದಿದ್ದು ಯಾದವ ಜಾತಿಯ ಮನೆಯಲ್ಲಿ, ಯಾದವರು ಅಂದಿನಿಂದ ಇಂದಿನವರೆಗೂ ಪಕ್ಕಾ ಮಾಂಸಾಹಾರಿಗಳು. ಹಾಗಾಗಿ ಯಾದವ ನಂದರಾಜನ ಮನೆಯಲ್ಲಿ ಕೇವಲ ಕೃಷ್ಣ ಮಾತ್ರ ಒಬ್ಬನೇ ಸಸ್ಯಾಹಾರ ತಿನ್ನುತ್ತಾ ಬೆಳೆದ ಎಂದು ವಾದಿಸುವುದು ತರ್ಕವಿಹೀನ.

ಶ್ರೀಶೈಲ ಮಹಾತ್ಮೆ ಕಥೆಯಲ್ಲಿ ಶ್ರೀಕೃಷ್ಣ ಕಾಡುಹಂದಿ ತಿಂದದ್ದು ಸ್ಪಷ್ಟವಿದೆ. ಕೃಷ್ಣ ಮತ್ತು ಅರ್ಜುನ ಒಮ್ಮೆ ಬೇಟೆಗೆ ಹೋಗಿದ್ದಾಗ ದಟ್ಟ ಅರಣ್ಯದಲ್ಲಿ ಹಾದಿ ತಪ್ಪುತ್ತಾರೆ. ಮಧ್ಯಾಹ್ನ ಬಿಸಿಲಲ್ಲಿ ಬಸವಳಿದ ಕೃಷ್ಣನಿಗೆ ವಿಪರೀತ ಹಸಿವಾದಾಗ ಒಂದು ಹೊಳೆ ಬದಿಯಲ್ಲಿ ಕುಳಿತು ಅರ್ಜುನನಿಗೆ ಹೇಳುತ್ತಾನೆ "ನೀನು ಯಾವುದಾದರೂ ಪ್ರಾಣಿ ಕೊಂದು ತಾ. ನಾನು ಅಷ್ಟರೊಳಗೆ ಸ್ನಾನಮಾಡಿ ಬೆಂಕಿ ತಯಾರಿಸಿ ಇಡುತ್ತೇನೆ. ನೀನು ತಂದ ಪ್ರಾಣಿಯನ್ನು ಬೆಂಕಿಯಲ್ಲಿ ಹುರಿದು ತಿಂದು ನಾವು ಹಸಿವು ನಿವಾರಿಸಿಕೊಳ್ಳೋಣ" ಎಂಬುದಾಗಿ. ಆ ಅರಣ್ಯದಲ್ಲಿ ಬೇಕಾದಷ್ಟೂ ಹಣ್ಣು ಗೆಡ್ಡೆಗೆಣಸುಗಳು ಲಭ್ಯವಿದ್ದರೂ ಕೃಷ್ಣ ಹಣ್ಣು ಗೆಣಸು ತರಲು ಅರ್ಜುನನಿಗೆ ಹೇಳದೇ ಪ್ರಾಣಿಯನ್ನೇ ಕೊಂದು ತರುವಂತೆ ಹೇಳಿರುವುದು ಶ್ರೀಕೃಷ್ಣ ಪಕ್ಕಾ ಮಾಂಸಾಹಾರಿ ಎಂಬುದಕ್ಕೆ ಸಾಕ್ಷಿ. ನಂತರ ಅರ್ಜುನ ಬಾಣ ಬಿಟ್ಟು ಒಂದು ಹಂದಿ ಕೊಲ್ಲುವುದು ಹಾಗೂ ಆ ಸತ್ತ ಹಂದಿಗಾಗಿ ಬೇಡನ ರೂಪದ ಶಿವನೊಂದಿಗೆ ಯುದ್ಧವಾಗಿ ಅರ್ಜುನ ಸೋಲುವ ಕತೆ ಎಲ್ಲರಿಗೂ ಗೊತ್ತಿದೆ. ಈ ಕಥೆಯಲ್ಲಿ ಕೃಷ್ಣ ಮತ್ತು ಅರ್ಜುನ ಮಾಂಸಾಹಾರಿಗಳಾಗಿದ್ದರು ಹಾಗೂ ಹಂದಿ ತಿನ್ನುತ್ತಿದ್ದರು ಎಂದು ಸಾಬೀತಾಗುತ್ತದೆ. ಅಂದು ಕೃಷ್ಣ ಹಂದಿ ತಿಂದ ಅದೇ ಶ್ರೀಶೈಲ ಕ್ಷೇತ್ರ (ತೆಲಂಗಾಣ) ಇಂದು ಉಡುಪಿಗಿಂತ ನಾಲ್ಕು ಪಟ್ಟು ದೊಡ್ಡ ಶ್ರೀಕ್ಷೇತ್ರವಾಗಿದೆ ಎಂಬುದನ್ನೂ ಗಮನಿಸಿ. ಒಂದು ವೇಳೆ ಜನರು ಆ ಶ್ರೀಶೈಲದ ಕಥೆ ನಂಬದೇ ಇರುತ್ತಿದ್ದರೆ ಇಂದು ಆ ಕ್ಷೇತ್ರ ಅಷ್ಟು ದೊಡ್ಡದಾಗಿ ಬೆಳೆಯುವುದು ಸಾಧ್ಯವಿತ್ತೇ?

ಇನ್ನು ಶ್ರೀರಾಮ ಅರಮನೆಯಲ್ಲೂ, ವನವಾಸದಲ್ಲೂ ನಿಯಮಿತವಾಗಿ ಮಾಂಸಾಹಾರ ಸೇವಿಸುತ್ತಿದ್ದ ಎಂದು ಮೂಲ ವಾಲ್ಮೀಕಿ ರಾಮಾಯಣದಲ್ಲಿಯೇ ಅನೇಕ ಕಡೆ ಉಲ್ಲೇಖವಿದೆ. ಅದನ್ನು ನೀವು ಇನ್ನೂ ಓದದಿರುವುದು ಆಶ್ಚರ್ಯ.

ಅದೆಲ್ಲ ಸರಿ, ಪೇಜಾವರರೇ ಕಳೆದ ಜನವರಿ 17ಕ್ಕೆ ನಿಮ್ಮ ಪರ್ಯಾಯದ ದಿನವೇ ಬೆಳಗ್ಗೆ ನೀವೇ ನಿಮ್ಮ ಕೈಯಾರೆ ಉದ್ಘಾಟಿಸಿದ ಮಣಿಪಾಲದ 3 ಸ್ಟಾರ್ ಹೋಟೆಲು (ಕಂಟ್ರಿ ಇನ್ ಅಂಡ್ ಸ್ವೀಟ್ಸ್) ಬಿಜೆಪಿಯ ರಘುಪತಿ ಭಟ್ಟನ ಅಧಿಕೃತ ಒಡೆತನದಲ್ಲಿ ಇದ್ದು (ಅದರಲ್ಲಿ ಹಲವು ಸ್ವಾಮೀಜಿಗಳ ಕೋಟ್ಯಾಂತರ ಬೇನಾಮಿ ಬಂಡವಾಳವೂ ಇದೆಯೆಂಬ ಆರೋಪವಿದೆ), ಈ ಹೋಟೆಲಿನಲ್ಲಿ ವಿದೇಶಿ ಮೆಡಿಕಲ್ ವಿದ್ಯಾರ್ಥಿಗಳಿಗೆ ಗೋಮಾಂಸ ಖಾದ್ಯ ಮತ್ತು ಶರಾಬು ದಿನಾಲೂ ಪೂರೈಸಲಾಗುತ್ತದೆ. ನಿಮ್ಮ ಪರ್ಯಾಯದ ದಿನವೇ ನೀವೇ ಕೈಯಾರೆ ಉದ್ಘಾಟಿಸಿದ ಈ ಹೋಟೆಲಿನಲ್ಲಿ ಗೋಮಾಂಸ ಮಾರಲು ನೀವು ಹೇಗೆ ಅನುಮತಿ ಕೊಟ್ಟಿದ್ದು? ಆಡೋದು ಶಾಸ್ತ್ರ ತಿನ್ನೋದು ಬದನೆ ಎನ್ನುವುದು ಇದಕ್ಕೇ ಇರಬೇಕು!


- ಆರ್.ಬಿ.ಶೇಣವ, ಮಂಗಳೂರು



ಮೋದಿ ಎಂಬ ನಾಟಕಕಾರ

ಮೋದಿಯವರು ಮುಸ್ಲಿಮರ ತ್ರಿವಳಿ ತಲಾಖ್ ನಿಷೇಧಕ್ಕೆ ಬೆಂಬಲ ಸೂಚಿಸಿ ಸಮಾನ ನಾಗರಿಕಸಂಹಿತೆ ಜಾರಿಗೊಳಿಸುವ ಬಗ್ಗೆ ಮಾತನಾಡುತ್ತಾ "ನನ್ನ ಮುಸ್ಲಿಂ ಸಹೋದರಿಯರು ಮಾಡಿರುವ ತಪ್ಪಾದರು ಏನು" ಎಂದು ಕೇಳಿದ್ದಾರೆ! ಹಾಗಾದರೆ ಮೋದಿಯವರೇ ನಿಮ್ಮ ಈ ಸಹಾನುಭೂತಿ ಗುಜರಾತ್ ಹತ್ಯಾಕಾಂಡದ ವೇಳೆ ಏನಾಗಿತ್ತು? ಆಗ ಮುಸ್ಲಿಂ ಮಹಿಳೆಯರು ನಿಮ್ಮ ಸಹೋದರಿಯರಾಗಿರಲಿಲ್ಲವೇ? ಆಗ ಎಷ್ಟು ಮುಸ್ಲಿಂ ಹೆಣ್ಣು ಮಕ್ಕಳು ತಲಾಖ್ ಹೇಳದಿದ್ದರೂ ತಮ್ಮ ಗಂಡನನ್ನು ಕಳೆದುಕೊಂಡರು? ಹಾಗೂ ಎಷ್ಟು ಗಂಡಸರು ತಲಾಖ್ ಕೊಡದೇ ತಮ್ಮ ಹೆಂಡತಿಯನ್ನು ಕಳೆದುಕೊಂಡರು ಗೊತ್ತೇ? ಜತೆಗೆ ಎಷ್ಟು ಸಣ್ಣ ಮಕ್ಕಳು ಅನಾಥರಾಗಿದ್ದರು ನಿಮಗೆ ಗೊತ್ತಿದೆಯೇ? ಆಗ ಇಲ್ಲದ ಸಹಾನುಭೂತಿ ಈಗ ಎಲ್ಲಿಂದ ಒಮ್ಮೆಲೇ ಉಮ್ಮಳಿಸಿ ಬಂತು ಮೋದಿಯವರಿಗೆ?

ಬಾಲ್ಯದಲ್ಲಿ ಕೈಹಿಡಿದ ಮುಗ್ಧ ಹೆಂಡತಿಯನ್ನು ಮೋದಿಯವರು ನಿಷ್ಕರುಣೆಯಿಂದ ನಡೆಸಿಕೊಂಡ ರೀತಿ ಹಾಗೂ ಜೀವನವಿಡೀ ಹೆಂಡತಿಯನ್ನು ದೂರವಿಟ್ಟು ಅವಳಿಗೆ ಬಾಳು ಕೊಡಲಾಗದ ಈ ಮೋದಿ ಯಾವುದೇ ಧರ್ಮದ ವಿಚ್ಛೇದನದ ಬಗ್ಗೆ ಅಭಿಪ್ರಾಯ ಕೊಡುವ ನೈತಿಕ ಅಧಿಕಾರ ಹೊಂದಿಲ್ಲ. ಮಹಾ ಜಗಳಗಂಟನಾಗಿದ್ದ ಮೋದಿ ತನ್ನ 17ನೇ ವಯಸ್ಸಿಗೇ ತನ್ನ ತಂದೆ ತಾಯಿಯೊಂದಿಗೆ ಜಗಳಾಡಿ ಮನೆ ಬಿಟ್ಟ ಹೋದ. ನಂತರ ತನ್ನ ತಂದೆ-ತಾಯಿಯ ಮೇಲೆ ಸೇಡು ತೀರಿಸಲೋಸುಗ ಅವರು ಇವನಿಗೆ ಬಾಲ್ಯದಲ್ಲಿ ಮದುವೆ ಮಾಡಿದ್ದ ಹೆಣ್ಣನ್ನೇ ದೂರ ಮಾಡಿ ಸೇಡು ತೀರಿಸಿಕೊಂಡ. ಸ್ವಂತ ತಂದೆ ತೀರಿಕೊಂಡಾಗಲೂ ಅದೇ ಊರಿನಲ್ಲಿದ್ದ ಮೋದಿ ತನ್ನ ತಂದೆಯ ಮನೆಗೆ ಹೋಗಿ ತಂದೆಯ ಶವದ ಬಾಯಿಗೆ ಒಂದು ತೊಟ್ಟು ನೀರು ಬಿಡುವ ಮಗನ ಕರ್ತವ್ಯ ನಿರ್ವಹಿಸಲಿಲ್ಲ. ಪ್ರತಿ ವರ್ಷ ರಾಖಿ ಕಟ್ಟುತ್ತಿದ್ದ ಒಡಹುಟ್ಟಿದ ತಂಗಿ ಜಸ್ವಂತಿಬೇನಳ ಮದುವೆಗೆ ಹೋಗಿ ಎರಡು ಕಾಳು ಅಕ್ಕಿ ಹಾಕಲಿಲ್ಲ ಈ ಮೋದಿ. ಆದರೂ ಈತ ಹಿಂದೂ ಧರ್ಮದ ಸಂಸ್ಕೃತಿ ಸಂಸ್ಕಾರಗಳ ಬಗ್ಗೆ ಭಾಷಣ ಬಿಗಿಯುತ್ತಾನೆ. ಇವರ ನಾಲ್ಕು ಜನ ಅಣ್ಣತಮ್ಮಂದಿರಲ್ಲಿ ಯಾವನೊಬ್ಬಂದಿಗೂ ಮಧುರ ಸಂಬಂಧ ಈ ಮೋದಿ ಹೊಂದಿರಲಿಲ್ಲ, ಅದಕ್ಕಾಗಿ ಈತ ಗುಜರಾತಿನ ಮುಖ್ಯಮಂತ್ರಿ ಆದಾಗಲೂ ಅವನಲ್ಲಿ ಚಿಕ್ಕಂದಿನಿಂದಲೂ ಯಾವುದೇ ಮಮತೆ ಅಂತಃಕರಣ ಇಲ್ಲವೆಂದು ಅವನ ಒಡಹುಟ್ಟಿದವರಿಗೆ ಗೊತ್ತಿದ್ದರಿಂದ ಅವರ್‍ಯಾರೂ ಈತನ ಮುಂದೆ ಕೈಯೊಡ್ಡಲಿಲ್ಲ, ಅಂತಹ ಸ್ವಾಭಿಮಾನಿಗಳು ಆ ಒಡಹುಟ್ಟಿದವರು.




ಹಾಗಾಗಿಯೇ ಹೃದಯಹೀನ ಮೋದಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದತಕ್ಷಣ ದೇಶದ ಮೂಲೆಮೂಲೆಯಲ್ಲೂ ಗೋಮಾತೆಯ ಹೆಸರಲ್ಲಿ ದಲಿತರನ್ನು, ಅಲ್ಪಸಂಖ್ಯಾತರನ್ನು ಕೋಮುವಾದಿ ಗೂಂಡಾಗಳು ಭಯಂಕರ ಹಿಂಸಿಸಿದ್ದು ನೋಡಿಯೂ ಕಲ್ಲು ಮನಸ್ಸಿನ ಮೋದಿ ಕುರುಡು-ಕಿವುಡು ಆಗಿದ್ದ. ಆಗ ಎಲ್ಲಿ ಹೋಗಿತ್ತು ಆತನ ಆತ್ಮಸಾಕ್ಷಿ ಮತ್ತು ಪರಧರ್ಮ ಸ್ತ್ರೀ ಗೌರವ? ಈಗ ಉತ್ತರಪ್ರದೇಶದ ಚುನಾವಣೆ ಹತ್ತಿರ ಬರುತ್ತಿದ್ದಂತೆ ಹಿಂದೂಗಳನ್ನು ಓಲೈಸಿಕೊಳ್ಳಲು ಸಮಾನ ನಾಗರಿಕ ಸಂಹಿತೆ ಹಾಗೂ ಮುಸ್ಲಿಂ ಸಹೋದರಿಯರ ಬಗ್ಗೆ ನಕಲಿ ಸಹಾನುಭೂತಿ ದಿಢೀರ್ ಆಗಿ ಮೋದಿಗೆ ಹುಟ್ಟಿದೆ ಅಷ್ಟೇ. ಜಗತ್ತಿನ ಅತಿ ಪ್ರಚಂಡ ನಾಟಕಕಾರನೆಂದರೆ ನರೇಂದ್ರ ಮೋದಿ ಎಂಬುದು ಈಗ ಮತ್ತೊಮ್ಮೆ ಸಾಬೀತಾಯಿತು.

- ವೀರಪ್ಪ ಬಿ.ಎನ್, ಮಡಿಕೇರಿ

ದೇಶದ ಹೆಸರಲ್ಲಿ ಹಫ್ತಾ

ಪಾಕಿಸ್ತಾನದ ನಟರು ಅಭಿನಯಿಸಿರುವ ಹಿಂದಿ ಚಲಚಿತ್ರವನ್ನು ಭಾರತದಲ್ಲಿ ಬಿಡುಗಡೆ ಮಾಡಲು ನಿರ್ಮಾಪಕರಿಗೆ ಅನುಮತಿ ಕೊಡುವ ಸಲುವಾಗಿ ಆ ಚಿತ್ರದ ನಿರ್ಮಾಪಕರು ತಲಾ ಐದೈದು ಕೋಟಿ ರೂಪಾಯಿ ಸೈನಿಕರ ಕಲ್ಯಾಣ ನಿಧಿಗೆ ಕೊಡಬೇಕೆಂದು ಮಹಾರಾಷ್ಟ್ರದ ರಾಜ್‌ಠಾಕ್ರೆ ಮತ್ತು ಬಿಜೆಪಿ ಪಕ್ಷದ ಫಡ್ನವೀಸ್ ಹಾಕಿದ ಷರತ್ತಿಗೆ ಸೇನಾಧಿಕಾರಿಗಳೇ ತಮ್ಮ ಅಸಮ್ಮತಿ ಸೂಚಿಸಿ ತಮಗೆ ಇಂತಹ ಹಫ್ತಾ ವಸೂಲಿಯ ಕೀಳು ಹಣ ಬೇಕಿಲ್ಲ ಎಂದು ಹೇಳಿದ್ದು ಅತ್ಯಂತ ಸೂಕ್ತವಾಗಿದೆ. ದೇಶಪ್ರೇಮಿಗಳಾದ ನಮ್ಮ ವೀರ ಯೋಧರ ಮೇಲೆ ಕುಳಿತು ತಮ್ಮ ನಕಲಿ ದೇಶಪ್ರೇಮ ತೋ... ಕುತಂತ್ರ ಮಾಡಿದ್ದ ಶಿವಸೇನೆ ಮತ್ತು ಬಿಜೆಪಿ... ನಮ್ಮ ಸೇನಾಧಿಕಾರಿಗಳೇ ಸರಿಯಾಗಿ ಕಪಾಳಮೋಕ್ಷ... ಬುದ್ಧಿ ಕಲಿಸಿದ್ದಾರೆ. ಶಿವಸೇನಾ ಮತ್ತು ಬಿಜೆಪಿ... ಚಿತ್ರ ನಿರ್ಮಾಪಕರಿಂದ ಹಫ್ತಾ ವಸೂಲಿ ಮಾಡಿದ್ದ ಹ... ಪಡೆಯಲು ಯೋಧರು ನಿರಾಕರಿಸಿರುವುದು ... ಯೋಧರೆಲ್ಲಾ ವೀರರು ಮಾತ್ರವಲ್ಲ ಅವರು ... ನೀತಿಗಳಿಗೂ ಅಂಟಿಕೊಂಡಿರುವ ನೈಜ ಮಾನವ... ಗಳು ಎಂಬುದೂ ಸಾಬೀತಾಯಿತು. ಇದನ್ನು ... ಯಾದರೂ ನಕಲಿ ದೇಶಪ್ರೇಮಿಯಾದ ಹಿಂದುತ್ವ ... ಬುದ್ಧಿ ಕಲಿಯಬೇಕಿದೆ. ಮೇಲಾಗಿ ರಾಜ್ ಠಾಕ್ರೆ ... ಫಡ್ನವೀಸ್ ಚಿತ್ರ ನಿರ್ಮಾಪಕರಿಂದ ಐದೈದು ... ರೂಪಾಯಿ ಯೋಧರ ಕಲ್ಯಾಣನಿಧಿಗೆ ಕೊಡಬೇ... ಷರತ್ತು ಹಾಕಿರುವುದು ಮಾತ್ರವಲ್ಲಾ ತಮಗೂ ... ಕೋಟಿ ಕೊಡಬೇಕೆಂದು ಷರತ್ತು ಹಾಕಿದ್ದು ... ಉಳಿದಿಲ್ಲ, ಹೇಗಿದೆ ನೋಡಿ ದೇಶಪ್ರೇಮದ ಅ...



ಹಾಗೂ ಯೋಧರ ಹೆಸರಲ್ಲಿ ಚಿತ್ರ ನಿರ್ಮಾಪ... ತಮಗಾಗಿ ಹಫ್ತಾ ವಸೂಲು ಮಾಡುವ ಕುಯು...

- ಪ್ರವೀಣ್ ಎಸ್ ಶೆಟ್ಟಿ, ಮಂಗ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ಪ್ರತಿಕ್ರಿಯೆಗಳನ್ನು 9980331427 ನಂಬರ್... ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬ...

ರಾಷ್ಟ್ರಭಕ್ತರಾದರು!

ದೇಶಕ್ಕಾಗಿ ದುಡಿಯಲಿಲ್ಲ
ಐಕ್ಯಮತ ಮೊಳಗಲಿಲ್ಲ
ರಾಷ್ಟ್ರಭಕ್ತರಾದರು!



ಖಾಕಿ ಚಡ್ಡಿ, ಲಾಠಿ ಬೀಸಿ
ಗಡಿಯಲಿ ಕಾದಾಡಲಿಲ್ಲ
ರಾಷ್ಟ್ರಭಕ್ತರಾದರು!

ದಾಸ್ಯದ ಸಂಕೋಲೆ ಕಿತ್ತ
ಸ್ವಾತಂತ್ರ್ಯ ಸಮರದೆಡೆ
ಸುಳಿಯಲಿಲ್ಲ, ರಾಷ್ಟ್ರಭಕ್ತರಾದರು!

ಸೌಹಾರ್ದ ಸುಮಗಳರಳಿ
ಕೂಡಿ-ಹಾಡಿ ಬದುಕಲು
ಬಿಡಲೇ ಇಲ್ಲ, ರಾಷ್ಟ್ರಭಕ್ತರಾದರು!

ನಾಡ ನೆಲ-ಜಲ ಕೆಚ್ಚಿನಲಿ
ಲವಲೇಶ ಕಾಣಲಿಲ್ಲ
ರಾಷ್ಟ್ರಭಕ್ತರಾದರು!

ಜಗಕೆ ಅಹಿಂಸ ತತ್ವ
ಬೋಧಿಸಿದ ಶಾಂತಿಧೂತನನ್ನೂ
ಬಿಡಲೇ ಇಲ್ಲ, ರಾಷ್ಟ್ರಭಕ್ತರಾದರು!

ಚಡ್ಡಿ ಹೋಗಿ ಪ್ಯಾಂಟು ಬಂತು
ಮನುಷ್ಯ ಪ್ರೀತಿ ಮೊಳೆಯಲಿಲ್ಲ
ವಿಷ ಕಾರುವುದ ಬಿಡಲೇ ಇಲ್ಲ
ರಾಷ್ಟ್ರಭಕ್ತರಾದರು!

● ಎಸ್. ಮಂಜು...

ಸಿನಿಮಾ ಮಾಡಲು ಪ್ರೇರೇಪಿಸಿದೆ ಈ ರಾಜ್ಯ ಪ್ರಶಸ್ತಿ: ರಾಘು ಶಿವಮೊಗ್ಗ

ಈ ಬಾರಿ ಕಿರುಚಿತ್ರಕ್ಕಾಗಿ ಕರ್ನಾಟಕ ಸರಕಾರ ನೀಡುವ ಅತ್ಯುತ್ತಮ ಕಿರುಚಿತ್ರ ರಾಜ್ಯ ಪ್ರಶಸ್ತಿಯು ನಿರ್ದೇಶಕ ರಾಘು ಶಿವಮೊಗ್ಗ ಅವರ 'ಚೌಕಭಾರ'ಕ್ಕೆ ಸಿಕ್ಕಿದೆ. ಕನ್ನಡದ ಕಿರುಚಿತ್ರ ಜಗತ್ತಿನಲ್ಲಿ ಹಲವು ದಾಖಲೆಗಳನ್ನು ಬರೆದ ಈ ಚಿತ್ರದ ಬಗ್ಗೆ ನಿರ್ದೇಶಕರು ಇಲ್ಲಿ ಮಾತಾಡಿದ್ದಾರೆ.



****

ಕಿರುತೆರೆ, ರಂಗಭೂಮಿ ಮತ್ತು ಸಿನಿಮಾ ಮೂರೂ ರಂಗದಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡವರು ರಾಘು ಶಿವಮೊಗ್ಗ. ಸದ್ಯ ಇವರ ನಿರ್ದೇಶನದ 'ಚೌಕಭಾರ' ಕಿರುಚಿತ್ರಕ್ಕೆ ಕರ್ನಾಟಕ ಸರಕಾರ ನೀಡುವ 2015ನೇ ಸಾಲಿನ 'ಅತ್ಯುತ್ತಮ ಕಿರುಚಿತ್ರ' ರಾಜ್ಯ ಪ್ರಶಸ್ತಿ ದೊರೆತಿದೆ. ಹಲವು ಸಿನಿಮಾ ನಟರೇ ಈ ಕಿರುಚಿತ್ರದಲ್ಲಿ ನಟಿಸಿದ್ದು ವಿಶೇಷ. ಅವರೊಂದಿಗಿನ ಮಾತುಕತೆ ಇಲ್ಲಿದೆ.

** ನೀನಾಸಂ ಪದವಿಯ ನಂತರ ನೀವು ರಂಗಭೂಮಿಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದವರು. ಕಿರುತೆರೆಗೆ ಬಂದಿದ್ದು ಹೇಗೆ?*

ನೀನಾಸಂ ನಂತರ ನಾಟಕಗಳ ಅನೇಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದು ನಿಜ. ಬ್ಯಾಕ್‌ಸ್ಟೇಜ್, ಬೆಳಕು ವಿನ್ಯಾಸ, ನಿರ್ದೇಶನ ಹೀಗೆ ಹಲವು ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದೆ. ನಟನೆಗಿಂತ ನನಗೆ ತಂತ್ರಜ್ಞನಾಗಿ ಕೆಲಸ ಮಾಡುವುದು ಇಷ್ಟವಾಗಿತ್ತು. ಕಲಾವಿದರು ಕೈಕೊಟ್ಟ ಸಂದರ್ಭದಲ್ಲಿ ನಟಿಸುತ್ತಿದ್ದೆ. ಈ ಒಡನಾಟದಲ್ಲಿ ಕಿರುತೆರೆ ಜಗತ್ತು ಪರಿಚಯ ಆಯಿತು. ಹಲವು ಧಾರಾವಾಹಿಗಳಲ್ಲಿ ನಟಿಸಿದೆ.

** ನಟನೆ ಮಾತ್ರವಲ್ಲ, ನಿರ್ದೇಶಕರಾಗಿಯೂ ಕಿರುತೆರೆಯಲ್ಲಿ ಗುರುತಿಸಿಕೊಂಡಿದ್ದೀರಿ. ಎರಡೂ ಕಷ್ಟದ ಕೆಲಸ ಅಂತ ಅನಿಸಲಿಲ್ಲವಾ?*

ಎಲ್ಲರೂ ಎಲ್ಲವನ್ನೂ ಮಾಡಬೇಕು ಅನ್ನುವುದು ನೀನಾಸಂ ಶಿಕ್ಷಣದ ಹಿಂದಿರುವ ಮಹತ್ತರ ಉದ್ದೇಶ. ಅಲ್ಲಿ ಕೇವಲ ನಟರಾಗಿ ರೂಪುಗೊಳ್ಳುವುದಿಲ್ಲ, ನಟರು ತಂತ್ರಜ್ಞರಾಗುತ್ತಾರೆ. ತಂತ್ರಜ್ಞರು ನಟರಾಗುತ್ತಾರೆ. ಹಾಗಾಗಿ ನನಗೆ ಯಾವ ಕೆಲಸವೂ ಕಷ್ಟ ಅಂತ ಈವರೆಗೂ ಅನಿಸಿಲ್ಲ. ನಟಿಸುತ್ತಲೇ ನಿರ್ದೇಶನ ಮಾಡಿದೆ. ಕಿರುಚಿತ್ರಗಳ ನಿರ್ದೇಶನ ಮಾಡುತ್ತಿದ್ದ ನನಗೆ ಬಿ.ಸುರೇಶ ಮೆಗಾ ಧಾರಾವಾಹಿಯನ್ನು ನಿರ್ದೇಶಿಸಲು ಅವಕಾಶ ಕೊಟ್ಟರು. ಬರೋಬ್ಬರಿ ಮೂರು ವರ್ಷಗಳ ಕಾಲ 'ಮದರಂಗಿ' ಅನ್ನುವ ಧಾರಾವಾಹಿ ಪ್ರಸಾರ ಆಯಿತು. ಆನಂತರ ಝೀ ಕನ್ನಡ ವಾಹಿನಿಗಾಗಿ 'ಜನುಮದ ಜೋಡಿ' ಧಾರಾವಾಹಿಗೆ ಶುರುವಿನಲ್ಲಿ ನಿರ್ದೇಶನ ಮಾಡಿದೆ.

** 'ಚೌಕಾಭಾರ' ಕಲ್ಪನೆ ಹುಟ್ಟಿಕೊಂಡಿದ್ದು ಹೇಗೆ?*

ಧಾರಾವಾಹಿಯ ನಿರ್ದೇಶನದ ಜತೆಗೆ ಮತ್ತೇನೂ ಹೊಸದನ್ನು ಮಾಡಬೇಕು ಅನಿಸಿತು. ಹಾಗಾಗಿ ಕಿರುಚಿತ್ರ ಮಾಡಲು ಮುಂದಾದೆ. ಇಂಥದ್ದೊಂದು ಆಲೋಚನೆಯನ್ನು ನಟ ನೀನಾಸಂ ಸತೀಶ್, ಅಚ್ಯುತ್‌ಕುಮಾರ್, ಶರತ್ ಲೋಹಿತಾಶ್ವ ಜತೆ ಹಂಚಿಕೊಂಡೆ. ಅವರು ಪ್ರೋತ್ಸಾಹದ ಜತೆಗೆ ನಟಿಸಲು ಒಪ್ಪಿಕೊಂಡರು. ಸತೀಶ್ ಅವರ ಬ್ಯಾನರ್‌ನಲ್ಲಿ ಚಿತ್ರ ಮೂಡಿಬಂತು.

** ಹಲವು ದಾಖಲೆಗಳನ್ನು ಈ ಕಿರುಚಿತ್ರ ಬರೆದಿದೆ ಅನ್ನುವ ಮಾತಿದೆ. ಏನೆಲ್ಲ ದಾಖಲೆ ಬರೆದಿದೆ?*

ಇದನ್ನು ನಾನು ದಾಖಲೆ ಅಂತ ಕರೆಯುವುದಕ್ಕೆ ಇಷ್ಟಪಡುವುದಿಲ್ಲ, ನನ್ನಿಂದಾದ ಪ್ರಯತ್ನಗಳನ್ನು ನಾನು ಮಾಡಿದೆ. ಅದು ದಾಖಲೆ ಅನ್ನುವಂತಾಗಿದೆ. ಇದು 20 ನಿಮಿಷದ ಕಿರುಚಿತ್ರ. ಇದೇ ಮೊದಲ ಬಾರಿಗೆ ರಾಜ್ಯ ಪ್ರಶಸ್ತಿ ಮತ್ತು ಪ್ರತಿಷ್ಠಿತ ಫಿಲ್ಮ್‌ಫೇರ್ ಪ್ರಶಸ್ತಿ ವಿಜೇತರಾದ ಅಚ್ಯುತ್ ಕುಮಾರ್, ಶರತ್ ಲೋಹಿತಾಶ್ವ, ನಾಯಕಿ ಅಶ್ವಿನಿಗೌಡ ಮತ್ತು ನಟ ಮಂಜುನಾಥ್ ಹೆಗಡೆ, ಕಿರಣ್ ನಾಯಕ್, ನಂದಿನಿ ತಾರಾಗಣದಲ್ಲಿದ್ದಾರೆ. ಹಲವು ಚಿತ್ರಗಳಿಗೆ ಕ್ಯಾಮೆರಾ ಹಿಡಿದಿರುವ ಅದ್ವೈತ ಗುರುಮೂರ್ತಿ ಅವರ ಸಿನಿಮಾಟೋಗ್ರಫಿ ಚಿತ್ರಕ್ಕಿದೆ. ಪ್ರಥಮ ಬಾರಿಗೆ ಥಿಯೇಟರ್‌ನಲ್ಲಿ ಬಿಡುಗಡೆಗೊಂಡ ಕಿರುಚಿತ್ರವಿದು. ರಾಜ್ಯದ ನಾನಾಭಾಗಗಳಲ್ಲಿ ಐವತ್ತಕ್ಕೂ ಹೆಚ್ಚು ಪ್ರದರ್ಶನ ಕಂಡಿದೆ.

** 'ಚೌಕಭಾರ' ಕಿರುಚಿತ್ರದ ಮೂಲಕ ಏನನ್ನು ಹೇಳಲು ಹೊರಟಿದ್ದೀರಿ?*

ಹಲವು ಸಮಸ್ಯೆಗಳ ಕೊಳವೇ ಜೀವನ. ಅಂತಹ ಜೀವನದಲ್ಲಿ ಎದುರಾಗುವಂತಹ ಆರ್ಥಿಕ ಸಮಸ್ಯೆ ಹಾಗೂ ಮಾನಸಿಕ ಒತ್ತಡಗಳಿಂದ ಮನುಷ್ಯನು ಹೇಗೆ ತನ್ನ ಜೀವನವನ್ನು ಹಾಳು ಮಾಡಿಕೊಳ್ಳುತ್ತಾನೆ ಅನ್ನುವ ಕಥಾಹಂದರ ಇಲ್ಲಿದೆ. ಅದರಿಂದ ಪಾರಾಗಲು ಅವನು ಏನೆಲ್ಲ ಕಷ್ಟ ಪಡುತ್ತಾನೆ ಅನ್ನುವುದನ್ನು ತೋರಿಸುವ ಪ್ರಯತ್ನ ಮಾಡಿದ್ದೇನೆ.

** ಈ ಕಿರುಚಿತ್ರಕ್ಕೆ ರಾಜ್ಯ ಪ್ರಶಸ್ತಿ ಕೂಡ ಬಂತು. ಈ ಕುರಿತು ಏನು ಹೇಳುತ್ತೀರಿ?*

ನಮ್ಮ ಕಿರುಚಿತ್ರಕ್ಕೆ ರಾಜ್ಯ ಪ್ರಶಸ್ತಿ ಬರುತ್ತದೆ ಎಂದು ಕನಸಲ್ಲೂ ಕಂಡವನಲ್ಲ ನಾನು. ಈ ಗೆಲುವನ್ನು ನಾನು ಇಡೀ ನನ್ನ ತಂಡಕ್ಕೆ ಅರ್ಪಿಸುತ್ತೇನೆ. ಕಲಾವಿದರು ಮತ್ತು ತಂತ್ರಜ್ಞರು ನನ್ನ ಕನಸಿಗೆ ಬಣ್ಣ ತುಂಬಿದರು. ಅವರೆಲ್ಲರಿಗೂ ಗೆಲುವಿನಲ್ಲಿ ಸಮಪಾಲು ಇದೆ. ●

16 ⏮ ವಾಕ್ ಸ್ವಾತಂತ್ರ್ಯ

ಆರೋಗ್ಯಕರ ವಾತಾವರಣ ಇತ್ತು. ಇದಕ್ಕೆ ಉದಾಹರಣೆಯಾಗಿ ಅದೆಷ್ಟೋ ಘಟನೆಗಳನ್ನು ಉಲ್ಲೇಖಿಸಬಹುದಾದರೂ ಸದ್ಯ ಒಂದೆರಡನ್ನು ಜ್ಞಾಪಿಸಿಕೊಳ್ಳೋಣ. 2005ರಲ್ಲಿ ನೌಕಾಸೇನೆಯ ಮುಖ್ಯಸ್ಥನ ಪತ್ನಿಯ ಸಂಬಂಧಿಯೊಬ್ಬ ಯುದ್ಧ ರಹಸ್ಯಗಳನ್ನು ಬಹಿರಂಗಪಡಿಸಿದ ಘಟನೆ ನಡೆದಿತ್ತು. ಈ ವಿಚಾರ ತಿಳಿದ ಬಳಿಕವೂ ಆತ ರಾಜೀನಾಮೆ ನೀಡುವ ಪ್ರಾಮಾಣಿಕತೆ ಪ್ರದರ್ಶಿಸಿರಲಿಲ್ಲ, ಆದರೆ ಯುದ್ಧ ರಹಸ್ಯಗಳನ್ನು ದಾಟಿಸಿದ ಈ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾದ ನಂತರ ಆತ ರಾಜೀನಾಮೆ ನೀಡದೆ ಗತ್ಯಂತರವಿಲ್ಲ ಎಂದಾಯಿತು. 2012ರಲ್ಲಿ ಅಂದು ಸೇನಾ ಮುಖ್ಯಸ್ಥನಾಗಿದ್ದ ಜ। ವಿ.ಕೆ. ಸಿಂಗ್ ಪ್ರಧಾನಿಗೆ ಪತ್ರವೊಂದನ್ನು ಬರೆದು ಸೇನೆಯಲ್ಲಿ ಸಾಕಷ್ಟು ಬಿಡಿಭಾಗಗಳು, ಆಯುಧಗಳು ಇಲ್ಲದೆ ಉಂಟಾಗಿರುವ ಅಭದ್ರ ಪರಿಸ್ಥಿತಿ ಕುರಿತು ಗಮನ ಸೆಳೆದಿದ್ದರು. ಗುಟ್ಟಾಗಿ ಇರಿಸಲಾಗಿದ್ದ ಈ ವಿಷಯ ಸಂಸತ್ತಿನ ಸ್ಥಾಯಿ ಸಮಿತಿಗೆ ತಿಳಿದುಬಂದುದು ಪತ್ರ ಮಾಧ್ಯಮಗಳಿಗೆ ಸೋರಿಕೆಯಾದ ನಂತರವೆ. ಆಗ ಸಮಿತಿ ಕೂಡಲೆ ಸಭೆ ಸೇರಿ ಸರಕಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿತ್ತು.

ಆದರೆ ಇವತ್ತಿನ ಮೋದಿ ಸರ್ಕಾರದ ಆಡಳಿತದಲ್ಲಿ ಸೇನೆಯ ಕಾರ್ಯಾಚರಣೆಗಳನ್ನು ಪ್ರಶ್ನಿಸುವುದು ದೇಶದ್ರೋಹ ಎಂದಾಗಿಬಿಟ್ಟಿದೆ! ವಿಯೆಟ್ನಾಂ ಯುದ್ಧದ ಕಾಲದಲ್ಲಿ ಅಮೆರಿಕದ ಸರ್ಕಾರವೂ ಇದೇ ತೆರನಾದ ವಾದಗಳನ್ನು ಮುಂದಿಟ್ಟಿತ್ತು, ಆದರೆ ಸೇಮೂರ್ ಹರ್ಷ್ ಎಂಬ ದಿಟ್ಟ ಪತ್ರಕರ್ತನಿಂದಾಗಿ ಅಮೆರಿಕದ ಸೇನೆ ನಡೆಸಿದಂತಹ "ಮೈ ಲಾಯ್" ಮತ್ತಿತರ ಭೀಕರ ಹತ್ಯಾಕಾಂಡಗಳು ಬಯಲಾದವು. 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಯುದ್ಧದಲ್ಲಿ ಅಮೆರಿಕ ಸೋಲುತ್ತಿರುವ ಸತ್ಯವನ್ನು ಅರುಹುವ "ಪೆಂಟಗನ್ ಪೇಪರ್ಸ್"ಅನ್ನು ಪ್ರಕಟಿಸಿದಾಗ ಅಲ್ಲಿನ "ದೇಶಪ್ರೇಮಿ"ಗಳೆಲ್ಲ ಪತ್ರಿಕೆಯ ವಿರುದ್ಧ ಕೆಂಡಕಾರಿದರು. ಅಂತಿಮವಾಗಿ ಸುಪ್ರೀಂಕೋರ್ಟಿನ ಮೆಟ್ಟಿಲೇರಿದಾಗಷ್ಟೆ ಪ್ರಕರಣ ಇತ್ಯರ್ಥಗೊಂಡಿತು. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮಾಧ್ಯಮಗಳಿಗೆ ಸರಕಾರ ಅಥವಾ ಸೇನೆಯನ್ನು ಪ್ರಶ್ನಿಸುವ ಎಲ್ಲಾ ಹಕ್ಕುಗಳೂ ಇವೆ ಎಂಬ ಐತಿಹಾಸಿಕ ತೀರ್ಪು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂದ ದೊಡ್ಡ ಜಯವಾಗಿದೆ.



ಪ್ರಜಾಸತ್ತಾತ್ಮಕ ವ್ಯವಸ್ಥೆಯೊಂದರಲ್ಲಿ ಸೇನೆಯ ಉನ್ನತ ಮಟ್ಟ, ಸೈನಿಕರ ವೃತ್ತಿಪರತೆ, ಸ್ಥೈರ್ಯ, ಆತ್ಮವಿಶ್ವಾಸಗಳನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಸೇನೆಯ ಕ್ರಮಗಳನ್ನು ಪ್ರಶ್ನಿಸುವುದು ಪ್ರತಿಯೊಬ್ಬ ಪ್ರಜೆಯ ಹಕ್ಕಾಗಿದೆ. ಹಾಗೆಯೆ ಪ್ರಜಾಸತ್ತೆಯ ಉಳಿವಿನ ದೃಷ್ಟಿಯಲ್ಲಿ ಸರಕಾರವನ್ನು ಪ್ರಶ್ನಿಸುವ ಹಕ್ಕೂ ಅತ್ಯಗತ್ಯವಾಗಿದೆ. ಆದರೆ ಮೋದಿ ಸರ್ಕಾರ ಆ ಸ್ವಾತಂತ್ರ್ಯವನ್ನು, ಆ ಹಕ್ಕುಗಳನ್ನು ವ್ಯವಸ್ಥಿತವಾಗಿ ಕಸಿದುಕೊಳ್ಳುತ್ತಿದೆ. ಇಂದು ಹೆಚ್ಚಿನ ಮಾಧ್ಯಮಗಳು ಒಂದೊ ಅಂಬಾನಿಯಂತಹ ಮೋದಿ ನಿಕಟವರ್ತಿಗಳ ಒಡೆತನದಲ್ಲಿವೆ ಅಥವಾ ಆಯಕಟ್ಟಿನ ಜಾಗಗಳಲ್ಲಿ ಸಂಘಿಗಳನ್ನು ಕೂರಿಸಲಾಗಿದೆ; ಇನ್ನುಳಿದ ಮಾಧ್ಯಮಗಳು ಜಾಹೀರಾತು ಮತ್ತಿತರ ಪರೋಕ್ಷ ವಿಧಾನಗಳ ಮೂಲಕ ಸರ್ಕಾರದ ನಿಯಂತ್ರಣಕ್ಕೊಳಪಟ್ಟಿವೆ. ಪರಿಣಾಮವಾಗಿ ಅಂದು ಆಳುವ ಸರಕಾರಗಳನ್ನು ಪ್ರಶ್ನಿಸುತ್ತಿದ್ದ ಭಾರತೀಯ ಮಾಧ್ಯಮಗಳು ಇಂದು ಆ ಕೆಲಸವನ್ನು ಮಾಡುತ್ತಿಲ್ಲ, ಮೋದಿ ಸರ್ಕಾರದ ನೀತಿಗಳನ್ನು ಪ್ರಶ್ನಿಸುವ ಬರಹಗಳು ಕಸದಬುಟ್ಟಿ ಸೇರುತ್ತಿವೆ. ಟಿವಿ ಚರ್ಚೆಗಳ ವೇಳೆ ಪ್ರಶ್ನೆ ಹಾಕುವವರನ್ನು ಬೊಬ್ಬೆ ಹೊಡೆದು ಸುಮ್ಮನಿರಿಸಲಾಗುತ್ತಿದೆ. ಇನ್ನೊಂದು ಕಡೆ ದೇಶದ ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿದ ಸರ್ಕಾರಿ ಅಂಕಿಅಂಶಗಳನ್ನು ಪ್ರಶ್ನಿಸದೆ ಕಣ್ಣುಮುಚ್ಚಿ ಒಪ್ಪಿಕೊಳ್ಳುತ್ತಿರುವುದನ್ನು ಕಾಣಬಹುದು. ವಾಸ್ತವದಲ್ಲಿ ಬೆರಳೆಣಿಕೆಯ ಮಾಧ್ಯಮಗಳನ್ನು ಹೊರತುಪಡಿಸಿ ಮಿಕ್ಕೆಲ್ಲವೂ ಮೋದಿ ಸರ್ಕಾರದ ವಕ್ತಾರರಂತಾಗಿಬಿಟ್ಟಿವೆ. ಅವುಗಳ ವರದಿಗಳಿಗೂ ಸರ್ಕಾರದ ಅಧಿಕೃತ ಹೇಳಿಕೆಗಳಿಗೂ ವ್ಯತ್ಯಾಸವಿಲ್ಲ ಎಂದಾಗಿದೆ. ಉದಾಹರಣೆಗೆ 2015-16ರಲ್ಲಿ ಇರುವಷ್ಟು ನಿರುದ್ಯೋಗದ ಪ್ರಮಾಣ ಕಳೆದ ಐದು ವರ್ಷಗಳಲ್ಲಿ ಎಂದೂ ಇರಲಿಲ್ಲ ಎಂಬ ಕಹಿಸತ್ಯವನ್ನು ಎಷ್ಟು ಮಾಧ್ಯಮಗಳು ಪ್ರಕಟಿಸಿವೆ? "ಸಬ್ ಕಾ ಸಾಥ್ ಸಬ್ ಕಾ ವಿಕಾಸ್", "ಮೇಕ್ ಇನ್ ಇಂಡಿಯ" ಮುಂತಾದ ಘೋಷಣೆಗಳು ಏನಾದುವೆಂದು ಎಷ್ಟು ಮಾಧ್ಯಮಗಳು ಪ್ರಶ್ನಿಸಿವೆ?

ಭಾರತದ ಪ್ರಜಾಪ್ರಭುತ್ವಕ್ಕೆ ಎಂಥಾ ದೊಡ್ಡ ಕಂಟಕ ಎದುರಾಗಿದೆಯೆಂದು ಹೆಚ್ಚಿನ ಪ್ರಜೆಗಳಿಗೆ ತಿಳಿದಿರುವಂತಿಲ್ಲ. ಇದರ ಬಗ್ಗೆ ಸಾಕಷ್ಟು ಮುನ್ನೆಚ್ಚರಿಕೆ ಇತ್ತಾದರೂ ಅದರಿಂದ ಪ್ರಯೋಜನವಾಗಿಲ್ಲ. ಇತಿಹಾಸವನ್ನು ಮರೆತವರು ಅದರ ಪುನರಾವರ್ತನೆಯನ್ನು ಅನುಭವಿಸಬೇಕಾಗುತ್ತದೆ ಎಂದು ದಾರ್ಶನಿಕರು ಹೇಳಿರುವುದು ನಿಜವಾಗುತ್ತಿದೆ.

● ಸುರೇಶ್ ಭಟ್ ಬಾಕ್ರಬೈಲ್

ಗೆದ್ದೆತ್ತಿನ ಬಾಲ ಹಿಡಿದ ಯೋಗರಾಜ್ ಭಟ್

ಕನ್ನಡದ ಯಶಸ್ವಿ ನಿರ್ದೇಶಕರಲ್ಲಿ ಯೋಗರಾಜ್ ಭಟ್ ಕೂಡ ಒಬ್ಬರು. ಸಿನಿಮಾ ಗೆಲ್ಲಿಸುವ ಸಾಮರ್ಥ್ಯ ಅವರಿಗಿದ್ದರೂ, ಗೆದ್ದೆತ್ತಿನ ಬಾಲ ಹಿಡಿಯುವುದನ್ನು ಅವರು ನಿಲ್ಲಿಸುವಂತೆ ಕಾಣುತ್ತಿಲ್ಲ.

'ಲೂಸಿಯಾ' ಖ್ಯಾತಿಯ ಪವನ್‌ಕುಮಾರ್, 'ಗೂಗ್ಲಿ' ಚಿತ್ರದ ನಿರ್ದೇಶಕ ಪವನ್ ಒಡೆಯರ್ ಹೀಗೆ ಅನೇಕ ನಿರ್ದೇಶಕರು ಗೆದ್ದ ಕೂಡಲೇ ಅವರನ್ನೆಲ್ಲ ತಮ್ಮ ಬ್ಯಾನರ್‌ನಲ್ಲಿ ಸಿನಿಮಾ ಮಾಡುವಂತೆ ಕೇಳಿಕೊಂಡರು ಭಟ್. ಈಗ ಅದೇ ಮಾರ್ಗವನ್ನೇ 'ನೀರ್‌ದೋಸೆ' ನಿರ್ದೇಶಕ ವಿಜಯಪ್ರಸಾದ್‌ಗೆ ತೋರುತ್ತಿದ್ದಾರೆ. 'ನೀರ್‌ದೋಸೆ' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಕೋಟಿ ಕೋಟಿ ಹಣ ಬಾಚುತ್ತಿರುವುದನ್ನು ಕಂಡು ಭಟ್, ತಮ್ಮ ಬ್ಯಾನರ್‌ನಲ್ಲಿ ಸಿನಿಮಾ ಮಾಡಿಕೊಡುವಂತೆ ವಿಜಯಪ್ರಸಾದ್‌ಗೆ ಕೇಳಿಕೊಂಡಿದ್ದಾರೆ. ಇವರು ಕೂಡ ಸಿನಿಮಾ ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದಾರೆ. ಅಲ್ಲಿಗೆ ಯೋಗರಾಜ್ ಮೂವೀಸ್ ಬ್ಯಾನರ್ ಅಡಿಯಲ್ಲಿ ವಿಜಯಪ್ರಸಾದ್ ಮತ್ತೊಂದು ನೀರ್‌ದೋಸೆ ಹಾಕಲಿದ್ದಾರೆ.

"ಮೊನ್ನೆಯಷ್ಟೇ ಯೋಗರಾಜ್ ಭಟ್ ಅವರು ನನ್ನೊಂದಿಗೆ ಮಾತಾಡಿದರು. ಅವರ ಬ್ಯಾನರ್‌ನಲ್ಲಿ ಸಿನಿಮಾ ಮಾಡಬೇಕೆಂದು ಕೇಳಿಕೊಂಡರು. ದೊಡ್ಡ ನಿರ್ದೇಶಕರು ನೀಡಿರುವ ಆಫರ್ ಅನ್ನು ತಿರಸ್ಕರಿಸಲಿಕ್ಕೆ ಮನಸು ಒಪ್ಪಲಿಲ್ಲ. ಹಾಗಾಗಿ ಒಪ್ಪಿಕೊಂಡೆ" ಅಂದಿದ್ದಾರೆ ವಿಜಯಪ್ರಸಾದ್. ಮೂರ್‍ನಾಲ್ಕು ಕತೆಗಳನ್ನು ಭಟ್‌ಗೆ ಹೇಳಿದ್ದಾರಂತೆ ವಿಜಯ ಪ್ರಸಾದ್. ಕತೆಯೇ ಇಲ್ಲದೇ ಸಿನಿಮಾ ಮಾಡುವ ಯೋಗರಾಜ್ ಭಟ್‌ರು ಈಗ ಒಂದು ಕತೆಯನ್ನು ಆಯ್ಕೆ ಮಾಡಿಕೊಳ್ಳುವ ಸಂದಿಗ್ಧತೆಯಲ್ಲಿದ್ದಾರೆ.

ಮತ್ತೆ ಅಖಾಡಕ್ಕೆ ಇಳಿದ ಯೋಗೀಶ್

ಹೊಸ ರೀತಿಯ ಪಾತ್ರಗಳ ಮೂಲಕ ಗುರುತಿಸಿಕೊಂಡಿದ್ದ ಲೂಸ್‌ಮಾದ ಯೋಗೀಶ್, ಆನಂತರ ಸಿಕ್ಕ ಸಿಕ್ಕ ಪಾತ್ರಗಳನ್ನು ಒಪ್ಪಿಕೊಂಡು ಜನಪ್ರಿಯತೆಯನ್ನೇ ಕಳೆದುಕೊಂಡರು. ಈಗ ಆ ಅರಿವು ಅವರಿಗಾಗಿದೆ. ಹಾಗಾಗಿ ಮತ್ತೆ ಅಖಾಡಕ್ಕೆ ಇಳಿದಿದ್ದಾರೆ. ವಿಭಿನ್ನ ಪಾತ್ರಗಳ ಮೂಲಕ ಸ್ಟಾರ್‌ಪಟ್ಟದ ರೇಸ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಸದ್ಯ ಯೋಗಿ 'ಜಾನ್ ಜಾನಿ ಜನಾರ್ದನ್' ಸಿನಿಮಾದಲ್ಲಿ ನಟಿಸಿದ್ದಾರೆ. ಈ ಸಿನಿಮಾದಲ್ಲಿ ಅವರದ್ದು ಜಾನ್ ಪಾತ್ರ. ಅವರಿಲ್ಲಿ ಕುಂಟ (ಅಂಗವಿಕಲ)ನಾಗಿ ಕಾಣಿಸಿಕೊಂಡಿರುವುದು ವಿಶೇಷ.

ವಿಶಿಷ್ಟ ಪಾತ್ರಗಳ ಮೂಲಕವೇ ಯೋಗಿ ಈವರೆಗೂ ಗುರುತಿಸಿಕೊಂಡವರು. ಪುನೀತ್ ರಾಜ್‌ಕುಮಾರ್ ನಟನೆಯ 'ಹುಡುಗರು' ಸಿನಿಮಾದಲ್ಲಿ ಇವರು ಕಿವುಡನ ಪಾತ್ರ ನಿರ್ವಹಿಸಿ ಸೈ ಅನಿಸಿಕೊಂಡಿದ್ದರು. 'ದುನಿಯಾ' ಸಿನಿಮಾದ ಲೂಸ್‌ಮಾದ ಪಾತ್ರವನ್ನು ಮರೆಯುವುದಕ್ಕೆ ಸಾಧ್ಯವೇ ಇಲ್ಲ. 'ಜಾನ್ ಜಾನಿ ಜನಾರ್ದನ್' ಸಿನಿಮಾದ ಪಾತ್ರ ಕೂಡ ಇವರ ವೃತ್ತಿ ಬದುಕಿಗೆ ಮತ್ತೊಂದು ವಿಭಿನ್ನ ಪಾತ್ರ ಆಗಲಿದೆಯಂತೆ.



ತೆಲುಗು ಚಿತ್ರದಲ್ಲಿ ಶಿವರಾಜ್‌ಕುಮಾರ್

ಈವರೆಗೂ ರಾಜ್‌ಕುಮಾರ್ ಕುಟುಂಬ ಬೇರೆ ಭಾಷೆಯ ಚಿತ್ರಗಳಲ್ಲಿ ನಟಿಸಿಲ್ಲ. ಆಫರ್ ಬಂದರೂ ಅವರು ನಯವಾಗಿಯೇ ತಿರಸ್ಕರಿಸಿದ್ದಾರೆ. ಆದರೆ ಪ್ರಥಮ ಬಾರಿಗೆ ಶಿವರಾಜ್‌ಕುಮಾರ್ ತೆಲುಗು ಸಿನಿಮಾದಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ. ಇದು ಸ್ನೇಹಿತನ ಪ್ರೀತಿಯ ಒತ್ತಾಸೆಗಾಗಿ ಅನ್ನುವುದು ವಿಶೇಷ. ಶಿವರಾಜ್‌ಕುಮಾರ್ ಮತ್ತು ತೆಲುಗಿನ ಖ್ಯಾತ ನಟ ನಂದಮೂರಿ ಬಾಲಕೃಷ್ಣ ಸ್ನೇಹಿತರು. ಈ ಸ್ನೇಹಕ್ಕಾಗಿಯೇ ಬಾಲಕೃಷ್ಣ ಅವರ ನೂರನೇ ಸಿನಿಮಾ ತೆಲುಗಿನ 'ಗೌತಮಿಪುತ್ರ ಶಾತಕರ್ಣಿ'ಯಲ್ಲಿ ನಟಿಸಲು ಶಿವರಾಜ್‌ಕುಮಾರ್ ಒಪ್ಪಿಗೆ ಸೂಚಿಸಿದ್ದಾರೆ.

ಈ ಪಾತ್ರಕ್ಕೆ ಶಿವರಾಜ್ ಅವರನ್ನು ಆಹ್ವಾನಿಸಲು ಸ್ವತಃ ಬಾಲಕೃಷ್ಣ ಮತ್ತು ನಿರ್ದೇಶಕ ಕ್ರಿಶ್ ಬೆಂಗಳೂರಿಗೆ ಆಗಮಿಸಿದ್ದರು. ಶಿವರಾಜ್ ಮನೆಯಲ್ಲಿ ಭೇಟಿ ಮಾಡಿದ ಬಾಲಕೃಷ್ಣ ಪ್ರೀತಿಯ ಆಹ್ವಾನವನ್ನು ನೀಡಿದ್ದರು. ಗೆಳೆಯನ ಪ್ರೀತಿಗೆ ಸೋತಿದ್ದಾರೆ ಸೆಂಚ್ಯೂರಿ ಸ್ಟಾರ್.

'ಗೌತಮಿಪುತ್ರ ಶಾತಕರ್ಣಿ' ಇದೊಂದು ಐತಿಹಾಸಿಕ ಸಿನಿಮಾ. ನಂದಮೂರಿ ಬಾಲಕೃಷ್ಣ ಈ ಸಿನಿಮಾದಲ್ಲಿ ಶಾತಕರ್ಣಿಯಾಗಿ ಅಬ್ಬರಿಸಿದ್ದಾರೆ. ಈಗಾಗಲೇ ರಿಲೀಸ್ ಆಗಿರುವ ಚಿತ್ರದ ಟೀಸರ್ ಕೂಡ ಸಖತ್ ಕ್ರೇಜ್ ಕ್ರಿಯೇಟ್ ಮಾಡಿದೆ. ಶಾತವಾಹನರು ಮತ್ತು ಗ್ರೀಕರ ನಡುವೆ ನಡೆಯುವ ಸಮರದ ಕತೆ ಇಲ್ಲಿದೆ. ಕ್ರಿಶ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಮಾದಕ ಹಾಡಿಗೆ ಸೀಮಿತವಾದ ಗಾಳಿಪಟ ಹುಡುಗಿ

'ಗಾಳಿಪಟ' ಸಿನಿಮಾ ಸೇರಿದಂತೆ ಅನೇಕ ಚಿತ್ರಗಳಲ್ಲಿ ಉತ್ತಮವಾಗಿಯೇ ನಟಿಸಿದ್ದ ನೀತು, ಈಗ ಕೇವಲ ಮಾದಕ ಹಾಡಿಗೆ ಸೀಮಿತವಾಗುತ್ತಿದ್ದಾರೆ. ಕನ್ನಡದ ನಿರ್ದೇಶಕರು ಕೂಡ ನೀತು ಐಟಂ ಸಾಂಗ್‌ಗೆ ಕುಣಿಯುವ ಹುಡುಗಿ ಅಂದುಕೊಂಡಂತಿದೆ. ಈಗಾಗಲೇ ಹಲವು ಮಾದಕ ಗೀತೆಗಳಿಗೆ ಹೆಜ್ಜೆ ಹಾಕಿರುವ ನೀತು, ಒಂದು ವಾರದ ಹಿಂದೆಯಷ್ಟೇ 'ಮರಿ ಟೈಗರ್' ಅನ್ನುವ ಮತ್ತೊಂದು ಸಿನಿಮಾದಲ್ಲಿ ಸ್ಪೆಷಲ್ ಹಾಡಿಗೆ ನೃತ್ಯ ಮಾಡಿದ್ದಾರೆ. ಇಂತಹ ಹಾಡಿನಲ್ಲಿ ಕಾಣಿಸಿಕೊಳ್ಳುತ್ತಿರುವುದಕ್ಕೆ ಯಾವುದೇ ಬೇಸರವಿಲ್ಲ ಅನ್ನುವ ವಿಷಾದಮಿಶ್ರಿತ ಮಾತುಗಳನ್ನೂ ಆಡಿದ್ದಾರೆ. ಪಾತ್ರ ಹೇಗಿದ್ದರೂ ಅದನ್ನು ನಿಭಾಯಿಸಬಲ್ಲೆ ಅನ್ನುವ ವಿಶ್ವಾಸ ನೀತುಗೆ ಇದೆ. ಆದರೆ ಪಾತ್ರಗಳು ಮಾತ್ರ ಅವರನ್ನು ಹುಡುಕಿಕೊಂಡು ಬರುತ್ತಿಲ್ಲ. ಇದಕ್ಕೆ ಕಾರಣ, ಅವರು ದಪ್ಪಗಾಗಿರುವುದು. ಆರೋಗ್ಯ ಸಮಸ್ಯೆಯಿಂದಾಗಿ ತೂಕ ಹೆಚ್ಚಿಸಿಕೊಂಡಿರುವ ನೀತುಗೆ ಇದೇ ಶಾಪವಾಗಿದೆ. ಹಾಗಂತ ಅವರು ಸುಮ್ಮನೆ ಕೂತವರೂ ಅಲ್ಲ, ತುಳು ಸಿನಿಮಾ ರಂಗದಲ್ಲೂ ಗುರುತಿಸಿಕೊಳ್ಳಲು ಪ್ರಯತ್ನಿಸಿದರು. ಕಳೆದ ಬಿಗ್‌ಬಾಸ್‌ನಲ್ಲೂ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು. ಆದರೂ ಸಿನಿಮಾ ರಂಗ ಮಾತ್ರ ಅವರ ಕೈಹಿಡಿಯುತ್ತಿಲ್ಲ. ಹಾಗಾಗಿ ಐಟಂ ಸಾಂಗ್‌ಗೆ ಸಿಗುತ್ತಿರುವ ಆಹ್ವಾನವನ್ನು ಒಲ್ಲದ ಮನಸ್ಸಿನಿಂದಲೇ ಸ್ವೀಕರಿಸುತ್ತಿದ್ದಾರೆ.

ಶುಭಾಗೆ ಮತ್ತೊಂದು ಶುಭಾರ…

ಶುಭಾ ಪೂಂಜಾ ಎಲ್ಲಿಗೆ ಹೋದರು ಅನ್ನುವ ಪ್ರಶ್ನೆಗೆ ಉತ್ತರ ಸಿ… ಕಷ್ಟ. ಅವರು ಇತ್ತೀಚೆಗೆ ಸಿನಿಮಾರಂಗದಲ್ಲೂ ಕಾಣಿಸಿಕೊಳ್ಳುತ್ತಿಲ್ಲ. … ವರ್ಷಗಳ ಹಿಂದೆ ಮುಹೂರ್ತ ಕಂಡ 'ಸಮೋಸ' ಸಿನಿಮಾ ಕೂಡ … ನಿಂತಿದೆ. ಅಲ್ಲಿಂದ ಪೂಜಾ ನಾಪತ್ತೆ ಆಗಿದ್ದರು. ಈಗ ಅಜ್ಞಾತವಾಸ ಮುಗಿಸಿ… ಮತ್ತೆ ವಾಪಸ್ಸಾಗಿದ್ದಾರೆ. ಗೀತರಚನೆಕಾರ ನಾಗೇಂದ್ರ ಪ್ರಸಾದ್ ನಿರ್ದೇ… ಹೊಸ ಸಿನಿಮಾದಲ್ಲಿ ಅವರು ನಾಯಕಿಯಾಗಿ ನಟಿಸುತ್ತಿದ್ದಾರೆ. ಎರಡು … ಹಿಂದೆ ಸದ್ದಿಲ್ಲದೇ ಚಿತ್ರೀಕರಣ ಕೂಡ ಶುರುವಾಗಿದೆ. ಹೊಸ ರೀತಿಯ… ಅದಾಗಿದ್ದರಿಂದ ನಟಿಸಲು ಒಪ್ಪಿಕೊಂಡಿದ್ದಾರಂತೆ ಶುಭಾ.

"ನನಗೆ ಆಫರ್ ಇಲ್ಲ ಅನ್ನುವುದು ಸುಳ್ಳು. ಅನೇಕ ಕತೆಗಳನ್ನು ಕೇ… ಆದರೆ ಯಾವ್ದೂ ಇಷ್ಟವಾಗಲಿಲ್ಲ. ದುಡ್ಡಿಗಾಗಿ ನಾನು ಸಿನಿಮಾ ಮಾಡು… ಅಲ್ಲ. ಹಾಗಾಗಿ ಸುಮ್ಮನಿದ್ದೆ. ನಾಗೇಂದ್ರ ಪ್ರಸಾದ್ ಅವರ ಚಿತ್ರದಲ್ಲಿ … ರೀತಿಯ ಕ್ಯಾರೆಕ್ಟರ್ ಸಿಕ್ಕಿದೆ. ಹಾಗಾಗಿ ಒಪ್ಪಿಕೊಂಡೆ" ಅನ್ನುವುದು … ಮಾತು. ಈ ಸಿನಿಮಾದಲ್ಲಿ ಬಹುತೇಕ ಹೊಸಬರಿಗೆ ಮಣೆ ಹಾಕ… ನಿರ್ದೇಶಕರು. ದೀಪಕ್ ಈ ಸಿನೆಮಾದ ಮೂಲಕ ಸಿನಿಮಾ ರಂಗಕ್ಕೆ ಪಾದ… ಮಾಡಲಿದ್ದಾರೆ. ನಿರ್ದೇಶಕ ಕೂಡ ಒಂದು ಪ್ರಮುಖ ಪಾತ್ರದಲ್ಲಿ ನಟಿಸು…



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com